20 May 2026 Wednesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬದುಕಿನಲ್ಲಿ ಸದಾ ಉತ್ಸಾಹವನ್ನು ಜೀವಂತವಾಗಿಟ್ಟುಕೊಂಡವರ ಬಳಿ ಹತಾಶೆಯ ಭಾವ ಎಂದಿಗೂ ಸುಳಿಯುವದಿಲ್ಲ!

-ಸ್ನೇಹಾ ಆನಂದ್

info.varthaman@gmail.com



ಅಭಿವೃದ್ಧಿ ಶೂನ್ಯ, ಭ್ರಷ್ಟಾಚಾರವೇ ಸರ್ಕಾರದ ಸಾಧನೆ — ಪುಟ ಸಂ. 2



ಪಿಎಂ ಸೂರ್ಯಘರ್ ಅನುಷ್ಠಾನಕ್ಕೆ ಸೆಸ್ಕ್ ಎಂಡಿ ಸೂಚನೆ — ಪುಟ ಸಂ. 3



ವೈಫಲ್ಯಗಳೇ ಕಾಂಗ್ರೆಸ್ ಸರ್ಕಾರದ ಸಾಧನೆ: ನಾಗೇಂದ್ರ ವ್ಯಂಗ್ಯ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN | Volume: 69 | Issue: 175 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ತಿರುಪತಿ ತಿಮ್ಮಪ್ಪನ ದರ್ಶನ ಪಡೆದ ಡಿಕೆಶಿ



**ಬೆಂಗಳೂರು:** ಅಧಿಕಾರ ಹಸ್ತಾಂತರ ಚರ್ಚೆ ನಡುವೆಯೇ ತುಮಕೂರಿನಲ್ಲಿ ಸಾಧನಾ ಸಮಾವೇಶ ಆಯೋಜಿಸಲಾಗಿದೆ. ಇದೇ ಸಂದರ್ಭದಲ್ಲಿ ಮಂಗಳವಾರ ಬೆಳಗ್ಗೆಯೇ ಡಿಸಿಎಂ ಡಿ.ಕೆ ಶಿವಕುಮಾರ್ ಪತ್ನಿ ಸಮೇತ ತಿರುಪತಿ ತಿಮ್ಮಪ್ಪನ ದರ್ಶನ ಪಡೆದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು 3 ವರ್ಷಗಳಾದ ದಿನವೇ ಡಿಸಿಎಂ ದೇವರ ದರ್ಶನ ಪಡೆದರು. ಡಿಕೆಶಿ ಆಪ್ತ ಶಾಸಕ ರಂಗನಾಥ್ ಕೂಡ ಜತೆಗಿದ್ದರು. ಆರು ವರ್ಷದ ನಂತರ, ತಿರುಪತಿ ತಿಮ್ಮಪ್ಪನ ದರ್ಶನವನ್ನು ಡಿಸಿಎಂ ಪಡೆದಿದ್ದಾರೆ. ಈ ಸಮಾವೇಶ ಹಲವು ಕಾರಣಕ್ಕೆ ಕುತೂಹಲಕ್ಕೆ ಕಾರಣವಾಗಿದೆ.

## ಜಂಬೂಸವಾರಿಯಿಂದ ಕಂಜನ್ ಆನೆಗೆ ಕೊಕ್

**ಕೊಡಗು:** ದುಬಾರೆ ಆನೆ ಶಿಬಿರದಲ್ಲಿ ಮಾರ್ತಾಂಡ ಆನೆ ಮೇಲೆ ದಾಳಿ ಮಾಡಿದ್ದ ಕಂಜನ್ ಆನೆಯನ್ನು ದಸರಾ ಜಂಬೂಸವಾರಿಯಿಂದ ಹೊರಗಿಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ದಸರಾ ಆನೆ ಕಂಜನ್ ಮತ್ತು ಮಾರ್ತಾಂಡ ಆನೆ ನಡುವೆ ನಡೆದ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ ಮೃತಪಟ್ಟ ಹಿನ್ನೆಲೆಯಲ್ಲಿ ಸಚಿವ ಈಶ್ವರ್ ಖಂಡ್ರೆ ಶೋಕ ವ್ಯಕ್ತಪಡಿಸಿದ್ದಾರೆ. ಪುಟ 2ಕ್ಕೆ

# ಸಾರಿಗೆ ಮುಷ್ಕರಕ್ಕೆ 'ಹೈ ಬ್ರೇಕ್'

## ಸಂಘಟನೆ ಜೊತೆ ಚರ್ಚೆಗೆ ರಾಜ್ಯಸರ್ಕಾರಕ್ಕೆ ಹೈಕೋರ್ಟ್ ಆದೇಶ

**ಬೆಂಗಳೂರು:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್ಆರ್‌ಟಿಸಿ) ನೌಕರರ ಮುಷ್ಕರಕ್ಕೆ ಹೈಕೋರ್ಟ್ ನಿರ್ಬಂಧ ವಿಧಿಸಿದೆ. ಮುಷ್ಕರಕ್ಕೆ ಕರೆ ನೀಡಿದ್ದ ಟ್ರೇಡ್ ಯೂನಿಯನ್‌ಗಳ ಜಂಟಿ ಕ್ರಿಯಾ ಸಮಿತಿಗೆ ಕೋರ್ಟ್ ಶಾಕ್ ನೀಡಿದೆ.

ನಗರದ ಮನೆ ಕೆಲಸದ ಸಿ.ವೇದಾವತಿ ಹಾಗೂ ಕಟ್ಟಡ ಕಾರ್ಮಿಕ ಎಚ್.ವಿ.ಶ್ರೀಧರ ಅವರು ಮುಷ್ಕರವನ್ನು ಆಕ್ಷೇಪಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಮುಷ್ಕರವನ್ನು ನಿರ್ಬಂಧಿಸಿ ಆದೇಶಿಸಿದೆ.


ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ವಿಕ್ರಮ್ ಹುಯಿಲಗೋಳ ಅವರು ವಾದಿಸಿ, ಕೂಡಲೇ ಮುಷ್ಕರ ಹಿಂಪಡೆಯಲು ಜಂಟಿ ಕ್ರಿಯಾ ಸಮಿತಿಗೆ ನಿರ್ದೇಶಿಸಬೇಕು ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಮನವಿಯನ್ನು ಮಾನ್ಯ ಮಾಡಿದ ನ್ಯಾಯಪೀಠ, ಸರ್ಕಾರ ಸಾರಿಗೆ ಸಂಘಟನೆಗಳ ಜೊತೆ ಚರ್ಚೆ ನಡೆಸಲು ಮುಂದಾಗಬೇಕು ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ತಾರಾನಾಥ ಪೂಜಾರಿ ಅವರಿಗೆ ನಿರ್ದೇಶಿಸಿತು.

ರಾಜ್ಯ ಸರ್ಕಾರ ಮತ್ತು ಸಾರಿಗೆ ಸಂಘಟನೆಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

**ಆಕ್ಷೇಪ:** ಸಾರಿಗೆ ಮುಷ್ಕರ ಮೇ 20ರಿಂದ ನಡೆಯಲಿದೆ ಎಂದು ಕರೆ ನೀಡಲಾಗಿದೆ. ಆದರೆ, ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳೂ ಇದೇ 18ರಿಂದ 25ರವರೆಗೆ ನಡೆಯಲಿವೆ. ಗ್ರಾಮೀಣ ಮತ್ತು ಅರೆ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳು ಸಾರ್ವಜನಿಕ ಬಸ್‌ಗಳನ್ನೇ ಅವಲಂಬಿಸಿದ್ದಾರೆ. ಮುಷ್ಕರದಿಂದ ಗಂಭೀರ ಸಮಸ್ಯೆ ಪುಟ 2ಕ್ಕೆ





### ನೌಕರರ ಬೇಡಿಕೆಗಳೇನು?

- ಸಾರಿಗೆ ನೌಕರರಿಗೆ ಶೇ.25 ರಷ್ಟು ವೇತನ ಹೆಚ್ಚಳ ಮಾಡಬೇಕು ಎಂಬ ಬೇಡಿಕೆಗೆ ಸರ್ಕಾರ ನೀಡಿದ್ದು 12.5 ಹೆಚ್ಚಳ ಮಾತ್ರ
- 2024ರ ಜನವರಿಯಿಂದ ಶೇ.25ರಷ್ಟು ವೇತನ ನೀಡಬೇಕು. ಬಾಕಿ ವೇತನ ಪೂರ್ಣ ಪ್ರಮಾಣದಲ್ಲಿ ಪಾವತಿಯಾಗಬೇಕು
- 26 ತಿಂಗಳ ಬಾಕಿ ವೇತನ ಒಂದೇ ಕಂತಿನಲ್ಲಿ ಕೊಡಬೇಕು. ಭತ್ಯೆ ಹೆಚ್ಚಳ ಮಾಡಬೇಕು
- ಕೋವಿಡ್‌ನಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಕ್ಷಣ ಪರಿಹಾರ ನೀಡಿ
- ಆಡಳಿತಾತ್ಮಕ ಸಮಸ್ಯೆಗಳನ್ನು ಬಗೆಹರಿಸಲು 1 ತಿಂಗಳು ಗಡವು
- 26 ತಿಂಗಳ ಬಾಕಿ ಹಣ 1,272 ಕೋಟಿ ಬಿಡುಗಡೆ ಮಾಡಬೇಕು.

## ಮುಷ್ಕರಕ್ಕೆ ಸಾರಿಗೆ ನೌಕರರ ಸಂಘದ ಬೆಂಬಲ ವಾಪಸ್

**ಬೆಂಗಳೂರು:** ಸಾರಿಗೆ ನೌಕರರ ಮುಷ್ಕರದಿಂದ ಹಿಂದೆ ಸರಿಯಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನೌಕರರ ಸಂಘ ನಿರ್ಧರಿಸಿದೆ ಎಂದು ಸಂಘದ ಅಧ್ಯಕ್ಷ ಕೆ.ಆರ್ ಜಗದೀಶ್ ತಿಳಿಸಿದ್ದಾರೆ. ಈ ಮೂಲಕ ಮುಷ್ಕರಕ್ಕೆ ಕರೆ ಕೊಟ್ಟ ಜಂಟಿ ಕ್ರಿಯಾ ಸಮಿತಿಗೆ ಶಾಕ್ ಎದುರಾಗಿದೆ.

ನಿನ್ನೆ ಸಂಧಾನ ಸಭೆಯಲ್ಲೂ ಭಾಗಿಯಾಗಿದ್ದ ಕೆಎಸ್‌ಆರ್‌ಟಿಸಿ ನೌಕರರ ಸಂಘ ಮಂಗಳವಾರ ಏಕಾಏಕಿ ಮುಷ್ಕರದಿಂದ ಹಿಂದೆ ಸರಿಯುವ ನಿರ್ಧಾರ ಪ್ರಕಟಿಸಿದೆ. ಅಲ್ಲದೇ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರನ್ನ ಭೇಟಿಯಾಗಿ ತಮ್ಮ ನಿರ್ಧಾರ ತಿಳಿಸುವುದಾಗಿ ಹೇಳಿದೆ. ಜೊತೆಗೆ ತನ್ನ ಸಂಘಟನೆ ನೌಕರರಿಗೆ ಮುಷ್ಕರದಲ್ಲಿ ಭಾಗಿಯಾಗದಂತೆ ಮನವಿ ಮಾಡಿದೆ.

ಈಗಾಗಲೇ ಜಂಟಿ ಕ್ರಿಯಾ ಸಮಿತಿ ಕರೆ ನೀಡಿರುವ ಮುಷ್ಕರ ಸಂಬಂಧ ಮೇ 18 ರಂದು ಕಾರ್ಮಿಕ ಆಯುಕ್ತರು ಸಂಧಾನ ಸಭೆ ನಡೆಸಿ, ಜಂಟಿ ಕ್ರಿಯಾ ಸಮಿತಿಯ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದು ಬಗೆಹರಿಸುವುದಾಗಿ ತಿಳಿಸಿದ್ದಾರೆ. ಜೊತೆಗೆ ಕಾಲಾವಕಾಶ ಕೋರಿ ಮುಂದಿನ ಸಭೆಯನ್ನು ಮೇ 25 ಕ್ಕೆ ನಿಗದಿಪಡಿಸಿದ್ದಾರೆ. ಹೀಗಾಗಿ ವ್ಯವಸ್ಥಾಪಕ ನಿರ್ದೇಶಕರ ಮೇಲೆ ನಂಬಿಕೆ ಮತ್ತು ಭರವಸೆಯಿಟ್ಟು, ನಮ್ಮ ಸಂಘದ ಪದಾಧಿಕಾರಿಗಳೆಲ್ಲರೂ ಪುಟ 2ಕ್ಕೆ

# ದೇಶಕ್ಕೆ ಕರ್ನಾಟಕ ಅಭಿವೃದ್ಧಿಯೇ ಮಾದರಿ

## ಗುಜರಾತ್ ಅಭಿವೃದ್ಧಿ ಟೊಳ್ಳು । ಮೋದಿ ವಿರುದ್ಧ ಸಿದ್ದರಾಮಯ್ಯ ವಾಗ್ದಾಳಿ

**ತುಮಕೂರು:** ದೇಶದಲ್ಲಿಯೇ ಜಿಎಸ್‌ಟಿ ಆದಾಯ ಮತ್ತು ಜಿಡಿಪಿಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಆರ್ಥಿಕ ಮತ್ತು ಸಾಮಾಜಿಕವಾಗಿಯೂ ರಾಜ್ಯ ನಂ.1 ಸ್ಥಾನದಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೋದಿ ಇದುವರೆಗೆ ಎಲ್ಲದಕ್ಕೂ ಗುಜರಾತ್ ಮಾದರಿ ಅಂತ ಹೇಳುತ್ತಿದ್ದರು. ಆದರೆ ಈಗ ಕರ್ನಾಟಕವೇ ದೇಶಕ್ಕೆ ಮಾದರಿ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಕಾಂಗ್ರೆಸ್ ಸರ್ಕಾರ ಮೂರು ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ಸಾಧನಾ ಸಮಾವೇಶದಲ್ಲಿ ಮಾತನಾಡಿದ ಸಿದ್ದರಾಮಯ್ಯ, ತಮ್ಮ ಸರ್ಕಾರವು ಅಭಿವೃದ್ಧಿ ಕಾರ್ಯಗಳು ಮತ್ತು ವ್ಯವಸ್ಥಿತ ಸುಧಾರಣೆಗಳನ್ನು ಕೈಗೊಳ್ಳುವುದರ ಜೊತೆಗೆ 1.40 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಕಲ್ಯಾಣ ಖಾತರಿ ಜಾರಿಗೆ ತಂದಿದೆ ಎಂದು ಹೇಳಿದರು.



ಗುಜರಾತ್‌ನಲ್ಲಿ ಬಾಡಿಗೆ ಕಟ್ಟಲಾಗದ ಮಹಿಳೆ ಮೇಲೆ ಅತ್ಯಾಚಾರ ನಡೆದಿದೆ.

ಮೋರ್ಬಿ ಘಟನೆಯ ನಂತರ 'ಗುಜರಾತ್ ಅಭಿವೃದ್ಧಿ ಮಾದರಿ' ಟೊಳ್ಳಾಗಿದೆ. ಆದರೆ ಕಲ್ಯಾಣ ಆಧಾರಿತ 'ಕರ್ನಾಟಕ ಮಾದರಿ' ಉತ್ತಮವಾಗಿದೆ ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಮೋದಿ 2001ರಿಂದ 2014 ರವರೆಗೆ ಗುಜರಾತ್ ಮುಖ್ಯಮಂತ್ರಿಯಾಗಿದ್ದರು. 2014ರಿಂದ ಪ್ರಧಾನಿಯಾಗಿದ್ದಾರೆ. ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಳೆದ 25 ವರ್ಷಗಳಿಂದ ಗುಜರಾತ್ ಅನ್ನು ಪ್ರತಿನಿಧಿಸಿದ್ದರು. ಗುಜರಾತ್‌ನಲ್ಲಿ ಸಾಮಾನ್ಯ ಜನರ ಜೀವನ ಯಾವ ಸ್ಥಿತಿಗೆ ತಲುಪಿದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಈ ದೇಶದ ಆಡಳಿತವನ್ನು ನಾವು ಅನಕ್ಷರಸ್ಥ ಮತ್ತು ಕ್ರೂರಿಗಳ ಕೈಗಳಿಗೆ ಒಪ್ಪಿಸಿದ್ದೇವೆ ಎಂಬುದನ್ನು ಅರಿತರೆ ನಡುಕವನ್ನುಂಟು ಮಾಡುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

ಗುಜರಾತ್ ರಾಜ್ಯದಲ್ಲಿ ಪ್ರತಿ ಚದರ ಮೀಟರ್‌ಗೆ ರೂ. 1 ರಿಂದ ರೂ. 32 ರ ದರದಲ್ಲಿ ಅದಾನಿ ಗ್ರೂಪ್ ಆಫ್ ಕಂಪನಿಗಳಿಗೆ 15,946 ಎಕರೆ ಭೂಮಿಯನ್ನು ನೀಡಲಾಗಿದೆ ಎಂದು ಆರೋಪಿಸಲಾಗಿದೆ. ಹಣದುಬ್ಬರ, ನಿರುದ್ಯೋಗ ಮತ್ತು ಆಪಾದಿತ ಕೋಮು ರಾಜಕೀಯದ ಬಗ್ಗೆ ಮುಖ್ಯಮಂತ್ರಿ ಬಿಜೆಪಿ ಮತ್ತು ಮೋದಿ ವಿರುದ್ಧ ದಾಳಿ ನಡೆಸಿದರು.

# ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೋದಿ ಹೊಣೆ

**ತುಮಕೂರು:** ನೀಟ್ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೋದಿ ಸರ್ಕಾರ ನೇರ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರ್ಣಗೊಂಡ ಅಂಗವಾಗಿ ತುಮಕೂರಿನಲ್ಲಿ ನಡೆದ ಸಾಧನಾ ಸಮಾವೇಶ ಉದ್ದೇಶಿಸಿ ಅವರು ಮಾತನಾಡಿದರು.

ನರೇಂದ್ರ ಮೋದಿ ಅವರು ಅಮೆರಿಕದಲ್ಲಿ ಟ್ರಂಪ್ ಬಾಲ ಹಿಡಿದುಕೊಂಡು ಸುತ್ತಾಡುತ್ತಿದ್ದರು. ಟ್ರಂಪ್ ಇರಾನ್ ಮೇಲೆ ದಾಳಿ ಮಾಡಿದ್ದಕ್ಕೆ ಮೋದಿ ಒಮ್ಮೆಯೂ ವಿಷಾದಿಸಲಿಲ್ಲ. ಇಂದಿನ ಬೆಲೆ ಏರಿಕೆಗೂ ಕೂಡ ನರೇಂದ್ರ ಮೋದಿ ಅವರೇ ನೇರ ಕಾರಣ ಎಂದು ವಾಗ್ದಾಳಿ ನಡೆಸಿದರು.

ನರೇಂದ್ರ ಮೋದಿ ಅವರು ಪ್ರಧಾನಿ ಆದ ಮೇಲೆ ಲಾಭ ಪಡೆದುಕೊಂಡದ್ದು ಅಂಬಾನಿ, ಅದಾನಿ ಇಬ್ಬರು ಮಾತ್ರ. 2014ರಲ್ಲಿ ಗೌತಮ್ ಅದಾನಿ ಸಂಪತ್ತು 16 ಸಾವಿರ ಕೋಟಿ ಇತ್ತು. ಇಂದು 8 ಲಕ್ಷ ಕೋಟಿ ಸಂಪತ್ತು ಹೊಂದಿದ್ದಾರೆ. ಹಾಗೇ ಮುಕೇಶ್ ಅಂಬಾನಿ ಕೂಡ ಆರ್ಥಿಕವಾಗಿ ಬೆಳವಣಿಗೆ ಆಗಿದ್ದಾರೆ. ಆದರೆ ಸಾಮಾನ್ಯ ಮತ್ತು ಮಧ್ಯಮ ವರ್ಗದವರಿಗೆ ಲಾಭ ಆಗಿಲ್ಲ. ಇಷ್ಟು ದಿನ ಮೋದಿ ಮೋದಿ ಅಂತ ಕೂಗಿ ವೋಟ್ ಹಾಕಿದವರಿಗೆಲ್ಲ ಇಂದು ಭ್ರಮನಿರಸನವಾಗಿದೆ ಎಂದು ಕುಟುಕಿದರು.



### ನಿರುದ್ಯೋಗ ಸಮಸ್ಯೆ ಹೆಚ್ಚಳ

ಬಿಜೆಪಿ ಅಧಿಕಾರಕ್ಕೆ ಬಂದರೆ ವಾರ್ಷಿಕ 2 ಕೋಟಿ ಉದ್ಯೋಗ ಸೃಷ್ಟಿ ಮಾಡ್ತಿವಿ ಎಂದು ಮೋದಿ ಭರವಸೆ ನೀಡಿದ್ದರು. ಕಳೆದ 12 ವರ್ಷಗಳಲ್ಲಿ 24 ಕೋಟಿ ಉದ್ಯೋಗ ಸೃಷ್ಟಿ ಮಾಡಬೇಕಿತ್ತು. ಆದರೆ ಮೋದಿ ಅವರು ಒಂದೇ ಒಂದು ಉದ್ಯೋಗವನ್ನೂ ಇದುವರೆಗೆ ಸೃಷ್ಟಿ ಮಾಡಿಲ್ಲ. ದೇಶದಲ್ಲಿಂದು ನಿರುದ್ಯೋಗ ಪ್ರಮಾಣ 67ಕ್ಕೆ ಏರಿಕೆಯಾಗಿದೆ. ಪುಟ 2ಕ್ಕೆ

## ಜೈಲಿನಲ್ಲಿ ದರ್ಶನ್ ಭೇಟಿ ಮಾಡಿದ ಪತ್ನಿ, ಪುತ್ರ

**ಬೆಂಗಳೂರು:** ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ನಟ ದರ್ಶನ್ ಅವರನ್ನು ಪತ್ನಿ ವಿಜಯಲಕ್ಷ್ಮಿ ಹಾಗೂ ಪುತ್ರ ವಿನೀಶ್ ಮಂಗಳವಾರ ಸಂಜೆ ಭೇಟಿ ಮಾಡಿ ಕೆಲಕಾಲ ಮಾತುಕತೆ ನಡೆಸಿದರು.



ಪತ್ನಿ ಮತ್ತು ಪುತ್ರನನ್ನು ಕಂಡು ದರ್ಶನ್ ಭಾವುಕರಾದರು. ಮನೆಯಿಂದ ತಂದಿದ್ದ ಹಣ್ಣುಗಳನ್ನು ದರ್ಶನ್‌ಗೆ ಪತ್ನಿ ನೀಡಿದರು. ವಿಜಯಲಕ್ಷ್ಮಿ ಮತ್ತು ದರ್ಶನ್ ಮದುವೆಯಾಗಿ ಮೇ 19ಕ್ಕೆ 23 ವರ್ಷ ತುಂಬಲಿದೆ. ಹೀಗಾಗಿ, ನೇರ ಭೇಟಿಗೆ ಅವಕಾಶ ಕಲ್ಪಿಸಿ ಪುಟ 2ಕ್ಕೆ

## ಮತ್ತೆ ಇಂಧನ ದರ ಏರಿಕೆ

**ನವದೆಹಲಿ:** ಕೇಂದ್ರ ಸರ್ಕಾರ ದೇಶದ ಜನರಿಗೆ ಮತ್ತೆ ಮಂಗಳವಾರ ಬೆಳ್ಳಂಬೆಳಗ್ಗೆ ದೊಡ್ಡ ಶಾಕ್ ನೀಡಿದೆ. ತೈಲ ಕಂಪನಿಗಳು ಮತ್ತೆ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಪ್ರತಿ ಲೀ.ಗೆ ಸುಮಾರು 90 ಪೈಸೆ ಹೆಚ್ಚಿಸಿವೆ. ಇದು ಒಂದು ವಾರದೊಳಗೆ 2ನೇ ಬಾರಿ ಏರಿಕೆಯಾಗಿದೆ.


ಮೇ 15ರಂದು ಶುಕ್ರವಾರ ಪ್ರತಿ ಲೀ.ಗೆ 3 ಪುಟ 2ಕ್ಕೆ



## ಕಾದಾಟದಲ್ಲಿ ಗಾಯಗೊಂಡಿದ್ದ ಮಾರ್ತಾಂಡ ಆನೆ ಸಾವು

**ಮಡಿಕೇರಿ:** ದುಬಾರೆ ಸಾಕಾನೆ ಶಿಬಿರದಲ್ಲಿ ಕಂಜನ್ ಮತ್ತು ಮಾರ್ತಾಂಡ ಆನೆಗಳ ನಡುವೆ ನಿನ್ನೆ ನಡೆದ ಕಾದಾಟದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮಾರ್ತಾಂಡ ಆನೆ ಚಿಕಿತ್ಸೆ ಫಲಕಾರಿಯಾಗದೇ ಮಂಗಳವಾರ ಸಾವನ್ನಪ್ಪಿದೆ.

ಸೋಮವಾರ ಕಂಜನ್ ಆನೆ ಹಾಗೂ ಮಾರ್ತಾಂಡ ಆನೆ ಕಾದಾಟದಲ್ಲಿ ಪ್ರವಾಸಕ್ಕೆ ಬಂದಿದ್ದ ಮಹಿಳೆ ಬಲಿಯಾಗಿದ್ದರು. ಕಾದಾಟದಲ್ಲಿ ಕಂಜನ್ ಆನೆ ಮಾರ್ತಾಂಡ ಆನೆಯ ಹೊಟ್ಟೆ, ಕಿವಿ ಹಾಗೂ ಇತರೆ ಭಾಗಗಳಿಗೆ ತಿವಿದು ಗಾಯ ಗೊಳಿಸಿತ್ತು. ತೀವ್ರ ಗಾಯಗೊಂಡಿದ್ದ ಮಾರ್ತಾಂಡ ಆನೆಗೆ ದುಬಾರೆ ಸಾಕಾನೆ ಶಿಬಿರದಲ್ಲಿ ಪುಟ 2ಕ್ಕೆ



## ದೇಶಕ್ಕೆ ಶೀಘ್ರವೇ ಕಾದಿದೆ 'ಆರ್ಥಿಕ ಆಘಾತ': ರಾಗಾ

**ನವದೆಹಲಿ:** ದೇಶದಲ್ಲಿ ಶೀಘ್ರದಲ್ಲಿಯೇ ದೊಡ್ಡ 'ಆರ್ಥಿಕ ಆಘಾತ' ಎದುರಾಗಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಹೇಳಿದರು.



ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆದರೆ 'ಅದಾನಿ, ಅಂಬಾನಿ ಅಥವಾ ಮೋದಿ'ಗೆ ಅದು ಎಫೆಕ್ಟ್ ಆಗುವುದಿಲ್ಲ. ಬದಲಾಗಿ ಯುವಕರು, ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಮುಂದೆ ತುಂಬಾ ಕಠಿಣಾತಿಕಠಿಣ ದಿನಗಳು ಬರುತ್ತಿವೆ ಎಂದು ವ್ಯಾಪಾರಿಗಳಿಗೆ ಎಚ್ಚರಿಸಿದರು.

ಹಲವು ವರ್ಷಗಳಿಂದ ನಾವು ನೋಡಿರದ ದೊಡ್ಡ ಆರ್ಥಿಕ ಆಘಾತ ಎದುರಾಗಲಿದೆ. ಆದರೆ, ಪ್ರಧಾನಿ ಮೋದಿ ಅವರು ತಾವೇ ಹೇಳಿದ ಕಠಿಣ ಕ್ರಮಗಳ ಕರೆಯನ್ನು ಅವರೇ ಪಾಲಿಸುತ್ತಿಲ್ಲ. ಮೋದಿ ಅವರು ದೇಶದ ಜನ ವಿದೇಶ ಪ್ರವಾಸ ಹೋಗಬೇಡಿ ಎಂದು ಹೇಳಿದರು. ಆದರೆ ಅವರೇ ಪ್ರಪಂಚ ಪುಟ 2ಕ್ಕೆ

# ರೈತರ ಸಮಾಧಿ ಮೇಲೆ ಪ್ರದರ್ಶನ

## ರಾಜ್ಯ ಸರ್ಕಾರದ ಸಾಧನಾ ಸಮಾವೇಶಕ್ಕೆ ಕೇಂದ್ರ ಸಚಿವ ಕುಮಾರಸ್ವಾಮಿ ಕಿಡಿ

**ಬೆಂಗಳೂರು:** ರೈತರ ಸಮಾಧಿ ಮೇಲೆ ರಾಜ್ಯ ಸರ್ಕಾರ ಪ್ರದರ್ಶನ ಮಾಡುತ್ತಿದೆ ಎಂದು ಸರ್ಕಾರದ ಸಾಧನಾ ಸಮಾವೇಶಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸರ್ಕಾರದಿಂದ ಸಾಧನಾ ಸಮಾವೇಶ ಮಾಡುತ್ತಿದ್ದಾರೆ. ಸಮರ್ಪಣಾ ಸಮಾವೇಶ ಮಾಡುತ್ತಿದ್ದಾರೆ. ಕಳೆದ ವರ್ಷವೂ ಸಮಾವೇಶ ಮಾಡಿದ್ದರು. ಬಣ್ಣ ಬಣ್ಣದ ಚಿತ್ರ ಹಾಕಿ ಪ್ರಚಾರ ಮಾಡಿದ್ದಾರೆ. 1.54 ಲಕ್ಷ ಹಕ್ಕು ಪತ್ರ ವಿತರಣೆ ಮಾಡುತ್ತೇನೆ ಅಂದಿದ್ದಾರೆ. ನಮ್ಮ ಹತ್ರ ಮತ್ತು ಜಿಲ್ಲಾ ಕೇಂದ್ರಗಳಿಗೆ ಜನ ಅರ್ಜಿ ಹಿಡಿದು ಅಲೆಯುತ್ತಿದ್ದಾರೆ. ಅದೇನೋ 6ನೇ ಭೂ ಗ್ಯಾರಂಟಿ ಕೊಡ್ತಾ ಇದ್ದೀನಿ ಅಂತಿದ್ದಾರೆ ಎಂದು ಲೇವಡಿ ಮಾಡಿದರು.

ಸಚಿವರೊಬ್ಬರು ರೈತರ ಆತ್ಮಹತ್ಯೆ ಕಡಿಮೆ ಆಗಿದೆ ಅಂತಾರೆ. ಎನ್‌ಸಿಆರ್ ಸಂಸ್ಥೆ ಸರ್ವೇ ಪ್ರಕಾರ 2023ರಲ್ಲಿ 2,400 ರೈತರು, 2024ರಲ್ಲಿ 2,900 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರ ಆತ್ಮಹತ್ಯೆಯಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ. ಎರಡು ವರ್ಷಗಳಲ್ಲಿ 5 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ಅವರ ಸಾಧನೆ ಎಂದು ವಾಗ್ದಾಳಿ ನಡೆಸಿದರು.





ಈ ಸರ್ಕಾರ ವಿಫಲತೆಯನ್ನು ಮುಚ್ಚಿಡಲು ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಅಭಿವೃದ್ಧಿ ಏನಾಗಿದೆ. ನಿನ್ನೆ 10 ನಿಮಿಷ ಮಳೆ ಬಂದಿದ್ದಕ್ಕೆ ಹಲವಾರು ಭಾಗದಲ್ಲಿ ನೀರು ನಿಂತು ಸಮಸ್ಯೆ ಆಗಿದೆ. ಈ ಸಮಾವೇಶಕ್ಕೆ ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡುತ್ತಿದ್ದಾರೆ. ಸಮಾವೇಶಕ್ಕೆ ಜನರನ್ನು ಕರೆಸೋಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದಾರೆ ಎಂದು ಟೀಕಿಸಿದರು.

ಅಖಂಡ ಶ್ರೀನಿವಾಸಮೂರ್ತಿ ಮನೆಗೆ ಕುಮಾರಸ್ವಾಮಿ ಹೋಗಿ ಮಾತುಕತೆ ನಡೆಸಿದರು. ಬಳಿಕ ಮಾತನಾಡಿ, ಪುಟ 2ಕ್ಕೆ

# ಇಂದು ದೇಶದಾದ್ಯಂತ ಮೆಡಿಕಲ್ ಶಾಪ್ ಬಂದ್

**ಬೆಂಗಳೂರು:** ರಾಜ್ಯದಾದ್ಯಂತ ಬುಧವಾರ ಮೆಡಿಕಲ್ ಶಾಪ್‌ಗಳು ಬಂದ್ ಆಗಲಿವೆ. ಬ್ಲಿಂಕಿಟ್, ಸ್ವಿಗ್ಗಿ, ಜೋಮಾಟೋ ಇತರೆ ಆನ್‌ಲೈನ್ ವೇದಿಕೆಗಳ ಮೂಲಕ ಔಷಧಿಗಳ ಖರೀದಿ, ಮಾರಾಟ ನಿಲ್ಲಿಸುವಂತೆ ಆಗ್ರಹಿಸಿ ಅಖಿಲ ಭಾರತ ಔಷಧಿ ವ್ಯಾಪರಿಗಳ ಸಂಘದಿಂದ ದೇಶದಾದ್ಯಂತ ಮೆಡಿಕಲ್ ಬಂದ್‌ಗೆ ಕರೆ ಕೊಟ್ಟಿದೆ. ಕರ್ನಾಟಕದಲ್ಲೂ ಬಂದ್ ಬೆಂಬಲಿಸಿ ಮೆಡಿಕಲ್‌ಗಳನ್ನ ಬಂದ್ ಮಾಡಲಿದ್ದಾರೆ.

ಕರ್ನಾಟಕದಲ್ಲಿಯೂ ಒಂದು ದಿನದ ಮಟ್ಟಿಗೆ ಸಂಪೂರ್ಣವಾಗಿ ಮೆಡಿಕಲ್‌ಗಳನ್ನ ಮುಚ್ಚಲು, ಕರ್ನಾಟಕ ಔಷಧಿ ಮಾರಾಟ ವ್ಯಾಪಾರಿಗಳ ಸಂಘದಿಂದ ಕರೆ ಕೊಡಲಾಗಿದೆ. ರಾಜ್ಯದಲ್ಲಿ 26,000 ಕ್ಕೂ ಹೆಚ್ಚು ಮೆಡಿಕಲ್‌ಗಳಿವೆ. ಮೇ 20ರಂದು ರಾತ್ರಿ 12 ಗಂಟೆಯಿಂದಲೇ ಬಂದ್‌ಗೆ ಕರೆ ನೀಡಲಾಗಿದೆ. ವಿವಿಧ ಆಪ್‌ಗಳಿಂದ ಔಷಧಿಗಳ ಮಾರಾಟ ಆಗ್ತಿದೆ. ಇದು ನೋಂದಣಿ




ಪಡೆದ ಮೆಡಿಕಲ್ ಮಾಲೀಕರಿಗೆ ಹೊಡೆತ ಬೀಳ್ತಿದೆ ಅಂತ ಮೆಡಿಕಲ್ ಮಾಲೀಕರು ಅಳಲು ತೋಡಿಕೊಂಡಿದ್ದಾರೆ.

ಆನ್‌ಲೈನ್‌ನಲ್ಲಿ ಔಷಧಿ ಮಾರಾಟಕ್ಕೆ ಕೇಂದ್ರ ಸರ್ಕಾರ ಕೋವಿಡ್ ಸಮಯದಲ್ಲಿ ಅನುಮತಿಯನ್ನ ನೀಡಿತ್ತು. ಅದನ್ನೇ ಮುಂದುವರೆಸಿದ ಕೆಲ ಆಪ್ ಆಧಾರಿತ ಕಂಪನಿಗಳು ಬ್ಯುಸಿನೆಸ್ ಮಾಡಿಕೊಂಡಿವೆ. ಇದನ್ನು ವಿರೋಧಿಸಿ ಬಂದ್ ಗೆ ಕರೆ ನೀಡಲಾಗಿದೆ.

# ಅಭಿವೃದ್ಧಿ ಶೂನ್ಯ, ಭ್ರಷ್ಟಾಚಾರವೇ ಸರ್ಕಾರದ ಸಾಧನೆ

## ಸಾಧನೆ ಸಮಾವೇಶ ಬದಲಾಗಿ ಭ್ರಷ್ಟಾಚಾರದ ಸಮಾವೇಶ ಎಂದಾಗಬೇಕಿತು: ಡಾ.ಸಿ.ಎನ್.ಅಶ್ವತ್ಥ ನಾರಾಯಣ

ರಾಮನಗರ: ತುಮಕೂರಿನಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಸರ್ಕಾರದ ಮೂರು ವರ್ಷಗಳ ಸಾಧನೆ ಸಮರ್ಪಣೆಯ ಸಮಾವೇಶ ಎಂಬುದಕ್ಕೆ ಬದಲಾಗಿ, ಭ್ರಷ್ಟಾಚಾರದ ಸಮಾವೇಶ, ದಿವಾಳಿತನದ ಸಮಾವೇಶ ಅಂತ ಹೆಸರಿಟ್ಟಿಕೊಳ್ಳ ಬೇಕಿತ್ತು ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ ಟೀಕಾ ಪ್ರಹಾರನಡೆಸಿದರು.

ನಗರದಲ್ಲಿ ಜಿಲ್ಲಾ ಬಿಜೆಪಿ ಆಯೋಜಿಸಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಗ್ಯಾರಂಟಿ ಹೆಸರಿನಲ್ಲಿ ರಾಜ್ಯ ಆರ್ಥಿಕ ದಿವಾಳಿತನಕ್ಕೆ ಕಾರಣವಾಗಿದೆ. ಅಭಿವೃದ್ಧಿ ಶೂನ್ಯವಾಗಿದೆ. ಬೆಲೆ ಏರಿಕೆ, ಶೇಕಡ 60ರಷ್ಟು ಕಮಿಷನ್, ಭ್ರಷ್ಟಾಚಾರ, ರೈತರು – ಸರ್ಕಾರಿ ಅಧಿಕಾರಿಗಳ ಆತ್ಮಹತ್ಯೆ, ವೋಟ್ ಬ್ಯಾಂಕ್ ರಾಜಕಾರಣ ಮತ್ತು ತುಷ್ಟೀಕರಣ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ 3 ವರ್ಷಗಳ ದೊಡ್ಡ ಸಾಧನೆ ಎಂದು ವಾಗ್ದಾಳಿ ನಡೆಸಿದರು.

**ನಿಗಮ, ಮಂಡಳಿಗಳಿಗೆ ಶೇ70 ಅನುದಾನ ಕಡಿತ**

ನಿಗಮ ಮಂಡಳಿಗಳಿಗೆ ಶೇಕಡ 70ರಷ್ಟು ಅನುದಾನ ಕಡಿತ ಮಾಡಲಾಗಿದೆ. ಬಿಜೆಪಿ ಸರ್ಕಾರದಲ್ಲಿ ಕೈಗಾರಿಕೆಗಳ ಪ್ರಗತಿ ಶೇಕಡ 15ರಷ್ಟು ಇತ್ತು, ಈಗ ಕಾಂಗ್ರೆಸ್ ಸರ್ಕಾರದಲ್ಲಿ ಅದು 5ಕ್ಕೆ ಕುಸಿದಿದೆ. ಯೂರಿಯಾವನ್ನು ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ, ರೈತರು ಆತ್ಮಹತ್ಯ ಮಾಡಿಕೊಳ್ಳುತ್ತಿದ್ದಾರೆ. ಈ ಸರ್ಕಾರದ ಅವಧಿಯಲ್ಲಿ ಸುಮಾರು 2800 ಮಂದಿ ರೈತರು ಆತ್ಮಹತ್ಯ ಮಾಡಿಕೊಂಡಿದ್ದಾರೆ. ಮಹಿಳೆಯರ ಮೇಲೆ ದೌರ್ಜನ್ಯ, ಅತ್ಯಾಚಾರ ಸಾಮಾನ್ಯ ಎನ್ನುವಂತಾಗಿದೆ. ಇದೊಂದು ಆತ್ಮಸಾಕ್ಷಿ ಇಲ್ಲದ ಸರ್ಕಾರ ಎಂದು ಜರಿದರು.

ಈ ಹಿಂದೆ ಯಾವ ಸರ್ಕಾರದ ಅವಧಿಯಲ್ಲಿಯೂ ಸರ್ಕಾರಿ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ. ಆದರೀಗ ವರ್ಗಾವಣೆ ಕಿರುಕುಳ ತಾಳಲಾರದೆ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರೈತರು ಮಾತ್ರವಲ್ಲ ಸರ್ಕಾರಿ ಅಧಿಕಾರಿಗಳು ಆತ್ಮಹತ್ಯೆ ಹಾದಿ ಹಿಡಿದಿದ್ದಾರೆ. ಇದು ಕಾಂಗ್ರೆಸ್ ಸರ್ಕಾರದ ಆತ್ಮಹತ್ಯೆ ಗ್ಯಾರಂಟಿ ಕೊಡುಗೆ ಎಂದು ದೂರಿದರು.



**ಭ್ರಷ್ಟಾಚಾರವೇ ಸಾಧನೆ!**

ಕಂಡ ಕಂಡಲ್ಲಿ ಕಲೆಕ್ಷನ್ ಪಾಯಿಂಟ್ ಮಾಡಿಕೊಂಡಿರುವ ಕಾಂಗ್ರೆಸ್ ಸರ್ಕಾರ ಹಗಲು ದರೋಡೆಯಲ್ಲಿ ತೊಡಗಿಸಿಕೊಂಡಿದೆ. ರಾಜ್ಯ ಸರ್ಕಾರ ಗುತ್ತಿಗೆದಾರರಿಗೆ 37 ಸಾವಿರ ಕೋಟಿಗೂ ಅಧಿಕ ಬಾಕಿ ಉಳಿಸಿಕೊಂಡಿದೆ. ಗುತ್ತಿಗೆ ಕೊಡಲು, ಹಣ ಪಾವತಿ ಮಾಡಲು ಕಮಿಷನ್ ಪಡೆಯುತ್ತಿದೆ. ಈ ಹಿಂದೆ ಬಿಜೆಪಿ ಸರ್ಕಾರದ ಮೇಲೆ ಶೇಕಡ 40ರಷ್ಟು ಕಮಿಷನ್ ಆಪಾದನೆ ಮಾಡಿದ್ದರು. ಆದರೀಗ ಕಾಂಗ್ರೆಸ್ ಸರ್ಕಾರ ನೇರವಾಗಿಯೇ ಕನಿಷ್ಠ ಶೇಕಡ 60ರಷ್ಟು ಕಮಿಷನ್ ಪಡೆಯುತ್ತಿದೆ. ಶೇಕಡ 100ರಷ್ಟು ಭ್ರಷ್ಟಾಚಾರ ಮಾಡುವುದೇ ಕಾಂಗ್ರೆಸ್ ಸರ್ಕಾರದ ಸಾಧನೆ ಎಂದು ಲೇವಡಿ ಮಾಡಿದರು.

**ರಾಜ್ಯ ದಿವಾಳಿ!**

ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯವನ್ನು ದಿವಾಳಿ ಮಾಡಿದೆ. ಸರ್ಕಾರಿ ನೌಕರರಿಗೂ ವೇತನ ಕೊಡಲು ಖಜಾನೆಯಲ್ಲಿ ಹಣ ಇಲ್ಲದಂತಾಗಿದೆ. ರೈತರು, ಸರ್ಕಾರಿ ಅಧಿಕಾರಿಗಳು, ಬಾಣಂತಿಯರ ಸಾವಿಗೆ ಕಾರಣವಾಗಿರುವ ಕೊಲೆಗೆಡುಕರ ಸರ್ಕಾರವಾಗಿದೆ. ಕಾಂಗ್ರೆಸ್ ಸರ್ಕಾರ 3 ವರ್ಷಗಳ ಸಾಧನೆ ಸಮರ್ಪಣೆಯ ಸಮಾವೇಶದ ಬದಲು ಭ್ರಷ್ಟಾಚಾರದ ಸಮಾವೇಶ, ದಿವಾಳಿತನದ ಸಮಾವೇಶ ಅಂತ ಹೆಸರಿಟ್ಟಿ ಕೊಳ್ಳಬೇಕಿತ್ತು ಎಂದು ಟೀಕಿಸಿದರು.

**ವರ್ಗಾವಣೆ ದಂಧೆ**

ಗೃಹ ಇಲಾಖೆ ಸೇರಿ ಹಲವು ಇಲಾಖೆಗಳಲ್ಲಿ ಬಹಿರಂಗವಾಗಿಯೇ ವರ್ಗಾವಣೆ ದಂಧೆ ನಡೆಯುತ್ತಿದೆ. ರಕ್ಷಕರೇ ಭಕ್ಷಕರಾಗುವ ಸ್ಥಿತಿ ನಿರ್ಮಾಣವಾಗಿದೆ.

### ತೈಲ ಬೆಲೆ ಹೆಚ್ಚಿಸಿದ್ದು ಯಾರು?

**ಅಮೇರಿಕಾ – ಇರಾನ್ ಯುದ್ಧದ ಪರಿಣಾಮ ಬೇರೆ ದೇಶಗಳಲ್ಲಿ ಪೆಟ್ರೋಲ್ , ಡೀಸೆಲ್ , ಗ್ಯಾಸ್ ಸಿಗುತ್ತಿಲ್ಲ. ಭಾರತದಲ್ಲಿ ಅವುಗಳ ಕೊರತೆಯಾಗದಂತೆ ಕೇಂದ್ರ ಸರ್ಕಾರ ಎಚ್ಚರ ವಹಿಸಿದೆ. ಈಗಷ್ಟೇ ತೈಲಬೆಲೆಗಳ ದರವನ್ನು ಹೆಚ್ಚಿಸಲಾಗಿದೆ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಾಕ್ಷಣ ಶೇ.25ರಷ್ಟು ಇದ್ದ ವ್ಯಾಟ್ ಅನ್ನು ಶೇ.31 ಕ್ಕೆ ಹೆಚ್ಚಿಸಿತು. 5 – 6 ತೈಲ ಬೆಲೆ ಹೆಚ್ಚಿಸಿದವರು ಯಾರು ಎಂದು ಪ್ರಶ್ನೆ ಮಾಡಿದರು.**

ಪೊಲೀಸ್ ಇಲಾಖೆಯ 90 ಅಧಿಕಾರಿಗಳು ಡಕಾಯಿತ ಪ್ರಕರಣಗಳಲ್ಲಿ ಅಮಾನತ್ತುಗೊಂಡಿದ್ದಾರೆ. ಇದು ರಾಜ್ಯದ ಕಾನೂನು ಸುವ್ಯವಸ್ಥೆಗೆ ಹಿಡಿದ ಕೈಗನ್ನಡಿ ಎಂದು ದೂರಿದರು.

**ಆತಂಕವಾದಿಗಳೆಲ್ಲ ಇವರಿಗೆ ಸಹೋದರರು!**

ರಾಮೇಶ್ವರಂ ಕೆಫೆ ಮೇಲೆ ಬಾಂಬ್ ಹಾಕಿದವರು, ಕುಕ್ಕರ್ ಬಾಂಬ್ ಇಟ್ಟವರು, ಪೊಲೀಸ್ ಠಾಣೆಗೆ ಬೆಂಕಿ ಇಟ್ಟವರೆಲ್ಲರು ಕಾಂಗ್ರೆಸ್ ಸರ್ಕಾರದ ಸಹೋದರರು. ಅವರ ಮೇಲಿನ ಪ್ರಕರಣ ಹಿಂಪಡೆಯಲು ರಾಜ್ಯ ಸರ್ಕಾರ ಮುಂದಾದಾಗ ನ್ಯಾಯಾಲಯ ಮಧ್ಯ ಪ್ರವೇಶಿಸಿ ತಡೆಯಾಜ್ಞೆ ನೀಡಿತು. ಇದೆಲ್ಲ ನೋಡಿದರೆ ರಾಜ್ಯದಲ್ಲಿ ರಾಜಕೀಯ ಪ್ರೇರಿತ ಮತ್ತು ರಾಜಕೀಯ ದುರದ್ದೇಶಿತ ಆಡಳಿತ ನಡೆಯುತ್ತಿರುವುದು ಸ್ಪಷ್ಟವಾಗಿದೆ. ವೋಟ್ ಬ್ಯಾಂಕ್ ರಾಜಕಾರಣ ಮತ್ತು ತುಷ್ಟೀಕರಣ ಕಾಂಗ್ರೆಸ್ ಸರ್ಕಾರದ ದೊಡ್ಡ ಸಾಧನೆ ಎಂದು ವ್ಯಂಗ್ಯವಾಡಿದರು.

### ಬಿಡದಿ ಎಐ ಸಿಟಿಗೆ ಭೂಸ್ವಾಧೀನ: ಅಭಿವೃದ್ಧಿಗೆ ವಿರೋಧವಿಲ್ಲ, ರೈತ ಹಿತ ಮುಖ್ಯ

ರಾಮನಗರ: ಬಿಡದಿ ಬಳಿಯಲ್ಲಿ ಉದ್ದೇಶಿತ ಎಐ ಸಿಟಿ ಯೋಜನೆಗೆ, ಅಭಿವೃದ್ಧಿ ಕಾರ್ಯಗಳಿಗೆ ನಮ್ಮ ವಿರೋಧ ಇಲ್ಲ. ಆದರೆ, ರೈತರ ಹಿತವೂ ಮುಖ್ಯವಾಗುತ್ತದೆ. ಅವರನ್ನು ವಿಶ್ವಾಸಕ್ಕೆ ಪಡೆದು ಯೋಜನೆಯನ್ನು ಮುಂದುವರೆಸಬೇಕು ಎಂದು ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಪ್ರತಿಕ್ರಿಯಿಸಿದರು.

ನಗರಕ್ಕೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಯಾವುದೇ ಯೋಜನೆಗಳಾಗಿ ಅನುಷ್ಠಾನ ಮಾಡುವ ಮುನ್ನ ಭೂಮಾಲೀಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ಸಂಪನ್ಮೂಲ ಕ್ರೂಢೀಕರಿಸಬೇಕು. ಯೋಜನೆ ಭೂಸ್ವಾಧೀನ ಪಡಿಸಿಕೊಳ್ಳುವ ರೈತರಿಗೆ 2013ರ ಕಾನೂನು ಪ್ರಕಾರ ಪರಿಹಾರ ಕೊಡಬೇಕು. ಎನ್ ಜಿಟಿ ಪ್ರಕಾರ ನೀರಾವರಿ ಪ್ರದೇಶ ಸ್ವಾಧೀನ ಪಡಿಸಿಕೊಳ್ಳಬಾರದು ಎಂದರು. ಬೆಂಗಳೂರು ನಗರ ಸುತ್ತಮುತ್ತ 35 ಸಾವಿರ ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಈಗಿರುವ ಕಂಪನಿಗಳೇ ಜಾಗ ಖಾಲಿ ಮಾಡುತ್ತಿವೆ. ಸಾಲ ಪಡೆದು ಯೋಜನೆ ಜಾರಿಗೊಳಿಸಿದರೆ ಪ್ರಯೋಜನ ಇಲ್ಲ. ಆ ಸಾಲವನ್ನು ಮರು ಪಾವತಿಸುವ ಶಕ್ತಿಯೂ ಇರಬೇಕು. ಈಗಲೇ ರಾಜ್ಯ ಸರ್ಕಾರ ಏಳೂವರೆ ಲಕ್ಷ ಕೋಟಿ ಸಾಲ ಮಾಡಿದ್ದು, ಪ್ರತಿ ವರ್ಷ 53ಸಾವಿರ ಕೋಟಿ ಬಡ್ಡಿ ಪಾವತಿಸುತ್ತಿದೆ. ಸರ್ಕಾರದಲ್ಲಿ ನೌಕರರಿಗೆ ವೇತನ ಕೊಡಲು ಹಣ ಇಲ್ಲ. ಹಾಗಾಗಿ ಯಾವುದೇ ಯೋಜನೆಗಳನ್ನು ಜವಾಬ್ದಾರಿಯುತವಾಗಿ ಮಾಡಬೇಕು ಎಂದು ಅಶ್ವತ್ಥ ನಾರಾಯಣ ಹೇಳಿದರು.

**ಅಧಿಕಾರಕ್ಕಾಗಿ ಗುದ್ದಾಟ**

ಈ ಸರ್ಕಾರದಲ್ಲಿ ಅಧಿಕಾರಕ್ಕಾಗಿ ಗುದ್ದಾಟ ನಡೆದಿದೆ. ಒಬ್ಬರು ಕುರ್ಚಿ ಉಳಿಸಿಕೊಳ್ಳಲು, ಮತ್ತೊಬ್ಬರು ಕುರ್ಚಿ ಕಸಿದುಕೊಳ್ಳಲು ಹೋರಾಟ ನಡೆಸುತ್ತಿದ್ದಾರೆ. ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯರವರು 50 ವರ್ಷಗಳ ರಾಜಕೀಯ ಅನುಭವ ಉಳ್ಳವರು. ನಾಡಿನ ಜನರಿಗೆ ಬೇಡ ಅಹಿಂದ ವರ್ಗಕ್ಕೆ ನಿಮ್ಮಕೊಡುಗೆ ಏನು ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಮಾಜಿ ಅಧ್ಯಕ್ಷ ದೇವರಾಜು, ರಾಮನಗರ ತಾಲೂಕು ಅಧ್ಯಕ್ಷ ಗೌತಮ್ ಗೌಡ, ಮಾಗಡಿ ತಾಲೂಕು ಅಧ್ಯಕ್ಷ ಪ್ರಸಾದ್ ಗೌಡ, ಮುಖಂಡರಾದ ಸುರೇಶ್ , ಎಸ್.ಆರ್.ನಾಗರಾಜ್, ಪದ್ಮನಾಭ ಮತ್ತಿತರರು ಇದ್ದರು.

**ನೀಟ್: ತಪ್ಪಿತಸ್ಥರ ವಿರುದ್ಧ ಕ್ರಮ**

ನೀಟ್ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಪ್ರಕರಣದ ಬಗ್ಗೆ ಮಾಧ್ಯಮ ಪ್ರತಿನಿಧಿಗಳು ಡಾ.ಸಿ.ಎನ್. ಅಶ್ವಥನಾರಾಯಣ ಅವರ ಗಮನ ಸೆಳೆದಾಗ ಪ್ರತಿಕ್ರಿಯಿಸಿದ ಅವರು, ಕೇಂದ್ರ ಸರ್ಕಾರ ಸಿಬಿಐ ತನಿಖೆ ಆದೇಶಿಸಲಾಗಿದೆ. ತಪ್ಪಿತಸ್ಥರನ್ನು ನಿರ್ದಾಕ್ಷಿಣ್ಯವಾಗಿ ಬಂಧಿಸುವ ಕೆಲಸ ನಡೆದಿದೆ. ಮೆರಿಟ್ ಗೆ ಧಕ್ಕೆ ಯಾಗದಂತೆ ಮರು ಪರೀಕ್ಷೆಗೆ ಕ್ರಮ ವಹಿಸಲಾಗಿದೆ. ಆದರೆ, ಕೆಪಿಎಸ್ಸಿಯಲ್ಲಿ ನಡೆದಿರುವ ಹಗರಣದಲ್ಲಿ ರಾಜ್ಯಸರ್ಕಾರ ತನಿಖೆ ಮಾಡಿಸಿ ತಪ್ಪಿತಸ್ಥರನ್ನು ಬಂಧಿಸುವ ಕೆಲಸ ಮಾಡಿಲ್ಲ. ಇಲ್ಲಿ ಇಲಾಖೆ ಪರೀಕ್ಷೆಗಳು ವಜಾಗೊಳ್ಳುತ್ತವೆ, ಇಲ್ಲ ಮುಂದೂಡಲ್ಪಡುತ್ತವೆ ಎಂದರು.

**ಮೊದಲ ಪುಟದಿಂದ**

### ಕರ್ನಾಟಕ ಅಭಿವೃದ್ಧಿಯೇ ಮಾದರಿ

2019ರಿಂದ 2023ರವರೆಗೆ ಕರ್ನಾಟಕವನ್ನು ಆಳಿದ ಬಿಜೆಪಿ ಸರ್ಕಾರವನ್ನು ಗುರಿಯಾಗಿಸಿಕೊಂಡ ಸಿಎಂ ಸಿದ್ದರಾಮಯ್ಯ, ರಾಜ್ಯದಲ್ಲಿಯೂ ಬಿಜೆಪಿ ದ್ವೇಷವನ್ನು ಹರಡುತ್ತಿದೆ ಮತ್ತು ಆರ್ಥಿಕತೆಯನ್ನು ದುರ್ಬಲಗೊಳಿಸುತ್ತಿದೆ ಎಂದು ಆರೋಪಿಸಿದರು.

ದೇಶದಲ್ಲಿ ವಾಣಿಜ್ಯ ಎಲ್‌ಪಿಜಿ ಬೆಲೆಗಳು ತೀವ್ರವಾಗಿ ಏರಿವೆ. ಕೇಂದ್ರದ ನೀತಿಗಳು ಹಣದುಬ್ಬರವನ್ನು ಇನ್ನಷ್ಟು ಹದಗೆಡಿಸಿವೆ. ಮೋದಿಯಿಂದಾಗಿ, ಪೆಟ್ರೋಲ್– ಡೀಸೆಲ್ ಮತ್ತು ಅನಿಲ ಬೆಲೆಗಳು ಆಕಾಶವನ್ನು ಮುಟ್ಟಿವೆ ಎಂದು ಆರೋಪಿಸಿದರು.

2023ರ ವಿಧಾನಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್ ಸರ್ಕಾರ ನೀಡಿದ್ದ ಭರವಸೆಗಳನ್ನು ಈಡೇರಿಸಿದೆ. 2023ರಿಂದ ರಾಜ್ಯವು ಐದು ಖಾತರಿ ಯೋಜನೆಗಳಿಗೆ 1,40,233 ಕೋಟಿ ರೂ.ಗಳನ್ನು ಖರ್ಚು ಮಾಡಿದೆ ಎಂದು ಹೇಳಿದರು.

ರೈತ ಸಬ್ಸಿಡಿಗಳು, ಬರ ಪರಿಹಾರ, ಪ್ರವಾಹ ಪರಿಹಾರ, ಬೆಳೆ ಪರಿಹಾರ ಮತ್ತು ಸಂಬಂಧಿತ ವಲಯಗಳಿಗೆ ಸರ್ಕಾರ ಮೂರು ವರ್ಷಗಳಲ್ಲಿ ಸುಮಾರು 1 ಲಕ್ಷ ಕೋಟಿ ರೂ.ಗಳನ್ನು ಖರ್ಚು ಮಾಡಿದೆ. ವಿಧವೆಯರು, ಹಿರಿಯ ನಾಗರಿಕರು, ಅಂಗವಿಕಲರು ಮತ್ತು ಇತರ ಫಲಾನುಭವಿಗಳಿಗೆ ಸಾಮಾಜಿಕ ಪಿಂಚಣಿ ಯೋಜನೆಗಳು ವಾರ್ಷಿಕ 11,000 ಕೋಟಿ ರೂ.ಗಳಿಂದ 12,000 ಕೋಟಿ ರೂ.ಗಳವರೆಗೆ ಖರ್ಚು ಮಾಡಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

### ಮುಷ್ಕರಕ್ಕೆ ಸಾರಿಗೆ ನೌಕರರ ಸಂಘದ ಬೆಂಬಲ ವಾಪಸ್

ಜಂಟಿ ಕ್ರಿಯಾ ಸಮಿತಿಗೆ ನೀಡಿರುವ ಬೆಂಬಲವನ್ನು ತಕ್ಷಣದಿಂದಲೇ ಹಿಂಪಡೆಯಲು ನಿರ್ಧರಿಸಿದ್ದಾರೆ ಎಂದು ಅಧ್ಯಕ್ಷ ಎಚ್.ಆರ್ ಜಗದೀಶ್ ತಿಳಿಸಿದ್ದಾರೆ.

### ದೇಶಕ್ಕೆ ಶೀಘ್ರವೇ ಕಾದಿದೆ 'ಆರ್ಥಿಕ ಆಘಾತ': ರಾಗಾ

ಸುತ್ತುತ್ತಿದ್ದಾರೆ. ಇದು ನಮ್ಮ ಪ್ರಧಾನಿಯ ನಡೆ–ನುಡಿ ಎಂದು ರಾಹುಲ್ ಗಾಂಧಿ ಟೀಕಿಸಿದರು.

### ರೈತರ ಸಮಾಧಿ ಮೇಲೆ ಪ್ರದರ್ಶನ

ಅಖಂಡ ಶ್ರೀನಿವಾಸಮೂರ್ತಿ ಜೆಡಿಎಸ್ ಸೇರ್ಪಡೆ ಆಗುತ್ತಾರೆ. ಶೀಘ್ರವೇ ಬೃಹತ್ ಕಾರ್ಯಕ್ರಮ ಮಾಡಿ ಪಕ್ಷಕ್ಕೆ ಸೇರ್ಪಡೆ ಆಗುತ್ತಾರೆ ಎಂದು ತಿಳಿಸಿದರು.

### ಸಾರಿಗೆ ಮುಷ್ಕರಕ್ಕೆ 'ಹೈ ಬ್ರೇಕ್'

ಎದುರಾಗಲಿದೆ ಎಂದು ಅರ್ಜಿದಾರರು ಆತಂಕ ವ್ಯಕ್ತಪಡಿಸಿದ್ದಾರೆ.

ದಿನಗೂಲಿ ಕಾರ್ಮಿಕರು, ರೋಗಿಗಳು, ವಯಸ್ಸಾದ ವರು ಮತ್ತು ಆರ್ಥಿಕವಾಗಿ ದುರ್ಬಲರೂ ಸಾರ್ವಜನಿಕ ಬಸ್ ಸೇವೆಯನ್ನೇ ಅವಲಂಬಿಸಿದ್ದಾರೆ. ಮುಷ್ಕರದಿಂದ ಎಲ್ಲರಿಗೂ ತೊಂದರೆ ಉಂಟಾಗಲಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

### ಮಾರ್ತಾಂಡ ಆನೆ ಸಾವು

ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೇ ಮಾರ್ತಾಂಡ ಆನೆ ಮೃತಪಟ್ಟಿದೆ.

ಆನೆಗಳ ಕಾದಾಟದಲ್ಲಿ ಮಹಿಳೆ ಬಲಿ ಪ್ರಕರಣ ಸಂಬಂಧ ಇಂದು ದುಬಾರೆ ಸಾಕಾನೆ ಶಿಬಿರವನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ. ಮುಂದಿನ ಆದೇಶದವರೆಗೂ ದುಬಾರೆ ಬಂದ್ ಆಗಲಿದೆ. ಇನ್ನು ಆನೆಗಳ ಕಾದಾಟದಲ್ಲಿ ಮೃತಪಟ್ಟ ಮಹಿಳೆಯ ನೇತ್ರದಾನ ಮಾಡಿ ಕುಟುಂಬಸ್ಥರು ಮಾನವೀಯತೆ ಮೆರೆದಿದ್ದಾರೆ.

### ಮತ್ತೆ ಇಂಧನ ದರ ಏರಿಕೆ

ರೂಪಾಯಿ ಹೆಚ್ಚಳ ಮಾಡಲಾಗಿತ್ತು. ಇದಾದ ಮೂರು ದಿನಗಳಲ್ಲಿ ಮತ್ತೆ ಪೆಟ್ರೋಲ್ ದರ ಏರಿಕೆ ಮಾಡಲಾಗಿದೆ. ಸಾರ್ವಜನಿಕರಿಗೆ ಭಾರೀ ಹೊಡೆತ ನೀಡಿದೆ.

ಕಚ್ಚಾ ತೈಲ ಬೆಲೆ ಹೆಚ್ಚಳ ಭಾರತೀಯ ಸಂಸ್ಕರಣಾ ಕಂಪನಿಗಳಿಗೆ ನಿತ್ಯ ಭಾರೀ ನಷ್ಟ ಉಂಟು ಮಾಡುತ್ತಿದೆ. ಹೀಗಾಗಿ ಕಳೆದ ವಾರ 3 ರೂ. ಹೆಚ್ಚಳ ಮಾಡಲಾಗಿತ್ತು. ಈ ದರ ಏರಿಕೆಯು ತೈಲ ಕಂಪನಿಗಳಿಗೆ ಶೇ.25ರಷ್ಟು ನಷ್ಟ ತಪ್ಪಿಸಿತ್ತು. ಈ ಬೆನ್ನಲ್ಲೇ ಮತ್ತೆ ದರ ಏರಿಕೆ ಮಾಡಿದೆ.

### ಜಂಬೂಸವಾರಿಯಿಂದ ಕಂಜನ್ ಆನೆಗೆ ಕೊಕ್

ಹಾಸನ ಜಿಲ್ಲೆ ಯಸಳೂರಿನ ಬಳಿ 2014ರಲ್ಲಿ ಸೆರೆ ಹಿಡಿಯಲಾಗಿದ್ದ 26 ವರ್ಷದ ಕಂಜನ್ 3 ಬಾರಿ ದಸರಾ ಮಹೋತ್ಸವದಲ್ಲಿ ಭಾಗಿಯಾಗಿತ್ತು. ಇನ್ಮುಂದೆ ದಸರಾ ಮಹೋತ್ಸವಕ್ಕೆ ಈ ಆನೆಯನ್ನು ಬಳಸದಂತೆ ಸೂಚಿಸಿರುವುದಾಗಿಯೂ ಈಶ್ವರ ಖಂಡ್ರೆ ತಿಳಿಸಿದ್ದಾರೆ.

### ನಿರುದ್ಯೋಗ ಸಮಸ್ಯೆ ಹೆಚ್ಚಳ

**ಸ್ವಾತಂತ್ರ್ಯ ನಂತರದಿಂದ ಮನಮೋಹನ್ ಸಿಂಗ್ ಅಧಿಕಾರದ ಅವಧಿವರೆಗೆ ದೇಶದ ಸಾಲ 53 ಲಕ್ಷದ 11 ಸಾವಿರ ಕೋಟಿ ಮಾತ್ರ ಇತ್ತು. ಇಂದು 220 ಲಕ್ಷ ಕೋಟಿಗೆ ದೇಶದ ಸಾಲ ಏರಿಕೆಯಾಗಿದೆ ಇದೇನಾ ಅಚ್ಚೇ ದಿನ್? ಎಂದು ಸಿದ್ದರಾಮಯ್ಯ ಲೇವಡಿ ಮಾಡಿದರು. ಬಿಜೆಪಿಯವರು ಹಿಂದೂ–ಮುಸ್ಲಿಮರ ಮಧ್ಯೆ ಬೆಂಕಿ ಹಚ್ಚಿದ್ದಾರೆ. ಇಡೀ ದೇಶವನ್ನೆ ಹಾಳುಗೆಡವಿದ್ದಾರೆ. ಸಮಾಜವನ್ನ ಇಬ್ಬಾಗ ಮಾಡುವ ಕೆಲಸ ಮಾಡ್ತಿದ್ದಾರೆ. ಬಿಜೆಪಿ ಅಧಿಕಾರದಲ್ಲಿದ್ದರೆ ದೇಶ ಏನಾಗುತ್ತದೆ ಎಂಬುದು ಗೊತ್ತಾಗಿದೆಯಲ್ಲ ಎಂದು ಪ್ರಶ್ನಿಸಿದರು.**

### ಜೈಲಿನಲ್ಲಿ ದರ್ಶನ್ ಭೇಟಿ ಮಾಡಿದ ಪತ್ನಿ, ಪುತ್ರ

ಎಂದು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆ ಡಿಜಿಪಿ ಅಲೋಕ್ ಕುಮಾರ್‌ಗೆ ವಿಜಯಲಕ್ಷ್ಮಿ ಪತ್ರ ಬರೆದಿದ್ದರು. ಆ ಪತ್ರವನ್ನು ಜೈಲಿನ ಮುಖ್ಯ ಅಧೀಕ್ಷಕ ಅಂಶುಕುಮಾರ್‌ಗೆ ಡಿಜಿಪಿ ಕಳುಹಿಸಿ, ನಿಯಮಾವಳಿಯಂತೆ ಕ್ರಮಕ್ಕೆ ಸೂಚಿಸಿದ್ದರು. ಜೈಲಿನ ಕೈಪಿಡಿಯಂತೆ ಭೇಟಿಗೆ ಅವಕಾಶ ಕಲ್ಪಿಸಲಾಗಿತ್ತು. ದರ್ಶನ್ ಅವರು ಪತ್ನಿ ಹಾಗೂ ಪುತ್ರನ ಜತೆಗೆ ಕೆಲ ಸಮಯ ಮಾತುಕತೆ ನಡೆಸಿದರು. ವಿಜಯಲಕ್ಷ್ಮಿ ಅವರು ದರ್ಶನ್‌ಗೆ ಧೈರ್ಯ ಹೇಳಿ ಹೊರಟರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

### ಅಂಕಪಟ್ಟಿ ದರ ಹೆಚ್ಚಳ: ಮುಷ್ಕರ

ಮೈಸೂರು: ಮೈಸೂರು ವಿಶ್ವ ವಿದ್ಯಾನಿಲಯದ ವಿದ್ಯಾರ್ಥಿಗಳ ಪದವಿ ಪ್ರಮಾಣ ಪತ್ರದ ಅಂಕಪಟ್ಟಿ ದರವನ್ನು ಹೆಚ್ಚಳ ಮಾಡಿರುವುದು ಖಂಡಿಸಿ ಹಾಗೂ ಅಂಕ ಪಟ್ಟಿ ದರ ಕಟ್ಟಲು ಅಂತಿಮ ದಿನವನ್ನು ಮುಂದೂಡುವಂತೆ ಆಗ್ರಹಿಸಿ ವಿದ್ಯಾರ್ಥಿಗಳು ದಿಢೀರ್ ಪ್ರತಿಭಟಿಸಿದರು.



ನಗರದ ಕ್ರಾಫರ್ಡ್ ಭವನದಲ್ಲಿ ಎದುರು ಪ್ರತಿಭಟಿಸಿದ ವಿದ್ಯಾರ್ಥಿಗಳು 2023, 24 ಮತ್ತು 25ನೇ ಸಾಲಿನ ವಿದ್ಯಾರ್ಥಿಗಳಿಂದ ಶುಲ್ಕ ಪಾವತಿಗೆ ನಾಳೆಯೇ ಕೊನೆ ದಿನಾಂಕ ನಿಗಧಿ ಮಾಡಲಾಗಿತ್ತು. ಆದರೆ, ಸಾವಿರಾರು ವಿದ್ಯಾರ್ಥಿಗಳು ವಿವಿ ಆವರಣದಲ್ಲಿರುವ ಎಸ್‌ಬಿಐ ಶಾಖೆಯೊಂದರಲ್ಲೇ ಕಟ್ಟಬೇಕೆಂಬ ನಿಯಮವಿದ್ದ ಹಿನ್ನೆಲೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಮುತ್ತಿಗೆ ಹಾಕಿದ್ದರು. ಅಲ್ಲದೆ, ಈ ಹಿಂದೆ ಪದವಿ ಪ್ರಮಾಣ ಅಂಕಪಟ್ಟಿಗೆ ಸಾಮಾನ್ಯ ವರ್ಗದವರಿಗೆ 1500, ಹಿಂದುಳಿದ ವರ್ಗದವರಿಗೆ 700 ರೂ ಇದ್ದ ಶುಲ್ಕವನ್ನು ಈಗ ಏಕಾಏಕಿ ಸಾಮಾನ್ಯ ವರ್ಗದವರಿಗೆ 2840 ಹಾಗೂ ಹಿಂದುಳಿದ ವರ್ಗದವರಿಗೆ 1300ಕ್ಕೆ ಏರಿಕೆ ಮಾಡಿರುವುದನ್ನು ವಿದ್ಯಾರ್ಥಿಗಳು ಖಂಡಿಸಿದರು.

ಹಿಂದೆ ಅಂಚೆ ಮೂಲಕ ಅಂಕಪಟ್ಟಿ ಕಳುಹಿಸಲಾಗುತ್ತಿತ್ತು. ಆದರೆ, ಈಗ ಡಿಜಿಟಲ್ ಲಾಕರ್ ಮೂಲಕ ವಿದ್ಯಾರ್ಥಿಗಳೇ ನೇರವಾಗಿ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಹೀಗಿರುವಾಗ ಅಂಕಪಟ್ಟಿಗೆ ದರ ವಿಧಿಸಿದಂತೆ ನಿಯಮ ಸಹ ರೂಪಿಸಿದೆ. ಹೀಗಿದ್ದರೂ ನಿಯಮಬಾಹಿರವಾಗಿ ಮೈಸೂರು ವಿಶ್ವ ವಿದ್ಯಾನಿಲಯ ಹೆಚ್ಚಳವಾಗಿ ಹಣ ಕಟ್ಟಿಸಿಕೊಳ್ಳುತ್ತಿದ್ದಾರೆಂದು ವಿದ್ಯಾರ್ಥಿಗಳು ಆರೋಪಿಸಿದರು. ವಿದ್ಯಾರ್ಥಿಗಳ ದಿಢೀರ್ ಪ್ರತಿಭಟನೆ ಹಿನ್ನೆಲೆಯಲ್ಲಿ ಶುಲ್ಕ ಕಟ್ಟಲು ಕೊನೆಯ ದಿನಾಂಕವನ್ನು ಮೇ27ಮುಂದೂಡಿದರು. ಇನ್ನೂ ಶುಲ್ಕ ವಿನಾಯಿತಿ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

### ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸನ್ಮಾನ

ಮೈಸೂರು: ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಹಿರಿಯ ಪತ್ರಕರ್ತರಾದ ಡಾ.ಕೆ.ಬಿ.ಗಣಪತಿ ಹಾಗೂ ರಾಜಶೇಖರ್ ಕೋಟಿ ಅವರ ಸ್ಮರಣಾರ್ಥ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.




ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಸಂಪಾದಕರಾದ ವಿಕ್ರಮ್ ಮುತ್ತಣ್ಣ ಹಾಗೂ ಸಂಪಾದಕರಾದ ರವಿ ಕೋಟಿ ಡಾ.ಕೆ.ಬಿ.ಗಣಪತಿ ಮತ್ತು ರಾಜಶೇಖರ್ ಕೋಟಿ ಪತ್ರಿಭಾ ಪುರಸ್ಕಾರ ಪ್ರದಾನ ಮಾಡಿದರು. ನಂತರ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಎಷ್ಟೇ ಪತ್ರಿಕೆಗಳು ಬರಲಿ, ಎಷ್ಟೇ ಜನ ಪತ್ರಿಕೆಗಳನ್ನು ಪ್ರಾರಂಭ ಮಾಡಲಿ. ಆದರೆ ಮೈಸೂರಿನ ಪತ್ರಿಕೋದ್ಯಮ ಅಂದರೆ, ನಾವು ರಾಜ್ಯ, ದೇಶ ಬಿಟ್ಟು ಹೋದರೂ ಅಷ್ಟೇ, ಮೈಸೂರು ಪತ್ರಕರ್ತರು ಎಂದು ರಾಜಶೇಖರ್ ಕೋಟಿ, ಕೆ.ಬಿ.ಗಣಪತಿ ಹೆಸರು ಮಾತ್ರ ಹೇಳುವುದು. ಅಂತಹ ಒಂದು ಅಸ್ಮಿತೆಯನ್ನು ಮೈಸೂರು ಪತ್ರಿಕೋದ್ಯಮದ ಒಳಗಡೆ, ಎರಡು ಜೀವಗಳು ಉಳಿಸಿ ಹೋಗಿದ್ದಾರೆ. ಕೇವಲ ಅವರು ಹೆಸರು ಉಳಿಸಿ ಹೋಗಿದ್ದಲ್ಲ, ಕನ್ನಡ ಪತ್ರಿಕೋದ್ಯಮಕ್ಕೆ, ಆಂಗ್ಲ ಪತ್ರಿಕೋದ್ಯಮಕ್ಕೆ ನೂರಾರು ಪತ್ರಕರ್ತರನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ. ಇಂದು ಬೇರೆ ಬೇರೆ ರಾಜ್ಯ, ದೇಶಗಳಲ್ಲಿ ಏನಾದರೂ ಯಶಸ್ವಿ ಪತ್ರಕರ್ತರ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಈ ಎರಡು ಪತ್ರಿಕೆಗಳ ನಂಟಿರುತ್ತದೆ ಎಂದರು.

ಸಂಪಾದಕ ವಿಕ್ರಮ್ ಮುತ್ತಣ್ಣ ಮಾತನಾಡಿ, ನಮ್ಮ ತಂದೆ ಕೆ.ಬಿ.ಗಣಪತಿ ಹಾಗೂ ರವಿಕೋಟಿ ಅವರ ತಂದೆ ರಾಜಶೇಖರ್ ಕೋಟಿ ಅವರ ಹೆಸರಿನಲ್ಲಿ ಮಕ್ಕಳಿಗೆ ಪುರಸ್ಕಾರ ನೀಡುತ್ತಿರುವುದು ಸಂತಸದ ವಿಚಾರವಾಗಿದೆ. ಮುಂದಿನ ದಿನಗಳಲ್ಲಿ ಪತ್ರಕರ್ತರಿಗೆ, ಸಂಸ್ಥೆಯ ಮುಖ್ಯಸ್ಥರಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಿ ಎಂದು ಸಲಹೆ ನೀಡಿದರು. ನಂತರ ಆಂದೋಲನ ಪತ್ರಿಕೆಯ ಸಂಪಾದಕ ರವಿಕೋಟಿ ಮಾತನಾಡಿ, ಇಂದು ಆಯೋಜಿಸಿರುವ ಕಾರ್ಯಕ್ರಮ ಉತ್ತಮವಾದದು, ಮುಂದಿನ ವರ್ಷ ನಾವು ನಿಮ್ಮೊಟ್ಟಿಗೆ ಸೇರಿಕೊಳ್ಳುತ್ತೇವೆ. ಇಂದು ಪುರಸ್ಕಾರ ಪಡೆದ ಎಲ್ಲಾ ಮಕ್ಕಳಿಗೂ ಅಭಿನಂದನೆ ಎಂದರು.ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಎಂ.ರಂಜನ, ಎ.ಆರ್.ಅಪ್ರಮೇಯ, ಎನ್.ಎಸ್. ಮೈತ್ರಿಯಾ, ಎಸ್.ಮೇಘನ, ಎಂ.ಸಿಂಚನ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಲಾಗೈಡ್ ಮಾಸ ಪತ್ರಿಕೆ ಸಂಪಾದಕ ಲಾಗೈಡ್ ಹೆಚ್.ಎನ್.ವೆಂಕಟೇಶ್, ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಪ್ರಗತಿ ಗೋಪಾಲ ಕೃಷ್ಣ, ಉಪಾಧ್ಯಕ್ಷ ಕೆ.ಹೆಚ್. ಚಂದ್ರು, ಪ್ರಧಾನ ಕಾರ್ಯದರ್ಶಿ ಎಂ. ಎನ್.ಲಕ್ಷ್ಮಿನಾರಾಯಣ ಯಾದವ್, ಖಜಾಂಚಿ ಎಸ್.ಉದಯ್ ಶಂಕರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಅನುರಾಗ ಬಸವರಾಜು, ಎಂ.ಎ.ಶ್ರೀರಾಮ್, ನಾಗೇಶ್ ಪಾಣತ್ತಲೆ, ಎಸ್. ಆರ್.ಮಧುಸೂಧನ್, ಗವಿಮಠ ರವಿ, ಟಿ. ಅನೂಪ್ ರಾಘವ್, ಹಂಪಾ ನಾಗರಾಜು, ನಿಶಾಂತ್ ಪಾಲ್, ಕೃಷ್ಣೋಜಿ ರಾವ್, ಎ.ನಂದನ್ ಸೇರಿ ಮತ್ತಿತರರು ಉಪಸ್ಥಿತರಿದ್ದರು.

### ಸೋಲುಗಳನ್ನು ಕಾಣದ ಜೀವನವೇ ಇಲ್ಲ – ಡಾ.ತನ್ವೀರ್ ಹಖ್

ರಾಮನಗರ: ಕಷ್ಟಗಳನ್ನು ಎದುರಿಸದೆ, ಸೋಲುಗಳನ್ನು ಕಾಣದೆ ಜೀವನವೇ ಇಲ್ಲ ಎಂದು ಗೌಸಿಯಾ ತಾಂತ್ರಿಕ ಮತ್ತು ಶೈಕ್ಷಣಿಕ ಟ್ರಸ್ಟ್‌ನ ಆಡಳಿತ ಮಂಡಳಿಯ ಅಧ್ಯಕ್ಷ ಡಾ.ತನ್ವೀರ್ ಹಖ್ ಹೇಳಿದರು.




ನಗರದಲ್ಲಿರುವ ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ 42ನೇ ಘಟಿಕೋತ್ಸವದಲ್ಲಿ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ನೀವು (ವಿದ್ಯಾರ್ಥಿಗಳು) ಮೆಟ್ಟಿಲುಗಳನ್ನು ಹಂತ ಹಂತವಾಗಿ ಏರಬೇಕು. ಬೇಗ ಉನ್ನತಿಗೆ ಬರಬೇಕು ಎಂದು ಅಡ್ಡದಾರಿ ಹಿಡಿದಷ್ಟು ಅಷ್ಟು ಬೇಗ ಕೆಳಗೆ ಬೀಳುತ್ತೀರಿ. ಆದ್ದರಿಂದ ಆರಂಭದಿಂದಲೇ ಎಲ್ಲವನ್ನು ಸರಿಯಾಗಿ ಕಲಿಯಬೇಕು ಎಂದರು.

ನೀವು ಎಲ್ಲರೂ ತುಂಬಾ ಕಷ್ಟದ ಹಿನ್ನೆಲೆಯಿಂದ ಬಂದಿದ್ದೀರಿ. ನಿಮ್ಮನ್ನು ಈ ಹಂತಕ್ಕೆ ತಲುಪಿಸಲು ನಿಮ್ಮ ತಂದೆ–ತಾಯಿಗಳು ಬಹಳ ತ್ಯಾಗ ಮಾಡಿದ್ದಾರೆ. ಕೊನೆಗೆ ನಿಮ್ಮ ಪರಿಶ್ರಮ ಮತ್ತು ನಿಮ್ಮ ಸಮರ್ಪಣೆಯಿಲ್ಲದೆ ಇಂದು ನೀವು ಈ ಪದವಿಯನ್ನು ಪಡೆಯುತ್ತಿರಲಿಲ್ಲ ಎಂದರು.

**ಜೀವನವೆಂಬ ಸವಾಲನ್ನು ಧೈರ್ಯದಿಂದ ಎದುರಿಸಿ**

ಈಗ ಜೀವನವೆಂದರೆ ಒಂದು ಸವಾಲು. ನೀವು ಅದನ್ನು ಧೈರ್ಯದಿಂದ ಎದುರಿಸಬೇಕು. ಈಗ ನೀವು ವಿಶ್ರಾಂತಿ ಪಡೆಯಲು ಸಾಧ್ಯವಿಲ್ಲ, ಏಕೆಂದರೆ ನೀವು ಮೂಲ ಅಡಿಪಾಯವನ್ನು ನಿರ್ಮಿಸಿದ್ದೀರಿ. ದೊಡ್ಡ ಕನಸು ಕಾಣಿರಿ, ಆದರೆ ಅಸಾಧ್ಯವಾದುದನ್ನು ಅಲ್ಲ. ನೀವು ಸಾಧಿಸಬಹುದು ಎಂದು ನಂಬುವ ಕನಸು ಕಾಣಿರಿ ಮತ್ತು ಅದಕ್ಕಾಗಿ ಶ್ರಮಿಸಿರಿ ಎಂದು ಕರೆ ನೀಡಿದರು.

**ಸಮರ್ಪಣೆ, ಸಹನೆ ನಿಮ್ಮ ಏಳಿಗೆಗೆ ಸಹಕಾರಿ**

ಬಹಳಷ್ಟು ಜನರು ಕನಸೂ ಕಾಣದಂತಹ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಹಿಂಜರಿಯಬೇಡಿ. ನಿಮ್ಮಲ್ಲಿ ಎಲ್ಲಾ ಸಾಮರ್ಥ್ಯವಿದೆ. ದೇವರು ನಮಗೆಲ್ಲರಿಗೂ ಒಂದೇ ರೀತಿಯ ಬುದ್ಧಿ ಮತ್ತು ಏಕಾಗ್ರತೆಯನ್ನು ನೀಡಿದ್ದಾರೆ. ಆದರೆ ನಿಮ್ಮ ಸಮರ್ಪಣೆ, ಸಹನೆ ಮತ್ತು ಗುರಿಯತ್ತದ ದೃಷ್ಟಿಯೇ ನಿಮ್ಮನ್ನು ಮುಂದಕ್ಕೆ ಕೊಂಡೊಯ್ಯುತ್ತದೆ. ನೀವು ಎಷ್ಟು ಬಾರಿ ಬೀಳುತ್ತೀರೋ ಅಷ್ಟು ಬಲವಾಗಿ ಮತ್ತೆ ಎದ್ದೇಳುತ್ತೀರಿ. ಆದ್ದರಿಂದ ಅದರಿಂದ ಎಂದಿಗೂ ನಿರುತ್ಸಾಹಗೊಳ್ಳಬೇಡಿ ಎಂದರು. ಸಭೆಯಲ್ಲಿದ್ದ ವಿದ್ಯಾರ್ಥಿನಿಯರನ್ನು ಉದ್ದೇಶಿಸಿ ಮಾತನಾಡಿದ ಅವರು ನಿಮಗೆ ಅನೇಕ ಜವಾಬ್ದಾರಿಗಳಿವೆ. ನೀವು ಕೇವಲ ಎಂಜಿನಿಯರ್ ಮಾತ್ರವಲ್ಲ; ನೀವು ಮಗಳು, ಸಹೋದರಿ, ಮಡದಿ ನಂತರ ತಾಯಿ ಆಗಲಿದ್ದೀರಿ. ನಿಮ್ಮ ಪಾತ್ರಗಳು ಪುರುಷರಿಗೆ ಸಂಪೂರ್ಣವಾಗಿ ಅರ್ಥವಾಗದಷ್ಟು ದೊಡ್ಡದಿದೆ. ಈ ಎಲ್ಲಾ ಜವಾಬ್ದಾರಿಗಳನ್ನು ಸಮತೋಲನದಲ್ಲಿಟ್ಟುಕೊಳ್ಳಬೇಕು. ಆದ್ದರಿಂದ ನಿಮ್ಮ ಆದ್ಯತೆಗಳನ್ನು ಸರಿಯಾಗಿ ನಿಗದಿಪಡಿಸಿ ಮತ್ತು ಅದರಂತೆ ಜೀವನವನ್ನು ಯೋಜಿಸಬೇಕು. ಗಂಡ, ಮಕ್ಕಳು, ಅತ್ತೆ, ತಾಯಿ, ತಂದೆ–ತಾಯಿ ಇತ್ಯಾದಿಗಳ ನಡುವೆ ನೀವು ಸಮತೋಲನ ಸಾಧಿಸಬೇಕಾಗುತ್ತದೆ ಎಂದರು. ಇದೇ ವೇಳೆ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಗಣ್ಯರು ಪ್ರಮಾಣ ಪತ್ರಗಳನ್ನು ವಿತರಿಸಿ ಗೌರವಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಎನ್.ಎಸ್.ಕುಮಾರ್ ಸ್ವಾಗತಿಸಿದರು. ವೇದಿಕೆಯಲ್ಲಿ ಗೌಸಿಯಾ ತಾಂತ್ರಿಕ ಮತ್ತು ಶೈಕ್ಷಣಿಕ ಟ್ರಸ್ಟ್‌ನ ಚೇರ್ಮೆನ್ ಡಾ.ನವಾಜ್ ಎ ಷರೀಫ್, ಟ್ರಸ್ಟಿಗಳಾದ ಇಕ್ಬಾಲ್ ಅಹಮದ್ ಬೇಗ್, ಡಾ.ವಸೀಂ ಖಾನ್, ಕಾಲೇಜು ಆಡಳಿತಾಧಿಕಾರಿ ಪ್ರೊ.ಏಜಾಜ್ ಅಹಮದ್, ಸಂಚಾಲಕ ಡಾ. ಜಾವಿದ್ ಅಖ್ತರ್ ಉಪಸ್ಥಿತರಿದ್ದರು.

**ನಕರಾತ್ಮಕ ಚಿಂತನೆಗಳಿಗೆ ಅವಕಾಶ ಬೇಡ –ಉಮ್ಮರ್ ಇಸ್ಮೈಲ್ ಖಾನ್**

ನಕರಾತ್ಮಕ ಚಿಂತನೆಗಳ ಬಗ್ಗೆ ಗಮನ ಕೊಡಬೇಡಿ, ಸಕರಾತ್ಮಕ ಚಿಂತನೆಗಳು, ಒಳ್ಳೆಯ ಚಿಂತನೆಗಳನ್ನು ಗೌರವಿಸಿ ಅದಕ್ಕೆ ತಕ್ಕಹಾಗೆ ಬದುಕಿನಲ್ಲಿ ನಡೆಯಿರಿ ಎಂದು ಗೌಸಿಯಾ ತಾಂತ್ರಿಕ ಮತ್ತು ಶೈಕ್ಷಣಿಕ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಉಮ್ಮರ್ ಇಸ್ಮೈಲ್ ಖಾನ್ ಕರೆ ನೀಡಿದರು. ಗೌಸಿಯಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ 42ನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ನೀವೆಲ್ಲ ಈಗ ಪದವೀದರರಾಗುತ್ತಿದ್ದೀರಿ, ಸಮಾಜದಲ್ಲಿ ನಿಮ್ಮ ವೈಯಕ್ತಿಕ ನಡವಳಿಕೆಗೆ ಆದ್ಯತೆ ಕೊಡಿ, ಎರಡನೇ ಆದ್ಯತೆ ನಿಮ್ಮ ಆರ್ಥಿಕ ಸ್ಥಿರತೆಗಿರಲಿ, ನಿಮ್ಮ ಕುಟುಂಬದ ಬಗ್ಗೆ ಸದಾ ಕಾಳಜಿ ವಹಿಸುತ್ತ ನಿಮ್ಮ ಏಳಿಗೆಗೆ ಶ್ರಮವಹಿಸಿ. ಸಮಾಜಕ್ಕೆ ಒಳಿತು ಮಾಡಿ ಎಂದು ಅವರು ನೆರೆದಿದ್ದ ವಿದ್ಯಾರ್ಥಿ ಸಮೂಹಕ್ಕೆ ಕರೆ ನೀಡಿದರು. ಗೌಸಿಯಾ ತಾಂತ್ರಿಕ ಕಾಲೇಜಿನಿಂದ 2022 – 26ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಪಿಎಚ್‌ಡಿ ಪಡೆದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅವರು ಶುಭ ಕೋರಿದರು.

# ನಾಳೆಯಿಂದ ಜಿಲ್ಲಾ ಮಟ್ಟದ ಬಸವ ಜಯಂತ್ಯುತ್ಸವ




ಚಾಮರಾಜನಗರ, ಜಿಲ್ಲಾ ಮಟ್ಟದ ಬಸವ ಜಯಂತ್ಯುತ್ಸವ ಹಾಗೂ ಪೂಜ್ಯದ್ವಯರ ಸಂಸ್ಮರಣೋತ್ಸವ ಕಾರ್ಯಕ್ರಮವನ್ನು ಮೇ 21 ಮತ್ತು 22 ರಂದು ಎರಡು ದಿನಗಳ ಕಾಲ ಅದ್ದೂರಿಯಾಗಿ ನಡೆಯಲಿದ್ದು, ಜಿಲ್ಲೆಯ ವ್ಯಾಪ್ತಿಯ ಪ್ರತಿ ಹಳ್ಳಿಹಳ್ಳಿಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಬಸವ ಭಕ್ತರು, ಅನುಯಾಯಿಗಳು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಚಾ.ನಗರ ಸಿದ್ದಮಲ್ಲೇಶ್ವರ ವಿರಕ್ತ ಮಠಾಧ್ಯಕ್ಷರಾದ ಶ್ರೀ ಚನ್ನಬಸವಸ್ವಾಮೀಜಿ ತಿಳಿಸಿದರು.

ನಗರದ ಶ್ರೀ ಮಠದ ಅವರಣದಲ್ಲಿ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠ ಹಾಗೂ ಬಸವ ಬಳಗಗಳ ಒಕ್ಕೂಟದ ವತಿಯಿಂದ ನಡೆಯುತ್ತಿರುವ ಎರಡು ದಿನಗಳ ಬಸವ ಜಯಂತಿ ಕಾರ್ಯಕ್ರಮದ ಪ್ರಚಾರ ರಥಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.ಪ್ರತಿ ವರ್ಷದಂತೆ ಈ ಬಾರಿಯು ಶ್ರೀಮಠದ ವತಿಯಿಂದ ಬಸವ ಜಯಂತಿಯನ್ನು ಆಚರಣೆ ಮಾಡಲಾಗುತ್ತಿದ್ದು, ಈ ಬಾರಿ ಬಸವ ಬಳಗಗಳ ಒಕ್ಕೂಟದವರು ಬಹಳ ವಿಜೃಂಭಣೆಯಿಂದ ಜಿಲ್ಲಾ ಮಟ್ಟದ ಬಸವೇಶ್ವರ ಜಯಂತೋತ್ಸವ –2026 ಅಯೋಜನೆ ಮಾಡಿಕೊಂಡಿದ್ದಾರೆ.

ಒಕ್ಕೂಟದ ಅಧ್ಯಕ್ಷರಾಗಿ ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ ಅವರ ನೇತೃತ್ವದಲ್ಲಿ ಕಳೆದ 20 ದಿನಗಳಿಂದ ಬಹಳ ಅಚ್ಚುಕಟ್ಟಾಗಿ ಪ್ರಚಾರ ಹಾಗೂ ಕಾರ್ಯಕ್ರಮದ ಸಿದ್ದತೆಗಳು ನಡೆಯುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲಾಡಳಿತ ಭವನದಲ್ಲಿರುವ ಶ್ರೀ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಸುತ್ತೂರುಶ್ರೀಗಳು ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಜಿಲ್ಲೆಯ ಮಠಾಧೀಶರು, ಸಚಿವರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು ಭಾಗವಹಿಸಲಿದ್ದಾರೆ. ವಿವಿಧ ಜಾನಪದ ಕಲಾತಂಡಗಳೊಂದಿಗೆ ಬಿ. ರಾಚಯ್ಯ ಜೋಡಿ ರಸ್ತೆ ಮಾರ್ಗವಾಗಿ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಮೆರವಣಿಗೆಯಲ್ಲಿ ಸಾಗಿ ವಾಪಸ್ ಶ್ರೀಮಠಕ್ಕೆ ತಲುಪಲಿದೆ ಎಂದರು.

ಈ ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯಲಿದ್ದು, ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಬೇಕು. ಮೇ 21 ರ ಸಂಜೆ ಶ್ರೀಮಠದ ಅವರಣದಲ್ಲಿ ಪ್ರಭುಲಿಂಗಲೀಲೆ ನಾಟಕ ಪ್ರದರ್ಶನ, ಮೇ 22 ರಂದು ಪೂಜ್ಯರ ಗದ್ದುಗೆಗೆ ಬಿಲ್ವಾರ್ಚನೆ, ಮಹಾಮಂಗಳಾರತಿ, ಷಟ್ಥಲ ಧ್ವಜಾರೋಹಣ, ಇಷ್ಟಲಿಂಗಪೂಜೆ, ಪ್ರವಚನ, ಹಾಗೂ ವಚನ ಗಾಯನ, ಭಕ್ತಿಗೀತೆ ಕಾರ್ಯಕ್ರಮಗಳು ನಡೆಯಲಿದೆ ಎಂದು ಶ್ರೀಗಳು ತಿಳಿಸಿದರು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರು ಆದ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ಒಕ್ಕೂಟದ ವತಿ ಯಿಂದ ಅದ್ದೂರಿಯಾಗಿ ಬಸವ ಜಯಂತಿ ಆಚರಣೆ ಮಾಡುವ ಸಂಕಲ್ಪದೊಂದಿಗೆ ಕಳೆದ 15 ದಿನಗಳಿಂದ ಎಲ್ಲಾ ಗ್ರಾಮಗಳಿಗೆ ಭೇಟಿ ನೀಡಿ ಆಹ್ವಾನ ಮಾಡಲಾಗುತ್ತಿದೆ. ಇಂದು ಪ್ರಚಾರ ರಥಕ್ಕೂ ಸಹ ಶ್ರೀಗಳು ಚಾಲನೆ ನೀಡಿದ್ದು, ಶ್ರೀ ಚನ್ನಬಸವಸ್ವಾಮೀಜಿ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯುತ್ತಿದ್ದು, ಸುತ್ತೂರು ಶ್ರೀಗಳು ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಹಿರಿಯರಾದ ಕೋಡಿಮೋಳೆ ರಾಜಶೇಖರ್, ಬಸವ ಕೇಂದ್ರದ ಅಧ್ಯಕ್ಷ ಎನ್‌ರಿಚ್ ಮಹದೇವಸ್ವಾಮಿ, ಒಕ್ಕುಟದ ಪ್ರಚಾರ ಸಮಿತಿಯ ಅಧ್ಯಕ್ಷ ಅಲೂರು ಪ್ರದೀಪ್, ಕಾರ್ಯದರ್ಶಿ ದೊಡ್ಡರಾಯಪೇಟೆ ಗಿರೀಶ್, ಮಹಾಸಭಾದ ತಾಲೂಕು ಅಧ್ಯಕ್ಷ ಬಾಲಚಂದ್ರಮೂರ್ತಿ, ನಿರ್ದೇಶಕರಾದ ಕಾವುದವಾಡಿ ಗುರು, ಅಲೂರು ಬಾಬು, ಪಿ. ಶೇಖರಪ್ಪ, ರಾಮಸಮುದ್ರ ಬಾಬು, ವಕೀಲ ಪ್ರಥ್ವಿರಾಜ್, ಹೊನ್ನಹಳ್ಳಿ ಸಂಪತ್ತು, ಬಸವರಾಜು ಮೊದಲಾದವರು ಹಾಜರಿದ್ದರು.

## ಕಾಂಗ್ರೆಸ್ ಮುಖಂಡ ಸೈಯದ್ ಜಿಯಾವುಲ್ಲಾ ನಿಧನ



ರಾಮನಗರ: ಇಲ್ಲಿನ ಪುರಸಭಾಧ್ಯಕ್ಷರಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾಗಿ, ಕೆಎಸ್‌ಐಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅಜಾತಶತ್ರು ಎಂದೇ ಗುರುತಿಸಿಕೊಂಡಿದ್ದ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಸೈಯದ್ ಜಿಯಾವುಲ್ಲಾ ಮಂಗಳವಾರ ಬೆಳಿಗ್ಗೆ ತೀವ್ರ ಹೃದಯಾಘಾತದಿಂದ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು.

ರೇಷ್ಮೆ ನೂಲು ರೀಲಿಂಗ್ ವೃತ್ತಿಯಿಂದ ಜೀವನ ಕಟ್ಟಿಕೊಂಡಿದ್ದ ಅವರು ಪತ್ನಿ, ನಗರಸಭಾ ಸದಸ್ಯ ಅಕ್ಲೀಂ ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಅಪಾರ ಕುಟುಂಬವನ್ನು ಅವರು ಅಗಲಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಸಮಾಜದ ಪ್ರಮುಖರು ಅಂತಿಮ ದರ್ಶನ ಪಡೆದು, ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

### ಪ್ರಶಸ್ತಿ ಭವನಕ್ಕೆ ಕಾರಣರಾದವರು

ಸೈಯದ್ ಜಿಯಾವುಲ್ಲಾ ಪುರಸಭೆಯ ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡಾಕ್ಷಣ ಗಬ್ಬೆದ್ದು ನಾರುತ್ತಿದ್ದ ನಗರದಲ್ಲಿ ಸ್ವಚ್ಚತೆಗೆ ಆಧ್ಯತೆ ಕೊಟ್ಟಿದ್ದರು. ನಗರದ ನಾಗರೀಕರು ಈ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಪುರಸಭೆಯಲ್ಲಿ ಉತ್ತಮ ಆಡಳಿತ ನೀಡಿದ್ದಕ್ಕಾಗಿ, ರಾಜ್ಯ ಸರ್ಕಾರ ಉತ್ತಮ ಪುರಸಭೆ ಎಂದು ನೀಡಿದ್ದ ಬಹುಮಾನದ ಹಣವನ್ನು ಬಳಸಿಕೊಂಡು ಪ್ರಶಸ್ತಿ ಭವನವನ್ನು ನಿರ್ಮಿಸಿದ್ದರು. ಇದೇ ಭವನದಲ್ಲಿರುವ ಸಭಾ ಭವನ ಇಂದಿಗೂ ನಗರಸಭೆಯ ಸಭೆಗಳಿಗೆ ಬಳಕೆಯಾಗುತ್ತಿದೆ.

### ಡಾ.ಬಿ.ಆರ್.ಅಂಬೇಡ್ಕರ್ ಭವನಕ್ಕಾಗಿ ಡಾ.ರಾಜ್ ಅವರ ರಸಸಂಜೆ

ನಗರದಲ್ಲಿ ಸುಸಜ್ಜಿತ ಸಭಾಂಗಣವನ್ನು ನಿರ್ಮಿಸಲು ಸೈಯದ್ ಜಿಯಾವುಲ್ಲಾ ನೇತೃತ್ವದ ಪುರಸಭೆ ಉದ್ದೇಶಿಸಿತ್ತು. ಆರ್ಥಿಕ ಸಂಪನ್ಮೂಲವನ್ನು ಕ್ರೂಢೀಕರಿಸಲು ಸೈಯದ್ ಜಿಯಾವುಲ್ಲಾ ಕಂಡುಕೊಂಡಿದ್ದ ವರನಟ ಡಾ.ರಾಜ್ ಕುಮಾರ್ ಅವರ ರಸಸಂಜೆ ಕಾರ್ಯಕ್ರಮ. ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ರಸಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ಸಂಗ್ರವಾದ ಟಿಕೆಟ್ ಹಣವನ್ನು ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಮುನ್ನುಡಿ ಬರೆದರು.

### ಡಾ.ರಾಜ್ ಕುಮಾರ್ ಕಾಂಪ್ಲೆಕ್ಸ್‌ಗೆ ಕಾರಣಕರ್ತರು

ಬೆಳೆಯುತ್ತಿರುವ ನಗರದ ಭವಿಷ್ಯವನ್ನು ಅರಿತಿದ್ದ ಸೈಯದ್ ಜಿಯಾವುಲ್ಲಾ, ಅರ್ಕಾವತಿ ನದಿ ದಂಡೆಯ ಮೇಲೆ ಬೃಹತ್ ಕಾಂಪ್ಲೆಕ್ಸ್ ನಿರ್ಮಿಸಲು ಉದ್ದೇಶಿಸಿದ್ದರು. ಕೇಂದ್ರ ಸರ್ಕಾರದ ಅನುದಾನದಲ್ಲಿ ಡಾ.ರಾಜ್ ಕುಮರ್ ಕಾಂಪ್ಲೆಕ್ಸ್ ನಿರ್ಮಾಣವಾಯಿತು.

### ಕೊನೆಗೂ ಜಿಯಾವುಲ್ಲಾ ಎಂ.ಎಲ್.ಸಿ ಆಗಲೇ ಇಲ್ಲ!

ಕಾಂಗ್ರೆಸ್ ಪಕ್ಷದ ಪ್ರಮುಖರಾಗಿ ಸೈಯದ್ ಜಿಯಾವುಲ್ಲಾ ರಾಜ್ಯದಲ್ಲಿ ಗುರುತಿಸಿಕೊಂಡಿದ್ದಾರೆ. ರಾಮನಗರದಲ್ಲಿ ಪಕ್ಷ ಕಟ್ಟಲು ಅವರು ಶ್ರಮಿಸಿದ್ದಾರೆ. ಕಾಂಗ್ರೆಸ್ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಅಲಂಕರಿಸಿದ್ದರು. ಪಕ್ಷಕ್ಕಾಗಿ ಶ್ರಮಿಸಿದ ಸೈಯದ್ ಜಿಯಾರನ್ನು ಎಂ.ಎಲ್.ಸಿ ಮಾಡುವ ಉದ್ದೇಶವನ್ನು ಡಿ.ಕೆ.ಶಿವಕುಮಾರ್ ಹಲವು ಬಾರಿ ತಮ್ಮ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದರು. ಆದರೆ ವಿಧಿಯ ಆಟವೇ ಬೇರೆ ಇತ್ತು. ಎಂ.ಎಲ್.ಸಿ ಸ್ಥಾನವನ್ನು ಅವರು ಅಲಂಕರಿಸಲೇ ಇಲ್ಲ ಎಂದು ಅವರ ಅಭಿಮಾನಿಗಳು ಪ್ರತಿಕ್ರಿಯಿಸಿದ್ದಾರೆ.

### ರೇಷ್ಮೆ ಉದ್ಯಮದಲ್ಲಿ ಕೀರ್ತಿ

ಸೈಯದ್ ಜಿಯಾವುಲ್ಲಾರದ್ದು ಮೂಲ ವೃತ್ತಿ ರೇಷ್ಮೆ ನೂಲು ರೀಲಿಂಗ್. ಅಧುನಿಕ ತಾಂತ್ರಿಕತೆಯನ್ನು ರೂಢಿಸಿಕೊಳ್ಳಲು ಅವರು ಎಂದು ಮುಂದು. ಯಾಂತ್ರಿಕೃತ ರೀಲಿಂಗ್ ಯಂತ್ರ ಮಾರುಕಟ್ಟೆಗೆ ಬಂದಾಕ್ಷಣ ಅದನ್ನು ಅಳವಡಿಸಿಕೊಂಡರು. ರಾಮನಗರ ಜಿಲ್ಲೆಯಲ್ಲಿ ಇಂತಹ ಅಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಪ್ರಥಮ ರೀಲರ್ ಸೈಯದ್ ಜಿಯಾವುಲ್ಲಾರವರು. ಕೆಎಸ್‌ಐಸಿ ಅಧ್ಯಕ್ಷರಾಗಿ ಮೈಸೂರು ಸಿಲ್ಕ್ ಸೀರೆಗಳ ದೇಶ, ವಿದೇಶಗಳಲ್ಲಿ ಪ್ರಚುರ ಪಡಿಸಲು ಅವರು ತೊಡಗಿಸಿಕೊಂಡಿದ್ದರು.

### ಅಜಾತ ಶ್ರತು!

ಸೈಯದ್ ಜಿಯಾವುಲ್ಲಾ ತಮ್ಮ ರಾಜಕೀಯ ಜೀವನದಲ್ಲಿ ಸರ್ವಧರ್ಮದ ಪರವಾಗಿದ್ದವರು. ಇಸ್ಲಾಂ ಧರ್ಮದ ಅನುಯಾಯಿಗಳಾಗಿದ್ದರೂ ಅವರು ಎಲ್ಲ ವರ್ಗದ ಜನರೊಂದಿಗೆ ಬೆರೆಯುತ್ತಿದ್ದರು. ಹೀಗಾಗಿಯೇ ಅವರನ್ನು ಅಜಾತಶತ್ರು ಅಂತಲೇ ಜನ ಅಭಿಮಾನದಿಂದ ಗುರುತಿಸಿದ್ದರು. ನಗರದ ಅಭಿವೃದ್ದಿಗೆ ಅವರು ಅಂದಿನ ಪುರಸಭೆಯ ಇತಿಮಿತಿಯಲ್ಲೇ ಶ್ರಮಿಸಿದ್ದರು. ರೇಷ್ಮೆ ಉದ್ಯಮಿಯಾಗಿ, ರಾಜಕೀಯವಾಗಿ ಯಶಸ್ವಿಯಾದ ಸೈಯದ್ ಜಿಯಾವುಲ್ಲಾ ಇಂದು ನಿಧನ ಹೊಂದಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್, ಮಾಜಿ ಸಂಸದ ಡಿ.ಕೆ.ಸುರೇಶ್, ಶಾಸಕ ಇಕ್ಬಾಲ್ ಹುಸೇನ್, ನಗರಸಭಾಧ್ಯಕ್ಷ ಕೆ.ಶೇಷಾದ್ರಿ, ಗ್ರೇಟರ್ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷ ಗಾಣಕಲ್ ನಟರಾಜ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಎರೇಹಳ್ಳಿ ಮಂಜು ಮುಂತಾದ ಗಣ್ಯರು, ಸಮಾಜದ ಎಲ್ಲಾ ವರ್ಗದ ಪ್ರಮುಖರು ಸೈಯದ್ ಜಿಯಾವುಲ್ಲಾರ ಅಂತಿಮ ದರ್ಶನ ಪಡೆದುಕೊಂಡರು. ಮಂಗಳವಾರ ಸಂಜೆ ಇಸ್ಲಾಂ ಪದ್ಧತಿಯಂತೆ ಅವರ ಅಂತ್ಯ ಸಂಸ್ಕಾರ ನೆರೆವೇರಿದೆ.

## 29ರಂದು ರೋಗಿಗಳ ಅನುಭವ ಸಮ್ಮೇಳನ

ಮೈಸೂರು: ಕಾನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿಯಿಂದ ಇಲ್ಲಿನ ರ್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಮೇ 29ರಂದು ಬೆಳಿಗ್ಗೆ 10ಕ್ಕೆ ಮೈಸೂರಿನಲ್ಲಿ ಆರೋಗ್ಯಸೇವಾ ಕಾರ್ಯಾಚರಣೆ ಮತ್ತು ರೋಗಿಗಳ ಅನುಭವ ಕುರಿತ ಸಮ್ಮೇಳನ (ಮೈ ಹೋಪ್– 2026) ಆಯೋಜಿಸಲಾಗಿದೆ ಎಂದು ಸಂಸ್ಥೆಯ ಚೇರ್ಮನ್ ಉತ್ಸವ್ ಅಗರ್ವಾಲ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲ್ಲಿನ ಸಾಂಪ್ರಾದಾಯಿಕ ಆರೋಗ್ಯ ಸೇವಾ ಪರಿಸರವನ್ನು ಅಂತರರಾಷ್ಟ್ರೀಯ ಮಾನದಂಡಕ್ಕೆ ಎತ್ತರಿಸುವ ಆಶಯದೊಂದಿಗೆ ಸಮ್ಮೇಳನ ಆಯೋಜಿಸಲಾಗಿದೆ. ಆರೋಗ್ಯ ಕ್ಷೇತ್ರ ಹಾಗೂ ಸಂಬಂಧಿತ ಉದ್ಯಮಗಳ ಪ್ರತಿನಿಧಿಗಳು ಪಾಲ್ಗೊಂಡು ಚರ್ಚೆ ನಡೆಸುವರು. ಮೈಸೂರು ಅಸೋಸಿಯೇಷನ್ ಆಫ್ ಹಾಸ್ಪಿಟಲ್ಸ್, ನರ್ಸಿಂಗ್ ಹೋಮ್ಸ್, ಕ್ಲಿನಿಕ್ಸ್ ಮತ್ತು ಡಯಾಗ್ನೋಸ್ಟಿಕ್ ಸೆಂಟರ್ಸ್ ಬೆಂಬಲ ನೀಡಿದ್ದಾರೆ. ಪೂರ್ವ ನೋಂದಣಿ ಅಗತ್ಯವಿದ್ದು, ಮಾಹಿತಿಗೆ ಮೊ.ಸಂ. 85533 95747 ಸಂಪರ್ಕಿಸಿ' ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಉಪಚೇರ್ಮನ್ ಸವಿತಾ ಮಲ್ಲಪ್ಪ, ಕಾರ್ಯದರ್ಶಿ ಸೋಲೊಮನ್ ಪುಷ್ಪರಾಜ್, ಸಮ್ಮೇಳನ ಚೇರ್ಮನ್, ಅಪೊಲೊ ಆಸ್ಪತ್ರೆ ಮುಖ್ಯಸ್ಥ ಎನ್.ಜಿ.ಭರತೀಶ್ ರೆಡ್ಡಿ ಇದ್ದರು.




# ಪಿಎಂ ಸೂರ್ಯಘರ್ ಪರಿಣಾಮಕಾರಿ ಅನುಷ್ಠಾನಕ್ಕೆ ಸೆಸ್ಕ್ ಎಂಡಿ ಸೂಚನೆ

## ಅಧಿಕಾರಿಗಳು ಹಾಗೂ ಪೂರೈಕೆದಾರರೊಂದಿಗೆ ಸಭೆ

ಮೈಸೂರು: ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದ್ದು, ಹೆಚ್ಚಿನ ಗ್ರಾಹಕರು ಯೋಜನೆಯ ಸೌಲಭ್ಯ ಪಡೆಯುವಂತೆ ಅಧಿಕಾರಿಗಳು ಹಾಗೂ ಪೂರೈಕೆದಾರರು(ವೆಂಡರ್‌ಗಳು) ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಪ್ರಾದೇಶಿಕ ಆಯುಕ್ತರು ಹಾಗೂ ಸೆಸ್ಕ್ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ನಿತೇಶ್ ಪಾಟೀಲ್ ಸೂಚಿಸಿದರು.

ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಪ್ರಧಾನ ಕಚೇರಿಯಲ್ಲಿ ಅಧಿಕಾರಿಗಳು ಹಾಗೂ ಪೂರೈಕೆದಾರರೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು. “2024ರಲ್ಲಿ ಯೋಜನೆ ಆರಂಭವಾಗಿದ್ದರೂ ಈವರೆಗೂ ನಿರೀಕ್ಷಿತ ಅರ್ಜಿಗಳು ಬಂದಿಲ್ಲ. ವಿದ್ಯುತ್ ದರ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಸೋಲಾರ್ ರೂಫ್ ಟಾಪ್ ಅಳವಡಿಸಿಕೊಂಡರೆ ಗ್ರಾಹಕರಿಗೆ ವಾರ್ಷಿಕವಾಗಿ ಅಂದಾಜು ಕನಿಷ್ಠ 25 ಸಾವಿರ ರೂ. ಉಳಿತಾಯವಾಗುವ ಸಾಧ್ಯತೆ ಇದೆ. ಯೋಜನೆಯ ಅನುಷ್ಠಾನಕ್ಕೆ ಸರ್ಕಾರದಿಂದ ಸಬ್ಸಿಡಿ ಸೌಲಭ್ಯವಿದ್ದು, ಯೋಜನೆ ಗ್ರಾಹಕರಿಗೆ ಲಾಭದಾಯಕವಾಗಿದೆ. ಈ ಬಗ್ಗೆ ಜನರಿಗೆ ಸಮರ್ಪಕ ಮಾಹಿತಿ ನೀಡುವ ಮೂಲಕ ಹೆಚ್ಚು ಗ್ರಾಹಕರು ಯೋಜನೆಯ ಬಳಕೆಗೆ ಮುಂದಾಗುವಂತೆ ಜಾಗೃತಿ ಮೂಡಿಸಬೇಕು” ಎಂದು ಹೇಳಿದರು.

“ಗ್ರಾಹಕರಿಗೆ ವೆಂಡರ್‌ಗಳ ಮಾಹಿತಿ ಸುಲಭವಾಗಿ ದೊರೆಯುವ ವ್ಯವಸ್ಥೆ ಆಗಬೇಕಿದೆ. ಇದರಿಂದಾಗಿ ಗ್ರಾಹಕರು ತಮ್ಮ ಅಗತ್ಯತೆ ಮತ್ತು ಅನುಕೂಲಕ್ಕೆ ತಕ್ಕಂತೆ ವೆಂಡರ್‌ಗಳ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಮತ್ತೊಂದೆಡೆ ಸೋಲಾರ್ ರೂಫ್ ಟಾಪ್ ಅಳವಡಿಕೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದ ಕೂಡಲೇ ಸೆಸ್ಕ್ ಅಧಿಕಾರಿಗಳು ಅರ್ಜಿ ಪರಿಶೀಲಿಸುವ ಪ್ರಕ್ರಿಯೆ ತ್ವರಿತವಾಗಿ ನಡೆಯಬೇಕು. ಕೆಲವು ಗ್ರಾಹಕರು ವೆಂಡರ್ ಆಯ್ಕೆ ಮಾಡದೇ ಇರುವುದರಿಂದ ಅವರಿಗೆ ಯೋಜನೆ ಕುರಿತು ಸಮರ್ಪಕ ಅರಿವು ಇಲ್ಲದಿರುವುದು ಕಂಡು ಬರುತ್ತಿದೆ. ಅಂತಹ ಗ್ರಾಹಕರನ್ನು ಸಂಪರ್ಕಿಸಿ ಯೋಜನೆ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು” ಎಂದರು. “ಪಾಲಿಕೆ, ಜಿಲ್ಲಾಡಳಿತ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಯೋಜನೆ ಜಾರಿಗೊಳಿಸಬೇಕು. ಸಂಭಾವ್ಯ ಗ್ರಾಹಕರನ್ನು ಭೇಟಿಯಾಗಿ, ವೆಂಡರ್‌ಗಳು ಯೋಜನೆಯ ಲಾಭಗಳ ಬಗ್ಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಸಬೇಕು. ವೆಂಡರ್‌ಗಳು ಅರ್ಜಿ ಪರಿಶೀಲನೆಯಾದ ಐದು ದಿನಗಳಲ್ಲಿ ಸ್ಮಾರ್ಟ್ ಮೀಟರ್ ಸೇರಿದಂತೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ಮುಗಿಸಬೇಕು. ಸೋಲಾರ್ ರೂಫ್ ಟಾಪ್ ಅಳವಡಿಸಿಕೊಳ್ಳಲು ಗ್ರಾಹಕರಿಗೆ ವಿಶ್ವಾಸ ಮೂಡಿಸಬೇಕು” ಎಂದರು. ಸೆಸ್ಕ್ ತಾಂತ್ರಿಕ ನಿರ್ದೇಶಕರಾದ ಶರಣಮ್ಮ ಎಸ್.ಜಂಗಿನ, ಮುಖ್ಯ ಇಂಜಿನಿಯರ್ ಎಲ್. ಲೋಕೇಶ್, ಅಧೀಕ್ಷಕ ಇಂಜಿನಿಯರ್‌ಗಳಾದ ಸುನೀಲ್ ಕುಮಾರ್, ಸೋಮಶೇಖರ್, ಪ್ರಧಾನ ವ್ಯವಸ್ಥಾಪಕ ಎಚ್.ಆರ್.ದಿನೇಶ್, ಆರ್.ರಾಮಸ್ವಾಮಿ ಇತರರಿದ್ದರು.



### ‘ಸೋಲಾರ್ ತಿಂಗಳು’ ಆಚರಣೆ

**ಸಾರ್ವಜನಿಕರಲ್ಲಿ ಪ್ರಧಾನಮಂತ್ರಿ ಸೂರ್ಯಘರ್ ಯೋಜನೆ ಕುರಿತಂತೆ ಹೆಚ್ಚಿನ ಜಾಗೃತಿ ಮೂಡಿಸಿ, ಯೋಜನೆಗೆ ಪ್ರಚಾರ ಮೂಡಿಸುವ ಉದ್ದೇಶದಿಂದ 2026ರ ಮೇ ತಿಂಗಳನ್ನು ಸೋಲಾರ್ ತಿಂಗಳು' ಆಚರಿಸಲಾಗುತ್ತಿದೆ. ಬೇಸಿಗೆಯಲ್ಲಿ ಸೂರ್ಯ ಕಿರಣದ ಪ್ರಮಾಣ ಹೆಚ್ಚಿರುವ ಹಿನ್ನೆಲೆ, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ನಿರ್ದೇಶನದಂತೆ ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಈ ಅಭಿಯಾನ ನಡೆಸಲಾಗುತ್ತಿದೆ. ಸೋಲಾರ್ ತಿಂಗಳು ಆಚರಣೆ ಮೂಲಕ ಪಿಎಂ ಸೂರ್ಯಘರ್ ಯೋಜನೆಗೆ ಸಂಬಂಧಿಸಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳ ನೋಂದಣಿ, ಗರಿಷ್ಠ ಸಂಖ್ಯೆಯ ಸೋಲಾರ್ ರೂಫ್ ಟಾಪ್ ಘಟಕಗಳ ಅನುಷ್ಠಾನ, ಸ್ಥಳ ಪರಿಶೀಲನೆ ಕಾರ್ಯವನ್ನು ಚುರುಕುಗೊಳಿಸುವುದು ಹಾಗೂ ಹೊಸ ವೆಂಡರ್‌ಗಳ ನೋಂದಣಿ ಅಂಶಗಳ ಮೇಲೆ ವಿಶೇಷ ಒತ್ತು ನೀಡಲು ಸೂಚಿಸಲಾಗಿದೆ. ಪಿಎಂ ಸೂರ್ಯ ಘರ್ ಯೋಜನೆ ಕುರಿತ ಮಾಹಿತಿಗಾಗಿ ಹೆಲ್ಪ್ ಡೆಸ್ಕ್ ಸಂಖ್ಯೆ 9448994706 ಅಥವಾ ಹತ್ತಿರದ ಸೆಸ್ಕ್ ಕಚೇರಿಯನ್ನು ಸಂಪರ್ಕಿಸಬಹುದು.**

## ಭಾರಿ ಮಳೆ ನೀರಿನ ರಭಸಕ್ಕೆ ಕೊಚ್ಚಿಹೋದ ನಾಟಿಮಾಡಿದ ಈರುಳ್ಳಿ ಬೆಳ್ಳುಳ್ಳಿ ಬೆಳೆ



ಗುಂಡ್ಲುಪೇಟೆ: ತಾಲೂಕಿನ ಭೀಮನಬೀಡು ಗ್ರಾಮ ವ್ಯಾಪ್ತಿ ಸುರಿಯುತ್ತಿರುವ ಅಕಾಲಿಕ ಮಳೆಯಿಂದಾಗಿ ಇದೀಗ ತಾನೇ ನಾಟಿ ಮಾಡಿದ ಈರುಳ್ಳಿ ಬೆಳ್ಳುಳ್ಳಿ ಅರಿಶಿಣ ನಾಶವಾಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ರೈತರು ಲಕ್ಷಾಂತರ ರೂಪಾಯಿ ಸಾಲ ಮಾಡಿದ ಬೆಳೆಗಳು ಕಣ್ಣೆದುರೇ ಕೊಚ್ಚಿ ಹೋಗಿರುವುದು ಅನ್ನದಾತರು ಕಂಗಾಲಾಗಿದ್ದಾರೆ ಭೀಮನಬೀಡು ಗ್ರಾಮದ ಮಾದೇವ ಎಂಬ ರೈತ ಒಂದುವರೆ ಎಕರೆ ಬೆಳ್ಳುಳ್ಳಿ ನಾಟಿ ಮಾಡಿದ್ದು . ಹಾಗೂ ಈರುಳ್ಳಿ ಅರಿಶಿಣ ಸಂಪೂರ್ಣ ಕೊಚ್ಚಿ ಹೋಗಿರುವ ಘಟನೆ ನಡೆದಿದೆ.

ಅಕಾಲಿಕ ಮಳೆಗೆ ಲಕ್ಷಾಂತರ ರೂ.ಬೆಳೆ ನಷ್ಟವಾಗಿದ್ದು, ಕಂದಾಯ ಮತ್ತು ಕೃಷಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸರಕಾರಕ್ಕೆ ಪರಿಹಾರದ ವರದಿ ಸಲ್ಲಿಸಬೇಕು,ಜನಪ್ರತಿನಿಧಿಗಳೂ ರೈತರಿಗಾದ ಅನ್ಯಾಯದ ಬಗ್ಗೆ ಸರಕಾರದ ಗಮನ ಸೆಳೆದು ಸೂಕ್ತ ಪರಿಹಾರ ಒದಗಿಸುವಲ್ಲಿ ಮುಂದಾಗಬೇಕೆಂದು ರೈತ ಮುಖಂಡ ರಾಜು ಭೀಮನಭೀಡು ಒತ್ತಾಯಿಸಿದರು.

## ಶ್ರೀಗಳ ಆಶೀರ್ವಾದ ಪಡೆದ ಎಸ್.ಶ್ರೀವತ್ಸ



ಮೈಸೂರು: ಸರಸ್ವತಿಪುರಂ ನಲ್ಲಿರುವ ಶ್ರೀ ಕೃಷ್ಣಧಾಮದ 50ನೇ ವರ್ಷದ ಸುವರ್ಣ ಸಮಾರಂಭಕ್ಕೆ ಆಗಮಿಸಿದ್ದ ಮಂತ್ರಾಲಯ ಶ್ರೀ ರಾಘವೇಂದ್ರಸ್ವಾಮಿ ಮಠದ ಪೀಠಾ ಧಿಪತಿ ಶ್ರೀಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾ ದಂಗಳು ಹಾಗೂ ಉಡುಪಿ ಪೇಜಾವರ ಅಧೋಕ್ಷಜ ಮಠ ಪೀಠಾಧಿಪತಿ ಶ್ರೀಶ್ರೀ 1008 ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳ ಅವರನ್ನು ಭೇಟಿ ಮಾಡಿದ ಶಾಸಕ ಟಿ.ಎಸ್.ಶ್ರೀವತ್ಸ ಆಶೀರ್ವಾದ ಪಡೆದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ.ಟಿ ಪ್ರಕಾಶ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ.ಆರ್ ಸತ್ಯನಾರಾಯಣ್, ಹಿರಿಯ ಪತ್ರಕರ್ತರಾದ ರವೀಂದ್ರ ಜೋಶಿ, ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷರಾದ ರವಿ ಶಾಸ್ತ್ರಿ, ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಕಡಕೋಳ ಜಗದೀಶ್, ಟಿ.ಎಸ್ ಅರುಣ್, ಕೆ.ಎಂ ನಿಶಾಂತ್ ಸೇರಿದಂತೆ ಮತ್ತಿತರರಿದ್ದಾರೆ.

## ಗಡಿನಾಡು ರಕ್ಷಣಾ ಸೇನೆಯ ರಾಜ್ಯ ಕಾರ್ಯದರ್ಶಿ ನೇಮಕ

ಗುಂಡ್ಲುಪೇಟೆ: ಗಡಿನಾಡು ರಕ್ಷಣಾ ಸೇನೆಯ ರಾಜ್ಯ ಕಾರ್ಯದರ್ಶಿಯಾಗಿ ಕಾಳಿಂಗಸ್ವಾಮಿ ಸಿದ್ಧಾರ್ಥ್ ರವರನ್ನು ರಾಜ್ಯ ಅಧ್ಯಕ್ಷರಾದ ಮುನೀರ್ ಪಾಷ ಆದೇಶ ಪತ್ರ ನೀಡಿ, ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯ ಅಧ್ಯಕ್ಷರಾದ ಮುನೀರ್ ಪಾಷ, ಕನ್ನಡ ನೆಲ, ಜಲ, ಭಾಷೆ ವಿಚಾರದಲ್ಲಿ ಸಕ್ರಿಯವಾಗಿ ಭಾಗವಹಿಸಿ ನಾಡಿನ ಏಳಿಗೆಗೆ ಶ್ರಮಿಸಬೇಕೆಂದು ತಿಳಿಸಿದರು.

ರಾಜ್ಯ ಯುವ ಘಟಕದ ಅಧ್ಯಕ್ಷ ಇಲಿಯಾಸ್(ಕುಮಾರ್) ಮಾತನಾಡಿ, ಒಂದು ತಿಂಗಳ ಒಳಗೆ ರಾಜ್ಯದ 31 ಜಿಲ್ಲಾ ಪದಾಧಿಕಾರಿಗಳನ್ನು ನೇಮಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

ಇದೇ ಸಮಯದಲ್ಲಿ ತಾಲ್ಲೂಕು ಅಧ್ಯಕ್ಷ ಅಬ್ದುಲ್ ರಶೀದ್ ಸಂಘಟನೆಯ ಘೋಷಣೆ ಪತ್ರ ಹಾಗೂ ಶಾಲು ಹೊದಿಸಿ ಸಂಘಟನೆಯ ಜವಾಬ್ದಾರಿಯ ಕುರಿತು ಮಾಹಿತಿ ನೀಡಿದರು.



### ಆದೇಶ ನೀಡುವಂತೆ ಒತ್ತಾಯಿಸಿ ಕನ್ನಡ ಮಹಾಸಭಾವತಿಯಿಂದ ಮನವಿ

# ನೀಟ್ ಪರೀಕ್ಷೆಗಳನ್ನು ಆಯಾ ರಾಜ್ಯ ಸರ್ಕಾರಗಳೇ ನಡೆಸಲು



ಚಾಮರಾಜನಗರ: ವೈದ್ಯಕೀಯ ವಿದ್ಯಾಭ್ಯಾಸದ ಪ್ರವೇಶಕ್ಕೆ ಸಂಬಂಧಿಸಿದಂತೆ ನಡೆಸುವ ನೀಟ್ ಪರೀಕ್ಷೆಗಳನ್ನು ಆಯಾಯ ರಾಜ್ಯ ಸರ್ಕಾರಗಳೇ ನಡೆಸಲು ಆದೇಶ ನೀಡುವಂತೆ ಒತ್ತಾಯಿಸಿ

ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರ ಮುಖಾಂತರ ಪ್ರಧಾನಮಂತ್ರಿ ನರೇಂದ್ರಮೋದಿ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಾರಿಯ ವೈದ್ಯಕೀಯ ವಿದ್ಯಾಭ್ಯಾಸದ ಪ್ರವೇಶಕ್ಕೆ ಸಂಬಂಧಿಸಿದಂತೆ ದೇಶಾದ್ಯಂತ ನಡೆದ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ನಾಶವಾಗಿದೆ ಮತ್ತು ಈ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಅರ್ಹ ವಿದ್ಯಾರ್ಥಿಗಳು ಬಹಳ ಜನ ಆತ್ಮಹತ್ಯೆಯನ್ನು ಸಹ ಮಾಡಿಕೊಂಡಿರುತ್ತಾರೆ. ಇದು ಅತ್ಯಂತ ಖಂಡನೀಯವಾದದು. ಕೇಂದ್ರ ಸರ್ಕಾರ ಇದರ ಬಗ್ಗೆ ತೀವ್ರವಾಗಿ ನಿಗಾವಹಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ತೆಗೆದುಕೊಳಬೇಕು. ಮತ್ತು ಮುಂದೆ ಇಂತಹ ಅನಾಹುತಗಳು ನಡೆಯದ ರೀತಿಯಲ್ಲಿ ಮುನ್ನೆಚ್ಚರಿಕೆ ಕ್ರಮವನ್ನು ಕೇಂದ್ರ ಸರ್ಕಾರ ವಹಿಸಬೇಕು. ಮತ್ತು ಇಂತಹ ಒಂದು ಅನಾಹುತ ನಡೆದಿರುವ ಹಿನ್ನಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವರು ಇದರ ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ನೀಡಬೇಕಾಗಿ ಮತ್ತು ಇದರ ಜೊತೆಗೆ ಇನ್ನು ಮುಂದೆ ಕೇಂದ್ರ ಸರ್ಕಾರ ಈ ವೈದ್ಯಕೀಯ ವಿದ್ಯಾಭ್ಯಾಸದ ಪರೀಕ್ಷೆಗಳನ್ನು ಇನ್ನು ಮುಂದೆ ಆಯಾಯ ರಾಜ್ಯ ಸರ್ಕಾರಗಳಿಗೆ ನಡೆಸುವಂತೆ ಆದೇಶ ನೀಡಬೇಕಾಗಿದೆ. ಈ ಹಿಂದೆ ಈ ನೀಟ್ ಪರೀಕ್ಷೆಗಳನ್ನು ಆಯಾ ರಾಜ್ಯ ಸರ್ಕಾರಗಳೇ ನಡೆಸುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರ ಈ ನೀಟ್ ಪರೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನು ತೆಗೆದುಕೊಂಡಿದೆ. ಆದರೆ ಇದು ಇಡೀ ದೇಶಾದ್ಯಂತ ಈ ನೀಟ್ ಪರೀಕ್ಷೆಗಳು ಅವ್ಯವಸ್ಥೆಯಿಂದ ಕೂಡಿದ್ದು ವಿದ್ಯಾರ್ಥಿಗಳಿಗೆ ಇದು ಒಂದು ರೀತಿಯ ಮರಣ ಶಾಸನವಾಗಿದೆ. ಆದ್ದರಿಂದ ಈ ತಕ್ಷಣ ತಾವು ಮುಂದಿನ ವರ್ಷದಿಂದ ಈ ನೀಟ್ ಪರೀಕ್ಷೆಗಳನ್ನು ಆಯಾಯ ರಾಜ್ಯ ಸರ್ಕಾರಗಳೇ ನಡೆಸುವಂತೆ ಅನುಮತಿ ನೀಡುವಂತೆ ಪ್ರಧಾನಮಂತ್ರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಎಡಿಸಿ ಜವರೇಗೌಡ, ಪಣ್ಯದಹುಂಡಿ ರಾಜು, ಹೊಮ್ಮ ಲೋಕೇಶ್,ಅರುಣ್ ಕುಮಾರ್ ಗೌಡ, ರವಿಚಂದ್ರ ಪ್ರಸಾದ್ ಕಹಲೆ, ರಾಜಪ್ಪ, ಶಿವು, ಹಾಜರಿದ್ದರು.

# ಶಿಷ್ಯವೇತನ ಜಾರಿಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ



ಮೈಸೂರು: ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸಂಶೋಧಕರುಗಳಿಗೆ ಶಿಷ್ಯವೇತನ ನೀಡುವಂತೆ ಒತ್ತಾಯಿಸಿ ಶಿಷ್ಯವೇತನ ಸಂಶೋಧಕರ ಸಂಘದ ವತಿಯಿಂದ ನಗರದ ಕ್ರಾಫರ್ಡ್ ಭವನದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ವಿವಿ ವ್ಯಾಪ್ತಿಯ ಕಾಲೇಜುಗಳು, ಮಾನಸಗಂಗೋತ್ರಿಯಲ್ಲಿ ಪಿಎಚ್.ಡಿ ಪ್ರವೇಶಾತಿ ಪಡೆದು ಸಂಶೋಧನೆ ಕೈಗೊಂಡಿರುವ ಸಂಶೋಧಕರುಗಳು 2026-2027ನೇ ಸಾಲಿನಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ವಿಶೇಷ ಘಟಕದ ವತಿಯಿಂದ ನೀಡಲಾಗುವ ಶಿಷ್ಯವೇತನಕ್ಕೆ 96 ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ಮೈಸೂರು ವಿಶ್ವವಿದ್ಯಾನಿಲಯ ಕೇವಲ 20 ಸಂಶೋಧಕರುಗಳಿಗೆ ಮಾತ್ರ ಶಿಷ್ಯವೇತನ ಮಂಜೂರು ಮಾಡುವ ವಿದ್ಯಾರ್ಥಿ ವಿರೋಧಿ ಮಾನದಂಡ ನಿಗದಿ ಮಾಡಿದೆ. ಇದರಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳು ಶಿಷ್ಯವೇತನರಹಿತವಾಗಿ ಪಿಎಚ್.ಡಿ ಪದವಿ ಪಡೆಯಲು ಹರಸಾಹಸ ಪಡುವಂತಾಗಿದೆ ಎಂದು ಕಿಡಿ ಕಾರಿದರು.

ಹೆಚ್ಚುವರಿ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ ವರ್ಷಕ್ಕೆ 23 ಕೋಟಿಯನ್ನು ಅನಾವಶ್ಯಕವಾಗಿ ನೀಡುತ್ತಿದ್ದು, ಇದು ವಿಶ್ವವಿದ್ಯಾನಿಲಯದ ಹಣ ಪೋಲಾಗುತ್ತಿರುವುದಕ್ಕೆ ಸ್ಪಷ್ಟ ಸಾಕ್ಷಿ. ಅಲ್ಲದೆ, ಈ ವರ್ಷದ ವಿಶ್ವವಿದ್ಯಾನಿಲಯದ ಬಜೆಟ್‌ನ ಒಟ್ಟು 400 ಕೋಟಿಗಳಲ್ಲಿ ನಿಯಮಾನುಸಾರ ಶೇ.24ರಷ್ಟನ್ನು ಎಸ್‌ಸಿ, ಎಸ್‌ಟಿ ಉಪಯೋಜನೆಗಳಿಗೆ ಮೀಸಲಿಟ್ಟರೆ 96-97 ಕೋಟಿ ನೀಡಬೇಕಾಗುತ್ತದೆ. ಆದರೆ, ವಿಶ್ವವಿದ್ಯಾನಿಲಯ ಎಸ್‌ಸಿ, ಎಸ್‌ಟಿ ಸಂಶೋಧನೆಗೆ ಯಾವುದೇ ರೀತಿಯ ಮೊತ್ತವನ್ನು ಮೀಸಲಿಡದೆ ವಂಚಿಸುತ್ತಿದೆ. ಆನ್‌ಲೈನ್ ಪ್ರೋಗ್ರಾಮ್‌ನಲ್ಲಿ 138 ಕೋಟಿ ಲಾಭ ತೋರಿಸಿರುವ ವಿಶ್ವವಿದ್ಯಾನಿಲಯ, ವಿದ್ಯಾರ್ಥಿಗಳಿಗೆ ಸಂಶೋಧನಾ ಶಿಷ್ಯವೇತನ ನೀಡಲು ತೀವ್ರ ಆರ್ಥಿಕ ಸಂಕಷ್ಟವಿರುವಂತೆ ನಟಿಸುತ್ತಾ ತನ್ನ ಎಸ್‌ಸಿ, ಎಸ್‌ಟಿ ವಿರೋಧಿ ನಡೆ ಪ್ರದರ್ಶಿಸುತ್ತಿದೆ ಎಂದು ದೂರಿದರು. ಕೂಡಲೇ ಪ್ರಸ್ತುತ ಸಾಲಿನಲ್ಲಿ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹ ಸಂಶೋಧಕರುಗಳಿಗೂ ತಾರತಮ್ಯವಿಲ್ಲದೆ ಶಿಷ್ಯವೇತನವನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿದರು.


ಪ್ರತಿಭಟನೆಯಲ್ಲಿ ಸಂಚಾಲಕರಾದ ರವಿಕುಮಾರ್ ಮುಡಿಗುಂಡ, ನವೀನ್ ಅಳಗಂಚಿ, ಮಾದೇಶ್, ದೀಪ, ಮೌನ ದೊರೆ, ಧೀರಜ್, ನವೀನ್, ವಿಶಾಖ್.ಬಿ.ಎನ್, ಸಣ್ಣಮಾದು, ದಲಿತ ಸಂಘರ್ಷ ಸಮಿತಿಯ ಚೋರನಹಳ್ಳಿ ಶಿವಣ್ಣ ಸೇರಿ ಹಲವರು ಭಾಗವಹಿಸಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಎರಡೂ ಹೆಸರಿನವಳು ನಾನೇ

ಮೈಸೂರು ಸಿದ್ಧಾರ್ಥನಗರ ಜ್ಞಾನಮಾರ್ಗ 5ನೇ ಕ್ರಾಸ್ 4ನೇ ಮುಖ್ಯರಸ್ತೆ ಮನೆ ನಂ. 668ರಲ್ಲಿ ವಾಸವಾಗಿರುವ ಅನಂತಶೆಟ್ಟಿ ಕೆ. ಎಸ್ ರವರ ಮಗಳಾದ ಸುಮಾರು 45 ವರ್ಷ ವಯಸ್ಸಿನ ಸೌಮ್ಯ. ಕೆ.ಎ ಆದ ನಾನು ನನ್ನ ಹೆಸರು ಆಧಾರ್ ಕಾರ್ಡ್ ನಲ್ಲಿ ಸೌಮ್ಯ. ಕೆ.ಎ ಎಂದು ಇರುತ್ತದೆ. ಶ್ರೀಕನ್ಯಕಾಪರಮೇಶ್ವರಿ ಕೋ- ಆಪರೇಟಿವ್ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಬಿ.ಎಸ್. ಸೌಮ್ಯ ಎಂಬುದಾಗಿ ಇರುತ್ತದೆ. ಕೆ.ಎ. ಸೌಮ್ಯ ಮತ್ತು ಬಿ.ಎಸ್. ಸೌಮ್ಯ ಎಂಬ ಎರಡೂ ಹೆಸರಿನವಳು ನಾನೇ ಎಂದು ನೋಟರಿ ಅವರ ಸಮಕ್ಷಮ ಪ್ರಮಾಣೀಕರಿಸಿರುತ್ತೇನೆ.

# ಅರ್ಹರಿಗೆ ಗ್ಯಾರಂಟಿ ತಲುಪಿಸಿ



ಮೈಸೂರು: ಅರ್ಹರಿಗೂ ಗ್ಯಾರಂಟಿ ಸೌಲಭ್ಯ ತಲುಪಿಸುವ ನಿಟ್ಟಿನಲ್ಲಿ ಆಹಾರ ಇಲಾಖೆ ಹಾಗೂ ನ್ಯಾಯಬೆಲೆ ಅಂಗಡಿ ವರ್ತಕರು ಜಂಟಿ ಕಾರ್ಯನಿರ್ವಹಿಸಿ ಎಂದು ಮೈಸೂರು ನಗರ ಗ್ಯಾರಂಟಿ ಅನುಷ್ಠಾನ ಅಧ್ಯಕ್ಷೆ ಪುಷ್ಪವಲ್ಲಿ ತಾಕೀತು ಮಾಡಿದರು.

ನಗರಪಾಲಿಕೆ ಸಭಾಂಗಣದಲ್ಲಿ ಆಯೋಜಿಸಿದ್ದ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ಕೆಲವು ಅರ್ಹರಿಗೆ ಸಾಲ ಇತ್ಯಾದಿಗಳಿಗಾಗಿ ಜಿಎಸ್ ಟಿ ಮಾಡಿ ದ್ದಾರೆ. ಅಲ್ಲದೆ ವೈಯಕ್ತಿಕ ಕಾರಣಕ್ಕೆ ಸಾಲ ಪಡೆದಿದ್ದು ಅಂತಹವರಿಗೂ ಸಹ ಗ್ಯಾರಂಟಿಯಿಂದ ಕೈ ಬಿಡಲಾಗಿದೆ. ಅಂತಹ ಅರ್ಹರನ್ನು ಗುರುತಿಸಿ ಗ್ಯಾರಂಟಿ ಸೌಲಭ್ಯ ನೀಡುವಂತೆ ಹೇಳಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ರಾಕೇಶ್ ಮಾತನಾಡಿ, ಕಾಳಸಂತೆಯಲ್ಲಿ ಪಡಿತರ ಮಾರಾಟ ಆಗುತ್ತಿರುವ ಪ್ರಕರಣಗಳು ಕಾಣಿಸುತ್ತಿವೆ. ಅಂತಹವರನ್ನು ಪತ್ತೆ ಹಚ್ಚಿ ತಡೆಯಬೇಕು. ಜತೆಗೆ ಫಲಾನುಭವಿಗಳು ಯಾವ ಕಾರಣಕ್ಕೆ ಪಡಿತರವನ್ನು ಮಾರಾಟ ಮಾಡುತ್ತಿದ್ದಾರೆಂಬ ಅಭಿಪ್ರಾಯ ಸಂಗ್ರಹಿಸಿ ಸಮಸ್ಯೆ ಮೂಲ ಇತ್ಯರ್ಥಕ್ಕೆ ಅಧಿಕಾರಿಗಳು ಮುಂದಾಗಬೇಕೆಂದು ತಿಳಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ, ನರಸಿಂಹರಾಜ ವಿಧಾನಸಭಾ ಕ್ಷೇತ್ರ ವತಿಯಿಂದ ನಗರ ಪಾಲಿಕೆಯ ಮುಖ್ಯ ಕಚೇರಿಯಲ್ಲಿ ಹಮ್ಮಿಕೊಳಲಾಗಿದ ಆಹಾರ ಇಲಾಖೆ ಹಾಗೂ ನ್ಯಾಯಬೆಲೆ ಅಂಗಡಿ ವರ್ತಕರ ಸಭೆಯನ್ನು ನಡೆಸಲಾಯಿತು. ನರಸಿಂಹರಾಜ ವಿಧಾನಸಭಾ ಕ್ಷೇತ್ರ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎನ್.ಮಹ ದೇವ್, ಆಹಾರ ಇಲಾಖೆ ಸಹಾಯಕ ನಿರ್ದೇಶಕ ಶ್ರೀಧರ್, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ರಾಕೇಶ್, ಸುರೇಂದ್ರ, ಶಶಿ ಕುಮಾರ್, ರೇಷ್ಮಾ, ಅಹ್ಮದ್ ಸಲೀಮ್, ಮೊಹಮದ್ ಸಾದಾಬ್, ವಿಜಯ ಲಕ್ಷ್ಮಿ, ಸದಸ್ಯ ಕಾರ್ಯದರ್ಶಿ ಲೋಕೇಶ್ ಇದ್ದರು.

# ಪಪಂ ಕಾರ್ಯಾಲಯ ಸ್ಥಳಾಂತರಕ್ಕೆ ಒತ್ತಾಯ



ಮೈಸೂರು: ರಮ್ಮನಹಳ್ಳಿ ಪಟ್ಟಣ ಪಂಚಾಯತಿ ಕಾರ್ಯಾಲಯವನ್ನು ಮಾನಸಿ ನಗರದಲ್ಲಿ ಈಗಾಗಲೇ ಬಾಡಿಗೆ ಪಡೆದಿರುವ ಕಟ್ಟಡಕ್ಕೆ ಸ್ಥಳಾಂತರ ಮಾಡಿ ಎಂದು ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಸೇರಿದ ವಿವಿಧ ಬಡಾವಣೆಗಳ ನಿವಾಸಿಗಳು ಒತ್ತಾಯಿಸಿದ್ದಾರೆ. ಈ ವಿಚಾರವಾಗಿ ಮಂಗಳವಾರ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಮಾಡಿದರು.

ಮಾನಸಿನಗರದ ನಂದಿನಿ ಲೇಔಟಿನಲ್ಲಿ ಕಳೆದ ಒಂದು ವರ್ಷದ ಹಿಂದೆ ಪಟ್ಟಣ ಪಂಚಾಯತಿ ಕಾರ್ಯಾಲಯಕ್ಕೆಂದೇ ಖಾಸಗೀ ಕಟ್ಟಡವನ್ನು ಬಾಡಿಗೆ ಪಡೆದು ಬಾಡಿಗೆಯನ್ನೂ ಪಾವತಿಸಲಾಗುತ್ತಿದೆ. ಆದರೆ, ಇನ್ನೂ ಕೂಡ ರಮ್ಮನಹಳ್ಳಿಯ ಹಳೇ ಕಟ್ಟಡದಲ್ಲೇ ಕಚೇರಿ ಕೆಲಸ ನಡೆಯುತ್ತಿದೆ. ಆ ಕಟ್ಟಡ ತುಂಬಾ ಹಳೆಯದಾಗಿದ್ದು ದುರಸ್ತಿಗೊಂಡಿದೆ. ಜೊತೆಗೆ ಸೂಕ್ತ ಮೂಲಭೂತ ವ್ಯವಸ್ಥೆಗಳಿಲ್ಲದೆ ಸಾರ್ವಜನಿಕರಿಗೆ ಖಾತೆ,ಕಂದಾಯ ಮಾಡಿಸಲು ತೊಂದರೆಯಾಗುತ್ತಿದೆ. ಅಧಿಕಾರಿಗಳು, ಸಿಬ್ಬಂದಿ ಸಮರ್ಪಕವಾಗಿ ಕೆಲಸ ಮಾಡುತ್ತಿದ್ದು, ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಸೇರಿರುವ ಬಡಾವಣೆ ನಿವಾಸಿಗಳು ಅಷ್ಟು ದೂರ ಹೋಗಲು ತೊಂದರೆಯಾಗುತ್ತಿದೆ.ಹಾಗಾಗಿ ಸಂಬಂಧಪಟ್ಟವರು ರಮ್ಮನಹಳ್ಳಿಯಲ್ಲಿ ನಡೆಯುತ್ತಿರುವ ಕಾರ್ಯಾಲಯವನ್ನು ಮಾನಸಿನಗರದಲ್ಲಿರುವ ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡಬೇಕು ಎನ್ನುವುದು ಸ್ಥಳೀಯ ನಿವಾಸಿಗಳ ಆಗ್ರಹವಾಗಿದೆ.

# ಸದಸ್ಯತ್ವಕ್ಕೆ ಚಾಲನೆ ನೀಡಿದ ಕೋಟೆ ಎಂ.ಶಿವಣ್ಣ

## ಕರ್ನಾಟಕ ಮಾದರ ಮಹಾ ಸಭಾಕ್ಕೆ 2000 ಜನರ ಸದಸ್ಯತ್ವ

ಎಚ್.ಡಿ.ಕೋಟೆ: ಕರ್ನಾಟಕ ಮಾದರ ಮಹಾ ಸಭಾಕ್ಕೆ ಎರಡು ತಾಲೂಕಿನಿಂದ 2000 ಜನರನ್ನು ಸದಸ್ಯತ್ವ ನೋಂದಣಿ ಮಾಡಿಸಬೇಕು ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾದಿಗ ಸಮುದಾಯದ ಮುಖಂಡರಿಗೆ ಕರೆ ನೀಡಿದರು.

ಪಟ್ಟಣದ ಹೃದಯ ಭಾಗದಲ್ಲಿರುವ ಡಾ.ಬಾಬು ಜಗಜೀವನ್ ರಾಮ್ ಸಮುದಾಯ ಭವನದಲ್ಲಿ ನಡೆದ ಮಾದರ ಮಹಾಸಭಾದ ಸದಸ್ಯತ್ವ ನೋಂದಣಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕರ್ನಾಟಕ ಮಾದರ ಮಹಾಸಭಾದ ಉದ್ದೇಶ ಮಾದಿಗ ಸಮುದಾಯವನ್ನು ಒಂದೇ ವೇದಿಕೆಗೆ ಕರೆತಂದು ಸಂಘಟನೆ ಮಾಡುವುದು. ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಕಾಣಲು ಇದೊಂದು ಪ್ರಮುಖ ಪಾತ್ರ ವಹಿಸುತ್ತದೆ ರಾಜ್ಯದಲ್ಲಿ ಬಹುದೊಡ್ಡ ಸಂಘಟನೆಯಾಗಿದೆ. ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ ನಮ್ಮ ಸಮುದಾಯಕ್ಕೆ ಸಿಗಬೇಕಾದ ನ್ಯಾಯ ಮತ್ತು ಹಕ್ಕುಗಳಿಗಾಗಿ ನಾವೆಲ್ಲರೂ ಒಗ್ಗೂಡಬೇಕಾಗಿದೆ. ಸಂಘಟನೆಯ ಮೂಲಕವೇ ನಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಹಾಗಾಗಿ ಮಾದರ ಮಹಾಸಭಾಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರನ್ನು ಸೇರಿಸಿ ಸಮಾಜದ ಬಲವರ್ಧನೆಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ಅಧ್ಯಕ್ಷ ಸಿ.ತಿಮ್ಮಯ್ಯ ಮಾತನಾಡಿ, ಸಮುದಾಯ ಅಭಿವೃದ್ಧಿ ಹೊಂದಲು ಈ ಸಂಘಟನೆ ಪ್ರಮುಖ ಪಾತ್ರ ವಹಿಸುತ್ತದೆ. ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಪ್ರತಿ ಗ್ರಾಮಗಳಿಗೆ ತೆರಳಿ, ಮಾದಾರ ಮಹಾಸಭಾದ ಉದ್ದೇಶವನ್ನು ಜನರಿಗೆ ತಿಳಿಸಿ ಸದಸ್ಯತ್ವ ನೋಂದಣಿ ಮಾಡಿಸಿ ಸಂಘಟನೆ ಹಾಗೂ ಸಮುದಾಯವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕು ಎಂದು ಹೇಳಿದರು.



> ಮಾದರ ಮಹಾಸಭಾ ಸಂಘಟನೆಯ ಪ್ರಮುಖ ಉದ್ದೇಶ ಸಮುದಾಯವನ್ನು ಒಗ್ಗೂಡಿಸುವುದು ಜೊತೆಗೆ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಮುದಾಯವನ್ನು ಉತ್ತೇಜಿಸುವ ಸಲುವಾಗಿ ಸಚಿವ ಕೆ.ಎಚ್. ಮುನಿಯಪ್ಪ ಅವರ ಅಧ್ಯಕ್ಷತೆಯಲ್ಲಿ ಈ ಸಂಘಟನೆ ನಿರ್ಮಾಣವಾಗಿದೆ.
>
> **-ಪರಶಿವಮೂರ್ತಿ** ಅಧ್ಯಕ್ಷ, ತಾಲೂಕು ಮಾದಾರ ಮಹಾಸಭಾ

> ರಾಜ್ಯದಲ್ಲಿ ಮಾದರ ಮಹಾಸಭಾ ಪಕ್ಷಾತೀತವಾಗಿ ರಚನೆ ಗೊಂಡಿರುವ ಬಹುದೊಡ್ಡ ಸಂಘಟನೆ. ಈ ಸಂಘಟನೆಯ ಮೂಲಕ ಸಮುದಾಯದ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಈ ಮಹಾಸಭಾ ಅನುಕೂಲ ಮಾಡಿಕೊಡುತ್ತದೆ.
>
> **-ಬೆಟ್ಟಸ್ವಾಮಿ** ಅಧ್ಯಕ್ಷ, ಸರಗೂರು ಮಾದರ ಮಹಾಸಭಾ.

ಮುಖಂಡರಾದ ಹಿರೇಹಳ್ಳಿ ಪ್ರಕಾಶ್, ಉಡ ನಾಗರಾಜ್, ಚಲುವರಾಜು, ಸಿ. ಕಾಳಪ್ಪಾಜಿ, ಡಿ. ನಾಗರಾಜು, ಶಿವಯ್ಯ, ಎಡತೊರೆ ಶಿವರಾಜ್, ವೆಂಕಟಪ್ಪ, ದೇವನಾಥ್, ರವೀಶ್, ಗಿರಿ ಪ್ರಸಾದ್, ಮಹದೇವು, ಸಿಂಗಯ್ಯ, ಚೌಡಯ್ಯ, ಶಿವಲಿಂಗಯ್ಯ, ನಾಗರಾಜ್, ಮಹದೇವ, ಜಯಕುಮಾರ್, ಗುರುಮಲ್ಲು, ಶ್ರೀನಿವಾಸ್, ಶಿವರಾಜ್, ಮಂಜುನಾಥ್, ಶಿವಾಜಿ, ಚಿಕ್ಕಸ್ವಾಮಿ, ರಮೇಶ್, ವೈರ್ ಮುಡಿ, ಹನು ಮಂತ, ಚೇತನ್, ಮಾದು ಸೇರಿದಂತೆ ಮಾದರ ಮಹಾಸಭಾದ ಪದಾಧಿಕಾರಿಗಳು ಮುಖಂಡರು ಇದ್ದರು.

## ಮಾದಿಗ ಸಮುದಾಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಚಾಮರಾಜನಗರ: ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟವು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.60 ರಷ್ಟು ಅಂಕ ಪಡೆದಿರುವ ಸಮುದಾಯದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಬರುವ ಜೂ.7 ರಂದು ನಗರದಲ್ಲಿ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಗೌರವ ಜಿಲ್ಲಾಧ್ಯಕ್ಷ ಬಸವನಪುರ ರಾಜಶೇಖರ ತಿಳಿಸಿದರು.

ಅಂದು ನಗರದ ಡಾ.ರಾಜ್ ಕುಮಾರ್ ರಂಗ ಮಂದಿರದಲ್ಲಿ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗುತ್ತದೆ. ನಮ್ಮ ಸಂಘಟನೆ ಮೂಲ ಉದ್ದೇಶ ಸಮುದಾಯ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವುದು ಮೊದಲ ಆದ್ಯತೆ ಯಾಗಿದ್ದು, ಅದರಂತೆ ಸಮುದಾಯ ಪ್ರತಿಭಾ ವಿದ್ಯಾರ್ಥಿಗಳಿಗೆ ಒಕ್ಕೂಟದ ವತಿಯಿಂದ ಪ್ರತಿಭಾ ಪುರಸ್ಕಾರ ಆಯೋಜಿಸಲಾಗಿದೆ. ಸಮುದಾಯದ ವಿದ್ಯಾರ್ಥಿಗಳ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್.ಹೆಚ್.ನಾಗರಾಜು ಮಾತನಾಡಿದರು.

ಹೆಚ್ಚಿನ ಮಾಹಿತಿಗಾಗಿ : ಗುಂಡ್ಲುಪೇಟೆ ತಾಲೂಕು ಹಸಗೂಲಿ ಸಿದ್ದಯ್ಯ- 9591930446, ಚಾಮರಾಜನಗರ ತಾಲೂಕು ಶಿವಕುಮಾರ್ -7483934405, ಯಳಂದೂರು ತಾಲೂಕು ಬಸವರಾಜು -9986216352, ಕೊಳ್ಳೇಗಾಲ ತಾಲೂಕು ಗೋಪಾಲ್- 6360318044, ಹನೂರು ತಾಲೂಕು ಬಿ.ಸಿ.ಸುರೇಶ್- 9945622014 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು ಎಂದು ತಿಳಿಸಿದರು.

ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಹೆಚ್.ಹೆಚ್.ನಾಗರಾಜು, ಗೌರವಾಧ್ಯಕ್ಷ ಬಸವನಪುರ ರಾಜಶೇಖರ, ಗೌರವ ಸಲಹೆಗಾರ ಅರಕಲವಾಡಿ ಜವರಯ್ಯ, ಜಿಲ್ಲಾ ಉಪಾಧ್ಯಕ್ಷರಾದ ಹಸಗೂಲಿ ಸಿದ್ದಯ್ಯ, ಸಿ.ಚನ್ನ ಬಸವಯ್ಯ, ಬಿ.ಸಿ.ಸುರೇಶ್, ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಗೋಪಾಲ್, ಸಹ ಕಾರ್ಯದರ್ಶಿ ಶಿವಕುಮಾರ್ ರಾಮಸಮುದ್ರ ಹಾಜರಿದ್ದರು.




# ಸಬ್ಸೆ-ಡೋರ್ ಸಬ್ಸೆ ಪೆಹಲೆ ಅಭಿಯಾನ



ಚಾಮರಾಜನಗರ: ಬುಡಕಟ್ಟು ಸಮುದಾಯದವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಪ್ರಯೋಜನ ಪಡೆಯಲು ಬೇಕಾಗುವ ದಾಖಲಾತಿಗಳನ್ನು ಒದಗಿಸುವ ಸಂಬಂಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಗ್ರಾಮ ಮಟ್ಟದಲ್ಲಿ ಅರಿವು ಹಾಗೂ ಸೌಲಭ್ಯ ಕುರಿತ ಶಿಬಿರಗಳ ಆಯೋಜನೆ ಹಾಗೂ ಪಿಎಂ ಜನ್ ಮನ್ ಹಾಗೂ ದರ್ತಿ ಅಬಾ ಜನ್ ಜಾತಿಯ ಗ್ರಾಮ ಉತ್ಕರ್ಷ್ ಅಭಿಯಾನ ಯೋಜನೆಯಡಿ ಜನ್ ಭಾಗೀದಾರಿ ಸಬ್ಸೆ-ಡೋರ್ ಸಬ್ಸೆ ಪೆಹಲೆ ಅಭಿಯಾನಕ್ಕೆ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಲನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಅಭಿಯಾನಕ್ಕೆ ಚಾಲನೆ ನೀಡಿದ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಇತರೆ ಗಣ್ಯರು ದರ್ತಿ ಅಬಾ ಯೋಜನೆಗಳ ಮಾಹಿತಿಯನ್ನೊಳಗೊಂಡ ಪೋಸ್ಟರ್ ಅನ್ನು ಪ್ರದರ್ಶಿಸಿದರು. ಇದೇ ವೇಳೆ ಹಾಸ್ಟೆಲ್ ಮಕ್ಕಳಿಗೆ ಜನನ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತು ರಾಜು, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ಎಸ್. ಬಿಂದ್ಯಾ ಹಾಗೂ ಇತರರು ಹಾಜರಿದ್ದರು. ಜಿಲ್ಲೆಯಲ್ಲಿ ಶೇ. 50ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದ ಜನರು ವಾಸಿಸುವ ಚಾಮರಾಜ ನಗರ ತಾಲೂಕಿನ ಬೆಡಗುಳಿ, ಕಣ್ಣೇಗಾಲ, ಯಾನಗಹಳ್ಳಿ, ಮೇಲ್ ಮಾಳ, ಗುಂಡ್ಲುಪೇಟೆ ತಾಲೂಕಿನ ತೊಂಡ ವಾಡಿ, ಸೋಮನಪುರ, ಮದ್ದೂರು, ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟ, ಬಿ. ಕಂದಹಳ್ಳಿ, ಕೊಳ್ಳೇ ಗಾಲ ತಾಲೂಕಿನ ಪಾಳ್ಯ ಯೋಜನೆಗೆ ಆಯ್ಕೆಯಾಗಿದೆ.

# ಸೌಹಾರ್ದ ಸಂಘಗಳ ಕಾಯ್ದೆಗಳ ಅರಿವಿರಲಿ: ಎಚ್.ವಿ.ರಾಜೀವ್



ಮೈಸೂರು: ಸೌಹಾರ್ದ ಸಂಘಗಳ ಕಾಯ್ದೆ, ಬದಲಾವಣೆಯ ಬಗ್ಗೆ ತಿಳಿದುಕೊಳ್ಳುವುದು ಬಹಳ ಮುಖ್ಯವಾದದ್ದು ಎಂದು ಶಿಕ್ಷಣ ನೀತಿ ಸಲಹಾ ಸಮಿತಿ ಸದಸ್ಯರೂ ಆದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದರು.

ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಆವರಣದ ಎಸ್.ಪಿ.ಭಟ್ ಹಾಲ್‌ನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ವತಿಯಿಂದ ಮಂಗಳವಾರ ವಿಷಯಾಧರಿತ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದಿಂದ ಇಂತಹ ವಿಷಯಾಧರಿತ ತರಬೇತಿ ಕಾರ್ಯಕ್ರಮ ಮಾಡುತ್ತಿರುವುದರಿಂದ ಜಾಗೃತವಾಗಿರಲು ಸಾಧ್ಯವಾಗಿದೆ. ಇತ್ತೀಚೆಗೆ ನಿಗಮಗಳಿಗೆ ಕುರಿತಂತೆ ಕೆಲವು ತಿದ್ದುಪಡಿಗಳು ಬಂದವು. ನಾಮಿನೇಷನ್‌ಗೆ ಅವಕಾಶ ಮಾಡುವುದು, ಆಡಿಟ್ ಅನ್ನು ಮೂರು ವರ್ಷಕ್ಕೊಮ್ಮೆ ಸರ್ಕಾರಿ ಆಡಿಟ್ ಆಗಬೇಕು ಸೇರಿದಂತೆ ಅನೇಕ ತಿದ್ದುಪಡಿಗಳನ್ನು ಮಾಡಿದರು. ಇವೆಲ್ಲವನ್ನೂ ತರಬೇತಿ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರಿಗೂ ತಿಳಿಸಲು ಸಹಕಾರಿಯಾಗಿದೆ. ಸಂಘಗಳಿಗೆ ಕಾಯ್ದೆ ಬಂದು 5 ವರ್ಷ ಆಗಿರುತ್ತದೆ. ಆದರೆ ಎಷ್ಟೋ ಜನರಿಗೆ ಅದರ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಎಲೆಕ್ಷನ್‌ಗೆ ಹೋದಾಗಲೇ ಅವರಿಗೆ ಕಾಯ್ದೆಗಳ ಬಗ್ಗೆ ತಿಳಿಯುತ್ತದೆ. ಇಂತಹ ಮನಃಸ್ಥಿತಿಯಲ್ಲಿ ಇನ್ನೂ ಆ ರೀತಿ ಕೆಲಸ ಮಾಡುವ ಜಡತ್ವವನ್ನು ಬೆಳೆಸಿಕೊಳ್ಳಲಾಗಿದೆ. ಆದರೆ ಇಂತಹ ವಿಷಯಾಧರಿತ ಕಾರ್ಯಕ್ರಮವನ್ನು ಮಾಡುವುದರಿಂದ ಕಾಯ್ದೆಗಳ ಬಗ್ಗೆ, ಬದಲಾವಣೆಯ ಬಗ್ಗೆ ಅರಿವು ಉಂಟಾಗುತ್ತದೆ ಎಂದು ಹೇಳಿದರು.

ಹೊಸ ತಲೆಮಾರಿನ ಜನಗಳು, ಆಸಕ್ತಿಯುಳ್ಳ ಸಹಕಾರಿಗಳು ಸಂಸ್ಥೆಗಳನ್ನು ಪ್ರಾರಂಭ ಮಾಡುವುದರಿಂದ ಅವರು ಇಂತಹ ಕಾರ್ಯಕ್ರಮಗಳಿಗೆ ಆಸಕ್ತಿಯಿಂದ ಭಾಗವಹಿಸಿ ವಿಷಯವನ್ನು ಗ್ರಹಿಸಿ ಅದನ್ನು ಪಾಲಿಸುವುದನ್ನು ನೋಡುತ್ತೇವೆ. ಆಸಕ್ತ ತಂಡಗಳಿವೆಯೋ ಅವರು ಸೇರಿ ಮಾಡಬೇಕಾದ ಸಹಕಾರ ಸಂಘಗಳ ದೃಷ್ಟಿಯಲ್ಲಿ ಸೌಹಾರ್ದ ಕಾಯ್ದೆ ಬಂದಿದ್ದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ವೃತ್ತಿಪರ ನಿರ್ದೇಶಕ ಬಿ.ಮಹದೇವಸ್ವಾಮಿ, ಶ್ರೀ ಗುರುನರಸಿಂಹ ಸೌಹಾರ್ದ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಸೋಮಯಾಜಿ , ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕ ಎಸ್.ಪಿ.ಭಗೀರಥ ಹಾಜರಿದ್ದರು.

### ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಹಳಿ ತಪ್ಪಿದ್ದು, ಯಾವುದೇ ಹೊಸ ಅಭಿವೃದ್ಧಿ ಯೋಜನೆಗಳು ಜಾರಿಯಾಗಿಲ್ಲ

# ವೈಫಲ್ಯಗಳೇ ಕಾಂಗ್ರೆಸ್ ಸರ್ಕಾರದ ಸಾಧನೆ: ನಾಗೇಂದ್ರ ವ್ಯಂಗ್ಯ

ಮೈಸೂರು: ಕಾಂಗ್ರೆಸ್ ಸರ್ಕಾರದ ಮೂರು ವರ್ಷದ ಸಾಧನೆ ಶೂನ್ಯ. ಭ್ರಷ್ಟಾಚಾರ, ಸಾಲದ ಸುಳಿ, ಆಡಳಿತ ವೈಫಲ್ಯವೇ ಸರ್ಕಾರದ ನಿಜವಾದ ಸಾಧನೆ ಎಂದು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ವ್ಯಂಗ್ಯವಾಡಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ಸಾಧನಾ ಸಮಾವೇಶ ಮಾಡುತ್ತಿದೆ. ಯಾವ ಸಾಧನೆ ಮಾಡಿದೆ ಎಂದು ಸಮಾವೇಶ ಮಾಡುತ್ತಿದೆ. ಅನೀತಿ, ಅಧರ್ಮ, ಅರಾಜಕತೆ, ಭ್ರಷ್ಟಾಚಾರವೇ ಸಾಧನೆಯೇ?. ಸರ್ಕಾರ ಅಸ್ತಿತ್ವಕ್ಕೆ ಬಂದ ಮೊದಲ ವರ್ಷದಿಂದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ಕುರ್ಚಿ ಕಚ್ಚಾಟ ಶುರುವಾಯಿತು. ಸಚಿವರು ಮತ್ತು ಶಾಸಕರು ತಮ್ಮ ಸ್ಥಾನ ಉಳಿಸಿಕೊಳ್ಳಲು ನಿರಂತರವಾಗಿ ದೆಹಲಿ ಯಾತ್ರೆ ಮಾಡುತ್ತಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಹಳಿ ತಪ್ಪಿದ್ದು, ಯಾವುದೇ ಹೊಸ ಅಭಿವೃದ್ಧಿ ಯೋಜನೆಗಳು ಜಾರಿಯಾಗಿಲ್ಲ ಎಂದು ದೂರಿದರು.



ಪಂಚ ಗ್ಯಾರಂಟಿ ಯೋಜನೆಗಳನ್ನು ಕೊಟ್ಟ ಮಾತಿನಂತೆ ಜಾರಿ ಮಾಡಿದ್ದೇವೆ ಎಂದು ಬೀಗುವ ಸರ್ಕಾರ ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿದೆ. 2023-24ರಲ್ಲಿ ಗ್ಯಾರಂಟಿಗಳಿಗೆ 36,000 ಕೋಟಿ ನೀಡಿದ್ದರೆ, 82,000 ಕೋಟಿ ಸಾಲ ಮಾಡಲಾಗಿದೆ. 2024-25 ರಲ್ಲಿ 56,000 ಕೋಟಿ ನೀಡಿ, ?1.05 ಲಕ್ಷ ಕೋಟಿ ಸಾಲ ಮಾಡಲಾಗಿದೆ. 2025-26 ರಲ್ಲಿ 52,000 ಕೋಟಿ ವ್ಯಯಿಸಿ, 1.16 ಲಕ್ಷ ಕೋಟಿ ಸಾಲ ಮಾಡಲಾಗಿದೆ. ಪ್ರಸ್ತುತ ವರ್ಷದಲ್ಲಿ 1.32 ಲಕ್ಷ ಕೋಟಿ ಸಾಲ ಮಾಡಲು ಅಂದಾಜಿಸಲಾಗಿದೆ. ಮೂರು ವರ್ಷದಲ್ಲು 5 ಲಕ್ಷ ಕೋಟಿ ಸಾಲ ಮಾಡಲಾಗಿದೆ. ಕೇವಲ ಬಡ್ಡಿ ಪಾವತಿಗೇ ಸಾರ್ವಜನಿಕರ ತೆರಿಗೆ ಹಣದ ಪೈಕಿ 45,600 ಕೋಟಿ ವ್ಯಯಿಸಲಾಗುತ್ತಿದೆ. ಸಾಲ ಮಾಡಿ ಗ್ಯಾರಂಟಿ ಕೊಡುವುದೇ ಸಾಧನೆಯೇ ಎಂದು ವಾಗ್ದಾಳಿ ನಡೆಸಿದರು.

ಸರ್ಕಾರದ ಸಚಿವರು ಸಾಲು ಸಾಲು ಹಗರಣಗಳಲ್ಲಿ ಮುಳುಗಿದ್ದಾರೆ. ಬಿ.ನಾಗೇಂದ್ರ ವಾಲ್ಮೀಕಿ ನಿಗಮದಲ್ಲಿ 127 ಕೋಟಿ ದೋಚಿದ್ದು, ಇನ್ನೂ 125 ಕೋಟಿ ರಿಕವರಿ ಆಗಿಲ್ಲ. ಡಿ.ಕೆ.ಶಿವಕುಮಾರ್ ಅಕ್ರಮ ಆಸ್ತಿ ಮತ್ತು ಪ್ರಭಾವ ದುರುಪಯೋಗದ ಸಂಬಂಧ ಇಡಿಯಲ್ಲಿ ಪ್ರಕರಣ ದಾಖಲಾಗಿದೆ. ಜಮೀರ್ ಅಹಮದ್ ವಿರುದ್ಧ ಕಲ್ಯಾಣ ಕರ್ನಾಟಕ ನಿಧಿ ಹಂಚಿಕೆಯಲ್ಲಿ ಸ್ವಪಕ್ಷದ ಶಾಸಕರಿಂದಲೇ ಭ್ರಷ್ಟಾಚಾರದ ಆರೋಪ ಇದೆ. ಬೈರತಿ ಸುರೇಶ್, ರಹೀಮ್ ಖಾನ್ ವಿರುದ್ಧ ಅಮೃತ ಯೋಜನೆ ಹಾಗೂ ನಗರಾಭಿವೃದ್ಧಿ ನಿಧಿಯಲ್ಲಿ ಹಣ ದುರುಪಯೋಗದ ಆರೋಪಗಳು ತನಿಖಾ ಹಂತದಲ್ಲಿವೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೇ ಮೈಸೂರಿನ ಬಹುಕೋಟಿ ಮುಡಾ ಹಗರಣದ ಕಲೆ ಅಂಟಿಕೊಂಡಿದೆ. ಇದೇ ಇವರ ಸಾಧನೆ ಎಂದರು.

ಬ್ರಾಂಡ್ ಬೆಂಗಳೂರು ಎಂದು ಕೇವಲ ಪೇಪರ್‌ನಲ್ಲಿ ಸಹಿ ಹಾಕುತ್ತಿರುವ ಸರ್ಕಾರ, ಕಳೆದ 26 ತಿಂಗಳಿಂದ ಬಿಬಿಎಂಪಿ ಗುತ್ತಿಗೆದಾರರ 22,000 ಕೋಟಿ ಬಾಕಿ ಬಿಲ್ ಪಾವತಿಸಿಲ್ಲ. ಸ್ಮಾರ್ಟ್ ಸಿಟಿ ಯೋಜನೆಯ 300 ಕೋಟಿ ಬಿಲ್ ತಡೆಹಿಡಿಯಲಾಗಿದ್ದು, ಗುತ್ತಿಗೆದಾರರು ಹಗಲು ರಾತ್ರಿ ಧರಣಿ ನಡೆಸುತ್ತಿದ್ದಾರೆ. ಬಿಲ್ ಬಿಡುಗಡೆಗೆ ಕಮಿಷನ್ ಕೇಳಲಾಗುತ್ತಿದೆ. ಬೆಂಗಳೂರಿನ ಜನತೆ ಟ್ರಾಫಿಕ್ ಹಾಗೂ ರಸ್ತೆ ಗುಂಡಿಗಳಿಂದ ಕಂಗಾಲಾಗಿದ್ದು, ಮಳೆಗೆ ಜನ ಕೊಚ್ಚಿ ಹೋಗುತ್ತಿದ್ದರೂ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆ. ರಾಜ್ಯದಲ್ಲಿ ಕೊಲೆ, ಸುಲಿಗೆ, ಅತ್ಯಾಚಾರಗಳು ಮಿತಿಮೀರಿದ್ದು, ಗೃಹ ಸಚಿವರು ಕೇವಲ ಮಾಹಿತಿ ಪಡೆಯುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಮೈಸೂರು ನಗರದಲ್ಲಿ 1,000 ಕೋಟಿ ಮೌಲ್ಯದ ಡ್ರಗ್ಸ್ ಜಾಲವಿದ್ದರೂ ಪೊಲೀಸರು ಕ್ರಮ ಕೈಗೊಂಡಿಲ್ಲ. ರಾಜ್ಯದಲ್ಲಿ ಶಾಸಕರ ನಿಧಿಯ 2 ಕೋಟಿಯನ್ನು ತಡೆಹಿಡಿದಿರುವ ಸರ್ಕಾರ, ಕೇರಳದ ವಯನಾಡ್ ದುರಂತಕ್ಕೆ ಕರ್ನಾಟಕದ ಬೊಕ್ಕಸದ ಹಣವನ್ನು ಬಿಡುಗಡೆ ಮಾಡಿದೆ. ಇದು ಹೈಕಮಾಂಡ್ ಹಾಗೂ ರಾಷ್ಟ್ರೀಯ ನಾಯಕರನ್ನು ಓಲೈಸಲು ಮಾಡುತ್ತಿರುವ ತಂತ್ರ. ಇತ್ತೀಚಿನ ಪಂಚರಾಜ್ಯಗಳ ಭ್ರಷ್ಟಾಚಾರ ಮತ್ತು ದುರಾಡಳಿತವನ್ನು ನಿಲ್ಲಿಸದಿದ್ದರೆ, ಮುಂಬರುವ ಚುನಾವಣೆಯಲ್ಲಿ ರಾಜ್ಯದ ಜನತೆ ಈ ಸರ್ಕಾರವನ್ನು ಮನೆಗೆ ಕಳುಹಿಸುವುದು ಖಚಿತ ಎಂದು ಎಚ್ಚರಿಸಿದರು.

ಈ ಸಂಧರ್ಭದಲ್ಲಿ ನಗರ ವಕ್ತಾರ ಮೋಹನ್, ಗ್ರಾಮಾಂತರ ವಕ್ತಾರ ವಸಂತ್ ಕುಮಾರ್, ಮಾಜಿ ಮಹಾಪೌರ ಸಂದೇಶ್ ಸ್ವಾಮಿ, ನಗರ ಪ್ರಧಾನಕಾರ್ಯದರ್ಶಿ ಬಿ.ಎಂ.ರಘು, ಸೋಮಸುಂದರ್, ರುದ್ರಮೂರ್ತಿ, ನಗರ ಉಪಾಧ್ಯಕ್ಷ ಮೈ.ಕು.ರಾಜೇಶ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್, ಮಾಧ್ಯಮ ಸಹ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್, ಎಸ್.ಸಿ. ಮೋರ್ಚಾ ನಗರ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ, ಹಿಂದುಳಿದ ಮೋರ್ಚಾ ನಗರ ಅಧ್ಯಕ್ಷ ಜಗದೀಶ್, ಕಾರ್ಯಾಲಯ ಕಾರ್ಯದರ್ಶಿ ನಂದಕುಮಾರ್, ಇದ್ದರು.

# ಸಂಕ್ಷಿಪ್ತ ಸುದ್ದಿ

## ಅರ್ಜಿ ಆಹ್ವಾನ

**ರಾಮನಗರ:** 2026–27ನೇ ಸಾಲಿನಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ತಾಲ್ಲೂಕು ವ್ಯಾಪ್ತಿಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರು, ಸರ್ಕಾರಿ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು ಹಾಗೂ ಸರ್ಕಾರಿ ವಾಲ್ಮೀಕಿ ಆಶ್ರಮ ಶಾಲೆಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ದಾಖಲು ಮಾಡಲು ದಾಖಲಾತಿ ಪ್ರಾರಂಭವಾಗಿದ್ದು, ಇಲಾಖೆಯ ಅಧಿಕೃತ ವೆಬ್‌ಸೈಟ್ sw.kar.nic.in ಮೂಲಕ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ರಾಮನಗರ ತಾಲ್ಲೂಕು. ಈ ಕಚೇರಿಯನ್ನು ಸಂಪರ್ಕಿಸುವಂತೆ ರಾಮನಗರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು (ಶ್ರೇಣಿ–1) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ನಿಲಯಗಳ ವಿವರ: ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ಹೊಂಬೇಗೌಡನ ದೊಡ್ಡಿ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ದೊಡ್ಡಗಂಗವಾಡಿ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ, ಕಣ್ವ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ರಾಮನಗರ ಟೌನ್, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬಿಡದಿ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ರಾಮನಗರ ಟೌನ್, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಸುಗ್ಗನಹಳ್ಳಿ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಜಾಲಮಂಗಲ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕೋಡಿಯಾಲ ಕರೇನಹಳ್ಳಿ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕೈಲಾಂಚ, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ವೃತ್ತಿಪರ ಕಾಲೇಜು ಬಾಲಕರ ವಿದ್ಯಾರ್ಥಿನಿಲಯ, ರಾಮನಗರ ಟೌನ್, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಕಾಲೇಜು ಬಾಲಕಿಯರ ವಿದ್ಯಾರ್ಥಿನಿಲಯ, ರಾಮನಗರ ಟೌನ್–01, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಕಾಲೇಜು ಬಾಲಕಿಯರ ವಿದ್ಯಾರ್ಥಿನಿಲಯ, ರಾಮನಗರ ಟೌನ್–02, ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಕಾಲೇಜು ಬಾಲಕರ ವಿದ್ಯಾರ್ಥಿನಿಲಯ, ರಾಮನಗರ ಟೌನ್, ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಬಸವನಪುರ ಹಾಗೂ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಯರೇಹಳ್ಳಿ.

## ಜೂನ್ 1ರಿಂದ ಬೀಡಿ ಕಾರ್ಮಿಕರ ಚಿಕಿತ್ಸಾಲಯ ಬಂದ್

**ರಾಮನಗರ:** ಕೇಂದ್ರ ಸರ್ಕಾರದ ಕಾರ್ಮಿಕ ಕಲ್ಯಾಣ ಇಲಾಖೆ ವತಿಯಿಂದ ಬೀಡಿ ಕಾರ್ಮಿಕರಿಗಾಗಿ ಚನ್ನಪಟ್ಟಣ ಟೌನಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬೀಡಿ ಕಾರ್ಮಿಕರ ಚಿಕಿತ್ಸಾಲಯವನ್ನು ಜೂನ್ 1 ರಿಂದ ಸಂಪೂರ್ಣವಾಗಿ ಮುಚ್ಚಲಾಗುತ್ತದೆ. ಚಿಕಿತ್ಸಾಲಯದ ಫಲಾನುಭವಿಗಳು ಮುಂದಿನ ಚಿಕಿತ್ಸೆ ಮತ್ತು ಔಷಧಗಳಿಗಾಗಿ ಬೆಂಗಳೂರು ಹಳೆ ಗುಡ್ಡದಹಳ್ಳಿ ಬೀಡಿ ಕಾರ್ಮಿಕರ ಆಸ್ಪತ್ರೆ ಅಥವಾ ಮಂಡ್ಯದ ಮುಡಕೆರೆ ವಿವೇಕಾನಂದ ಲೇಔಟ್‌ನಲ್ಲಿರುವ ಚಿಕಿತ್ಸಾಲಯಗಳಲ್ಲಿ ವೈದ್ಯಾಧಿಕಾರಿಯನ್ನು ಸಂಪರ್ಕಿಸುವಂತೆ ಚನ್ನಪಟ್ಟಣದ ಬೀಡಿ ಕಾರ್ಮಿಕರ ಕಲ್ಯಾಣನಿಧಿಯ ಸ್ಥಾಯಿ ಚಿಕಿತ್ಸಾಲಯ ವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ ಕುಮಾರ ಸೂಚನೆ

# ಮಕ್ಕಳಿಗೆ ತಪ್ಪದೆ ಪಲ್ಸ್ ಪೋಲಿಯೋ ಲಸಿಕೆ ಹಾಕಿ



**ಮಂಡ್ಯ:** ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮವು ಜೂನ್ 28 ರಂದು ನಡೆಯಲಿದ್ದು, 0–5 ವರ್ಷದೊಳಗಿನ ಯಾವುದೇ ಮಗುವು ಲಸಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಜಿಲ್ಲಾ ಲಸಿಕಾ ಕಾರ್ಯಪಡೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜೂನ್ 28 ರಂದು ಜಿಲ್ಲೆಯಾದ್ಯಂತ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು. ಜೂನ್ 29 ರಿಂದ ಜುಲೈ 1 ರವರೆಗೆ ಲಸಿಕೆ ಹಾಕದ ಮಕ್ಕಳನ್ನು ಪತ್ತೆಹಚ್ಚಲು ಮನೆ ಮನೆಗೆ ಭೇಟಿ ನೀಡಲಾಗುವುದು. ಮನೆ ಮನೆಗೆ ತೆರಳಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಲಸಿಕೆ ನೀಡಬೇಕು. ಯಾವುದೇ ಕಾರಣಕ್ಕೂ ಮಗುವೂ ಲಸಿಕೆಯಿಂದ ವಂಚಿತವಾಗಬಾರದು ಎಂದು ಸೂಚನೆ ನೀಡಿದರು.

ಜಿಲ್ಲೆಯಾದ್ಯಂತ ಜೂನ್ 28 ರಂದು ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ 0–5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದ್ದು, ಪ್ರತಿಯೊಬ್ಬ ಪೋಷಕರು ತಪ್ಪದೇ ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಿಸುವುದರೊಂದಿಗೆ ಪಲ್ಸ್ ಪೋಲಿಯೋ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.

ದೇಶದಲ್ಲಿ 2011 ರಲ್ಲಿ ಕೊನೆಯದಾಗಿ ಪೋಲಿಯೋ ಪ್ರಕರಣ ವರದಿಯಾಗಿದ್ದು ನಂತರ ಯಾವುದೇ ಪ್ರಕರಣಗಳು ಪತ್ತೆಯಾಗಿಲ್ಲ. 2014 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಭಾರತವನ್ನು ಪೋಲಿಯೋ ಮುಕ್ತ ದೇಶ ಎಂದು ಘೋಷಿಸಿದೆ. ಆದರೂ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಅಫಘಾನಿಸ್ತಾನಗಳಲ್ಲಿ ಕೆಲವು ಪೋಲಿಯೊ ಪ್ರಕರಣಗಳು ವರದಿಯಾಗುತ್ತಿದ್ದು, ಹೆಚ್ಚಿನ ನಿಗಾ ವಹಿಸುವ ಹಿನ್ನೆಲೆ, ಮುಂಜಾಗ್ರತಾ ಕ್ರಮವಾಗಿ ಭಾರತದಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮ ಮುಂದುವರಿಸಲಾಗಿದೆ ಎಂದು ತಿಳಿಸಿದ ಅವರು, ಪೋಲಿಯೋ ನಿರ್ಮೂಲನೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಜಿಲ್ಲೆಯಲ್ಲಿ ಪೋಲಿಯೊ ನಿರ್ಮೂಲನೆ ಮಾಡುವಲ್ಲಿ ಅಧಿಕಾರಿಗಳು ಯಾವುದೇ ನಿರ್ಲಕ್ಷ್ಯ ತೋರಬಾರದು. ಲಸಿಕೆ ನಿರಾಕರಿಸುವ ಕುಟುಂಬಗಳ ಮನವೊಲಿಸಿ ಪ್ರತಿಯೊಂದು ಮಗುವಿಗೂ ಕಡ್ಡಾಯವಾಗಿ ಲಸಿಕೆ ಹಾಕಿಸುವಂತೆ ಮಾಡುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಜೂನ್‌ನಲ್ಲಿ ನಡೆಯಲಿರುವ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿ 0–5 ವರ್ಷದೊಳಗಿನ ಒಟ್ಟು ಅಂದಾಜು 1,13, 034 ಮಕ್ಕಳಿಗೆ ಲಸಿಕೆ ಹಾಕಲು ಗುರಿ ನೀಡಲಾಗಿದೆ. ಮಕ್ಕಳಿಗೆ ಲಸಿಕೆಗಳನ್ನು ನೀಡಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 723 ಲಸಿಕಾ ಕೇಂದ್ರಗಳನ್ನು ತೆರೆಯಲಾಗುವುದು.

ಲಸಿಕಾ ದಿನದಂದು ಲಸಿಕೆ ನೀಡಲು ಗುರುತಿಸಲಾದ ಅಂಗನವಾಡಿ ಹಾಗೂ ಶಾಲೆಗಳಲ್ಲಿ ಕೇಂದ್ರಗಳನ್ನು ತೆರೆಯಲು ಸಜ್ಜುಗೊಳಿಸಿಟ್ಟುಕೊಳ್ಳಬೇಕು.

ವಲಸೆ, ಕಟ್ಟಡ ಹಾಗೂ ಮತ್ತಿತರ ಕೂಲಿ ಕಾರ್ಮಿಕರ ಮಕ್ಕಳು ಲಸಿಕಾ ಪಡೆಯುವಂತೆ ಹೆಚ್ಚು ಜಾಗೃತಿ ಮೂಡಿಸಬೇಕು. ಕರ ಪತ್ರ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್ಚು ಪ್ರಚಾರ ನೀಡಬೇಕು.

ಪಲ್ಸ್ ಪೊಲೀಯೋ ಕಾರ್ಯಕ್ರಮದ ಯಶಸ್ವಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ, ಅಲ್ಪಸಂಖ್ಯಾತರ ಇಲಾಖೆ, ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕೆಂದರು.

## ಪದ್ಮಶ್ರೀ ಅಂಕೇಗೌಡರಿಗೆ ಗೌರವ ಪತ್ರ ಹಸ್ತಾಂತರ



**ಮಂಡ್ಯ:** ಜಿಲ್ಲೆಯ ಪಾಂಡವಪುರ ತಾಲೂಕಿನ ಹರಳಹಳ್ಳಿ ಗ್ರಾಮದ 'ಪುಸ್ತಕ ಮನೆ'ಯ ರೂವಾರಿ ಅಂಕೇಗೌಡ ಅವರಿಗೆ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಅಸಾಧಾರಣ ಸೇವೆಗಾಗಿ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ದೊರೆತಿದೆ.

ಈ ಸಂಬಂಧ ನವ ದೆಹಲಿಯ ರಾಷ್ಟ್ರಪತಿ ಭವನದಲ್ಲಿ ಮೇ 25 ರಂದು ನಡೆಯುವ ನಡೆಯುವ ಪದ್ಮಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದ ಹಿನ್ನಲೆಯಲ್ಲಿ ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದ ಅಂಕೇಗೌಡ ಅವರಿಗೆ ಜಿಲ್ಲಾಧಿಕಾರಿ ಡಾ ಕುಮಾರ ಗೌರವ ಪತ್ರವನ್ನು ಹಸ್ತಾಂತರಿಸಿದರು.

ಜಿಲ್ಲಾಧಿಕಾರಿಗಳಾದ ಡಾ ಕುಮಾರ ಅವರು ನವದೆಹಲಿಗೆ ಪ್ರಯಾಣದ ಸಂದರ್ಭದಲ್ಲಿ ಅವರಿಗೆ ತೊಂದರೆ ಆಗದಂತೆ ಸಹಾಯಕರನ್ನು ಅವರ ಜೊತೆ ಕಳುಹಿಸುವ ವ್ಯವಸ್ಥೆ ಮಾಡಿದ್ದಾರೆ.


## ಮದ್ದೂರು ವಿದ್ಯಾರ್ಥಿನಿ ಶ್ರೇಯಾ ರಾಜ್ಯ ಮಟ್ಟದಲ್ಲಿ ಮೆರಗು

**ಶಾಲೆಗೆ ಶೇ.100 ಫಲಿತಾಂಶ**

**ಮಂಡ್ಯ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಶಾಂತ್ ಹೈಸ್ಕೂಲ್ ಆಫ್ ಬ್ರಿಲಿಯನ್ಸ್ ಶಾಲೆ ಶೇ.100 ಫಲಿತಾಂಶ ಸಾಧಿಸಿದ್ದು, ವಿದ್ಯಾರ್ಥಿನಿ ಶ್ರೇಯಾ ರಮೇಶ್ ಮದ್ದೂರು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ ಎಂದು ಶಾಲೆಯ ಕಾರ್ಯದರ್ಶಿ ಬಸವರಾಜ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಶಾಲೆಯ 73 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. ಅವರಲ್ಲಿ 32 ಮಂದಿ ಅತ್ಯುತ್ತಮ, 33 ಮಂದಿ ಪ್ರಥಮ ದರ್ಜೆ ಹಾಗೂ 8 ಮಂದಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ವಿವರಿಸಿದರು.

ಫಲಿತಾಂಶ ಪ್ರಕಟವಾದಾಗ ಶ್ರೇಯಾ ರಮೇಶ್ ಅವರಿಗೆ 611 ಅಂಕಗಳು ಲಭಿಸಿದ್ದವು. ಮರುಪರಿಶೀಲನೆಯ ನಂತರ 9 ಅಂಕಗಳು ಹೆಚ್ಚಾಗಿ ಒಟ್ಟು 620 ಅಂಕಗಳನ್ನು ಗಳಿಸಿ ಜಿಲ್ಲೆಗೆ ದ್ವಿತೀಯ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ ಆರನೇ ಸ್ಥಾನ ಪಡೆದಿದ್ದಾರೆ. ಇದೇ ವೇಳೆ ಬಿ.ಎಸ್. ಸೌಜನ್ಯ 612 ಅಂಕಗಳು ಮತ್ತು ಕೆ. ತನೂಶ್ರೀ 608 ಅಂಕಗಳನ್ನು ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಸಂತೋಷ ವ್ಯಕ್ತಪಡಿಸಿದರು. ವಿದ್ಯಾರ್ಥಿನಿ ಶ್ರೇಯಾ ಮಾತನಾಡಿ, ಶಿಕ್ಷಕರ ಉತ್ತಮ ಬೋಧನೆ ಮತ್ತು ಆಡಳಿತ ಮಂಡಳಿ ನೀಡಿದ ಅಭ್ಯಾಸ ತರಬೇತಿ ತನ್ನ ಸಾಧನೆಗೆ ಪ್ರಮುಖ ಕಾರಣವಾಗಿದೆ. ಜೊತೆಗೆ ನಿರಂತರ ಅಭ್ಯಾಸ ಹಾಗೂ ಪರಿಶ್ರಮವೇ ಯಶಸ್ಸಿನ ಗುಟ್ಟು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶ್ರೇಯಾ ಪೋಷಕರಾದ ರಮೇಶ್, ಉಷಾರಾಣಿ, ಸರೋಜಮ್ಮ ಹಾಗೂ ಮುಖ್ಯ ಶಿಕ್ಷಕ ರಾಜೇಂದ್ರ ಉಪಸ್ಥಿತರಿದ್ದರು.



## ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನ

**ರಾಮನಗರ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಆಯ್ಕೆಯಾದ ರಾಮನಗರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಅಂಗನವಾಡಿ ಕಂ ಕ್ರಷ್ ಕೇಂದ್ರಗಳನ್ನು ಅಂಗನವಾಡಿ ಕಂ ಕ್ರೀಚ್ ಕೇಂದ್ರಗಳಾದ ಪಿಂಚಕುಂಟರಪಾಳ್ಯ, ಭೀಮೇನಮಹಳ್ಳಿ, ಮಂದೆ ಬಯಲು, ಬಿಡದಿ–1, ಬಿಡದಿ–3, ಅಬ್ಬನಕುಪ್ಪೆ, ಛತ್ರಬಾರದೊಡ್ಡಿ, ಬಿ.ಜಿ.ಎಸ್. ಸರ್ಕಲ್, ಇರುಳಿಗರ ಕಾಲೋನಿಯಲ್ಲಿ ಕಾರ್ಯನಿರ್ವಹಿಸಲು 9 ಕ್ರಷ್ ಕಾರ್ಯಕರ್ತೆಯರು ಹಾಗೂ 9 ಕ್ರಷ್ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಗಧಿತ ಅರ್ಜಿ ನಮೂನೆಯನ್ನು ಶಿಶು ಅಭಿವೃದ್ಧಿ ಯೋಜನಾ ಕಚೇರಿ, ರೂ.ನಂ.301/ಎ, ಕಂದಾಯ ಭವನ, 2ನೇ ಮಹಡಿ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ. ಈ ಕಚೇರಿಯಲ್ಲಿ ಅರ್ಜಿ ಪಡೆದು 2026ರ ಜೂನ್ 20ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಕಂದಾಯ ಭವನ, 2ನೇ ಮಹಡಿ, ರೂ.ನಂ. 301/ಎ, ರಾಮನಗರ ಅಥವಾ ದೂ.ಸಂಖ್ಯೆ: 7259124543 ಅನ್ನು ಸಂಪರ್ಕಿಸುವಂತೆ ರಾಮನಗರದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ವ್ಯತ್ಯಯ

**ಮೈಸೂರು:** ವಿ.ವಿ. ಮೊಹಲ್ಲಾ ಉಪ ವಿಭಾಗ ವ್ಯಾಪ್ತಿಯ 11 ಕೆ.ವಿ ಎಂ.ಜಿ ಕೊಪ್ಪಲು ಹಾಗೂ 11 ಕೆ.ವಿ ಎಸ್.ಎಲ್.ವಿ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಮೇ 20–ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:00 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

1. 11 ಕೆ.ವಿಎಸ್.ಎಲ್.ವಿ ವಿದ್ಯುತ್ ಮಾರ್ಗದಪ್ರದೇಶಗಳು:– ಬೃಂದಾವನ 1ನೇ ಹಂತ ಹಾಗೂ 2ನೇ ಹಂತ, ವರುಣ ಭವನ, ಮಂಜುನಾಥಪುರ ಭಾಗಶಃಹಾಗೂ ಸುತ್ತಮುತ್ತಲಿನ ಪ್ರದೇಶಗಳು.
2. 11 ಕೆ.ವಿಎಂ.ಜಿಕೊಪ್ಪಲು ವಿದ್ಯುತ್ ಮಾರ್ಗದ ಪ್ರದೇಶಗಳು:– ಅಭಿಷೇಕ್ ವೃತ್ತ, ಮಾದೇಗೌಡ ವೃತ್ತ, ಹೊಂಡಾ ಶೋರೋಂ, ಕೃಷ್ಣ ಬೇಕರಿ, ಹೆಬ್ಬಾಳ್ ಚೌಲ್ಟ್ರಿ ವೃತ್ತ, ಕವನ ಮಾರ್ಟ್ ಸುತ್ತಮುತ್ತ, ಹೆಬ್ಬಾಳ್ 1ನೇ ಹಂತಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ. ವಿ.ವಿ ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮರಗಳಿಂದ ಪರಿಸರ ರಕ್ಷಣೆ, ಗ್ರಂಥಾಲಯಗಳಿಂದ ಜನರ ಹಿತ

# ಪುಸ್ತಕ ಓದಿದಷ್ಟು ಸುಖ, ಶಾಂತಿ ; ಜ್ಞಾನ ಹಂಚಿದಷ್ಟು ಅಕ್ಷಯ: ಪರಿಸರ ಮಿತ್ರ ಗೊರವಾಲೆ ಜಯಶಂಕರ್




**ಮಂಡ್ಯ:** ಮನೆಗೊಂದು ಮರ ಊರಿಗೊಂದು ವನ ರೀತಿಯಲ್ಲಿ ಪ್ರತಿಯೊಂದು ಮನೆಯಲ್ಲೂ ಗ್ರಂಥಾಲಯವಿರಬೇಕು. ಮರಗಳಿಂದ ಪರಿಸರ ಉಳಿದರೆ, ಗ್ರಂಥಾಲಯಗಳಿಂದ ಜನರು ಬುದ್ಧಿವಂತರಾಗುತ್ತಾರೆ ಎಂದು ಪರಿಸರ ಮಿತ್ರರು, ಡಯಟ್ ವಿಶ್ರಾಂತ್ ಉಪನ್ಯಾಸಕರಾದ ಜಯಶಂಕರ್ ಜಿ.ಸಿ. ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಜಿಲ್ಲಾ ಜಾಗೃತ ಸಮಿತಿ ವತಿಯಿಂದ ಗೊರವಾಲೆ ಗ್ರಾಮದ ಉಪನ್ಯಾಸಕ ಮಧುಸೂದನ್ ನರಸಿಂಹೇಗೌಡ ಅವರ ಮನೆಯಲ್ಲಿ ಸೋಮವಾರ ಸಂಜೆ (ಮೇ18) ಆಯೋಜಿಸಿದ್ದ 'ಮನೆಗೊಂದು ಗ್ರಂಥಾಲಯ ಅನುಷ್ಠಾನ' ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಪುಸ್ತಕ ಬೆಸ್ಟ್ ಫ್ರೆಂಡ್, ಆಪದ್ಬಾಂಧವ. ಅದರ ಸಹವಾಸದಲ್ಲಿ ನೋವಿಲ್ಲ ಸಂತಸವೇ ಎಲ್ಲ. ಪುಸ್ತಕ ಓದಿದಷ್ಟು ಸುಖ, ಶಾಂತಿ. ಜ್ಞಾನವನ್ನು ಹಂಚಿದಷ್ಟು ಅಕ್ಷಯವಾಗುತ್ತದೆ. ರೀಲ್ಸ್, ವಾಟ್ಸಾಪ್, ಚಾಟಿಂಗ್‌ನಲ್ಲಿ ಮುಳುಗಿರುವ ಯುವಜನರನ್ನು ಓದಲು ಕರೆ ತರಬೇಕು. ಪುಸ್ತಕದಿಂದ ಜ್ಞಾನ ವೃದ್ಧಿ , ಪ್ಲಾಸ್ಟಿಕ್ ಬಿಟ್ಟು ಬಟ್ಟೆ ಬ್ಯಾಗ್ ಬಳಸುವುದರಿಂದ ಪರಿಸರ ರಕ್ಷಣೆ ಆಗುತ್ತದೆ ಎಂದು ಸಲಹೆ ನೀಡಿದರು.

ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯರಾದ ಗೊರವಾಲೆ ಚಂದ್ರಶೇಖರ್ ಮಾತನಾಡಿ, ಎದೆಗೆ ಬಿದ್ದ ಅಕ್ಷರ ಭೂಮಿಗೆ ಬಿದ್ದ ಬೀಜ ಒಂದಲ್ಲ ಒಂದು ದಿನ ಫಲ ನೀಡುತ್ತದೆ ಎನ್ನುವ ಮಾತಿನ ಹಾಗೆ ಅಕ್ಷರ ಜ್ಞಾನ ಬದುಕು ಕಟ್ಟಿಕೊಡುತ್ತದೆ. ಆ ನಿಟ್ಟಿನಲ್ಲಿ ಮನೆಗೊಂದು ಗ್ರಂಥಾಲಯ ಶ್ಲಾಘನೀಯ ಎಂದು ತಿಳಿಸಿದರು.


ಜಿಲ್ಲಾ ಜಾಗೃತ ಸಮಿತಿ ಸದಸ್ಯೆ ಡಾ. ಕೆಂಪಮ್ಮ ಪ್ರಾಸ್ತಾವಿಕ ನುಡಿಗಳನ್ನಾಡಿ, ಸುಂದರ ಮನೆ ಬಾಹ್ಯ ವಿಕಾಸಕ್ಕಾದರೆ, ಮನೋವಿಕಾಸಕ್ಕೆ ಪುಸ್ತಕಗಳು. ಸರ್ವತೋಮುಖ ವ್ಯಕ್ತಿತ್ವ ರೂಪಿಸಿಕೊಳ್ಳಲು ಪಠ್ಯಪುಸ್ತಕಗಳಿಂದಾಚೆಗಿನ ಓದು ನೆರವಾಗುತ್ತದೆ. ಸಮಾಜ ಅರ್ಥವಾಗಲು, ಒಳ್ಳೆಯದು ಕೆಟ್ಟದ್ದು ತಿಳಿದುಕೊಳ್ಳಲು, ನೆಮ್ಮದಿ ಬೇಕಾದರೆ ಪುಸ್ತಕ ಓದಬೇಕು ಎಂದು ತಿಳಿಸಿದರು.

ಜಿಲ್ಲಾ ಜಾಗೃತ ಸಮಿತಿ ಸಂಚಾಲಕ ಕಾರಸವಾಡಿ ಮಹಾದೇವ ಅಧ್ಯಕ್ಷತೆ ವಹಿಸಿ ಮಾತನಾಡಿ, ಮೊಬೈಲ್ ಮತ್ತು ಟಿವಿ ಹಾವಳಿ ನಡುವೆ ಮಕ್ಕಳ, ವಯಸ್ಕರ ಮನಸ್ಸು ಬದಲಾಯಿಸಿ ಸರಿ ದಾರಿ ತೋರಿಸುವ ಶಕ್ತಿ ಪುಸ್ತಕಗಳಿಗಿವೆ. ಮನೆಗೊಂದು ಗ್ರಂಥಾಲಯ ಸ್ವಾವಲಂಬನೆಯ ವೇದಿಕೆ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.

**ಸನ್ಮಾನ, ಅಭಿನಂದನಾ ಪತ್ರ:** ಮನೆಗೊಂದು ಗ್ರಂಥಾಲಯ ಅನುಷ್ಠಾನ ಮಾಡಿದ ಮಧುಸೂದನ್ ನರಸಿಂಹೇಗೌಡ ಹಾಗೂ ತಂದೆ ತಾಯಿಯನ್ನು ಇದೇ ಸಂದರ್ಭದಲ್ಲಿ ಜಾಗೃತ ಸಮಿತಿ ವತಿಯಿಂದ ಸನ್ಮಾನಿಸಿ ಅಭಿನಂದನಾ ಪತ್ರ ನೀಡಲಾಯಿತು.

ಗ್ರಾಮ ಪಂಚಾಯಿತಿ ಸದಸ್ಯ ರಾಮಕೃಷ್ಣ, ಮುಖಂಡ ಜಿ.ಬಿ. ಜಯರಾಮು, ಜಿಲ್ಲಾ ಜಾಗೃತ ಸಮಿತಿ ಸದಸ್ಯರಾದ ಚಂದ್ರಶೇಖರ ದ.ಕೋ. ಹಳ್ಳಿ, ಮಂಚಶೆಟ್ಟಿ ಎಂ., ಉಮೇಶ ದಡಮಹಳ್ಳಿ, ಸದ್ದಾಂ ತಗ್ಗಹಳ್ಳಿ ಉಪಸ್ಥಿತರಿದ್ದರು.

## ನಾಗಮಂಗಲ ತಹಸೀಲ್ದಾರ್ ಆದರ್ಶ ಜಿ ರವರಿಗೆ ಇ– ಪೌತಿ ಯೋಜನೆಯ ಗೌರವ



**ನಾಗಮಂಗಲ:** ಇ ಪೌತಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ತಹಸೀಲ್ದಾರ್ ಆದರ್ಶ ಜಿ ರವರಿಗೆ ಅಭಿನಂದನ ಪತ್ರ ನೀಡಿ ಗೌರವಿಸಿ ರುವ ಕರ್ನಾಟಕ ಸರ್ಕಾರದ ಕಂದಾಯ ಇಲಾಖೆ..

ಮರಣ ಹೊಂದಿದ ರೈತರ/ಖಾತೆ ದಾರರ ವಾರಸುದಾರರಿಗೆ ಕಷ್ಟವಿಲ್ಲದೆ, ಉಚಿತವಾಗಿ ಹಾಗೂ ಕಾಲಮಿತಿಯೊಳಗೆ 'ಪೌತಿ ಖಾತೆ' (ವಾರಸಾ ಹಕ್ಕು) ಮಾಡಿಕೊಡುವಲ್ಲಿ ನಾಗ'ವ'ಂಗ'ಲ ತಹಶೀಲ್ದಾರ್ ಆದರ್ಶ ರವರು ಗಣನಿಯವಾಗಿ ಕ್ರಮವಹಿಸಿದರು.

ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಕರ್ನಾಟಕ ಸರ್ಕಾರ ಜಾರಿ ಮಾಡಿದ್ದ ಇ ಪೌತಿ ಆಂದೋಲನ ವನ್ನ ಯಶಸ್ವಿಯಾಗಿ ಪೋರೈಸಿದ ಹಿನ್ನಲೆಯಲ್ಲಿ ಇಂದು ಕರ್ನಾಟಕ ಸರ್ಕಾರ ಕಂದಾಯ ಇಲಾಖೆ ಅಭಿನಂದನಾ ಪತ್ರ ನೀಡಿಸನ್ಮಾನಿಸಿಗೌರವಿಸಿದ್ದಾರೆ.

ನಿರಂತರವಾಗಿ ಅಧಿಕಾರಿಗಳ ಸಂಪರ್ಕ ಇಟ್ಟುಕೊಂಡು ಪ್ರತಿ ದಿನ ಪೌತಿ ಖಾತೆ ಬಗ್ಗೆ ಖುದ್ದು ಮಾಹಿತಿ ಪಡೆದುಕೊಳ್ಳುತ್ತಿದ್ದರು. ಅಧಿಕಾರಿಗಳಿಗೆ ಪ್ರೋತ್ಸಹ ನೀಡುವ ಮೂಲಕ ಪೌತಿ ಖಾತೆ ಯೋಜನೆಯನ್ನ ಯಶಸ್ವಿಯಾಗಿ ಪೋರೈಸುವ ಮೂಲಕ ಯಶಸ್ಸಿನ ಕಿರೀಟವನ್ನು ತಮ್ಮದಾಗಿಸಿ ಕೊಂಡಿದ್ದಾರೆ.

# ಓಂಕಾರದ ಮಹತ್ವ



ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಓಂ ಸರ್ವಕಾಲಿಕವನ್ನು ಪ್ರತಿನಿಧಿಸುತ್ತದೆ.ಭೂತ,ವರ್ತಮಾನ,ಭವಿಷ್ಯ ಮತ್ತು ಸಮಯವನ್ನು ಮೀರಿದೆ.ಓಂ ಎಲ್ಲವುಗಳ ಶಾಶ್ವತ ಏಕತೆಯನ್ನು ಪ್ರತಿನಿಧಿಸುತ್ತದೆ. ಯೋಗದ ಅಂತಿಮ ಗುರಿಯಾಗಿದೆ. ದೇಹ,ಮನಸ್ಸು ಮತ್ತು ಆತ್ಮದಲ್ಲಿ ಏಕಿಕರಿಸುವದಾಗಿದೆ.ನಮ್ಮನ್ನು ಒಳಗೊಂಡಂತೆ ಸುತ್ತಲಿನ ಎಲ್ಲವೂ ದೈವಿಕ ಅಂಶ ಒಳಗೊಂಡಿದೆ ಎಂದು ಓಂ ನಮಗೆ ನೆನಪಿಸುತ್ತದೆ. ಓಂ ಪದವು ಸೃಷ್ಟಿಯ ಆದಿ ಮತ್ತು ಅಂತ್ಯವನ್ನು ಪ್ರತಿಬಿಂಬಿಸುತ್ತದೆ. ಓಂಕಾರವನ್ನು ಪಠಿಸಿದರೆ ನಮ್ಮ ಎಲ್ಲ ಆಸೆಗಳು ಈಡೇರುತ್ತವೆ.ನಮ್ಮ ಒತ್ತಡದ ನಿವಾರಣೆಗಾಗಿ ಮನಸ್ಸು ಆಹ್ಲಾದವಾಗಿರುತ್ತದೆ.ಓಂ ಅನ್ನು ಎಲ್ಲ ಮಂತ್ರಗಳ ರಾಜನೆನ್ನಲಾಗುತ್ತದೆ.ಎಲ್ಲ ಮಂತ್ರಗಳ ಮೂಲವೇ ಓಂಕಾರವು ಪರಬ್ರಹ್ಮನನ್ನು ಪ್ರತಿನಿಧಿಸುತ್ತದೆ.ಓಂ ಪವಿತ್ರಪದವಾಗಿದ್ದು ಅನಂತ ಶಕ್ತಿಯನ್ನು ಪ್ರತಿನಿಧಿಸುತ್ತದೆ.ಭಾರತೀಯ ಸಂಸ್ಕೃತಿಯಲ್ಲಿ ಓಂಕಾರಕ್ಕೆ ಅತೀ ಹೆಚ್ಚಿನ ಮಹತ್ವ ನೀಡಲಾಗುತ್ತದೆ.




ಮಂತ್ರ,ದೇವರನಾಮ ಸ್ಮರಣೆ ಓಂ ಶಬ್ದದಿಂದಲೇ ಆರಂಭವಾಗುತ್ತದೆ. ಓಂಕಾರದ ಮೂಲಕ ಆರಂಭವಾಗುವ ದೇವರ ನಾಮಾರ್ಚನೆಯು ಹೆಚ್ಚು ಪರಿಣಾಮಕಾರಿಯಾದುದು ಎಂದು ವೇದದಲ್ಲಿ ಉಲ್ಲೇಖಿಸಲಾಗಿದೆ.

ಓಂ ಎನ್ನುವದು ಅಕ್ಷರವಲ್ಲ ಅದು 'ಅ' 'ಉ' 'ಮ' ಎಂಬ ಮೂರು ಅಕ್ಷರಗಳ ಸಂಗಮ.ಅ ಎಂದರೆ ಸೃಷ್ಟಿ,ಉ ಎಂದರೆ ವಿಕಸನ,ಮ ಎಂದರೆ ಮೌನ ಹಾಗೂ ವಿನಾಶ.ಹಾಗಾಗಿ ಒಂದೇ ಪದವು ಸೃಷ್ಟಿಯ ಆದಿ ಮತ್ತು ಅಂತ್ಯವನ್ನು ಪ್ರತಿಬಿಂಭಿಸುತ್ತದೆ.ಓಂಕಾರ ಪಠಿಸಿದಾಗ ನಮ್ಮ ಎಲ್ಲ ಆಸೆ ನೆರವೇರುತ್ತವೆ.ವೈಜ್ಞಾನಿಕವಾಗಿ ಸಾಬೀತಾಗಿರುವಂತೆ ಓಂಕಾರವನ್ನು ಪ್ರತಿದಿನ ಪಠಿಸಿದರೆ ನಮ್ಮ ಒತ್ತಡಗಳೆಲ್ಲ ನಿವಾರಣೆಯಾಗಿ ಮನಸ್ಸು ಆಹ್ಲಾದವಾಗಿರುತ್ತದೆ.

**ಓಂಕಾರದ ಪಠಣೆ**

ಬೆಳಿಗ್ಗೆ ಸ್ನಾನಾದಿ ಕರ್ಮ ಮುಗಿಸಿ ಮ್ಯಾಟ ಹಾಸಿಕೊಂಡು ಕಣ್ಣುಗಳನ್ನು ಮುಚ್ಚಿ ನಿರಾಳವಾಗಿ ಎರಡೂ ಹುಬ್ಬಿನ ಮಧ್ಯಭಾಗವನ್ನು ಕೇಂದ್ರಿಕರಿಸಿ ಓಂಕಾರವನ್ನು 21 ಬಾರಿ ಪಠಿಸಬೇಕು.15 ದಿನ ನಿರಂತರ ಓಂಕಾರದ ಪಠಣದಿಂದ ಒತ್ತಡಗಳು ನಿವಾರಣೆಯಾಗಿ ಮನಸ್ಸು ಶಾಂತವಾಗುವದು.ಓಂಕಾರದ ಪಠಣವು ನಮ್ಮ ಸುತ್ತಲಿನ ವಾತಾವರಣವನ್ನು ಶುದ್ಧಗೊಳಿಸಿ ಧನಾತ್ಮಕ ಕಂಪನ ಉಂಟುಮಾಡುತ್ತದೆ.ಇದರ ಉಚ್ಚಾರಣೆಯುದೇಹದಲ್ಲಿಯ ವಿಷಕಾರಿ ಅಂಶವನ್ನು ಹೊರಹಾಕುತ್ತದೆ.ಹೃದಯದ ಆರೋಗ್ಯ ವೃದ್ಧಿಯಾಗುತ್ತದೆ.ರಕ್ತ ಸಂಚಾರ ಆರೋಗ್ಯಕರವಾಗಿ ಜೀರ್ಣಾಂಗ ವ್ಯವಸ್ಥೆ ಸುಧಾರಿಸುತ್ತದೆ.ಉತ್ಸಾಹ ಹೆಚ್ಚಿಸುತ್ತದೆ.ಗಂಟಲಿನ ಆರೋಗ್ಯ ಥೈರಾಯ್ಡ ಸಮಸ್ಯೆ ಸುಧಾರಿಸುತ್ತದೆ.ನಾವೂ ದಿನನಿತ್ಯ ಓಂಕಾರವನ್ನು ಪಠಿಸಿ ಪುನೀತರಾಗೋಣ.

## "ಸಂಜೀವಿನಿ ಹಸ್ತ: ಜೇಮ್ಸ್ ಹ್ಯಾರಿಸನ್"





ಡಾ.ಸುಧಾಕರ.ಜಿ.ಲಕ್ಕವಳ್ಳಿ

ಜಗತ್ತಿನ ರಿಯಲ್ ಹೀರೊಗಳು ಕೇವಲ ಸಿನಿಮಾಗಳಲ್ಲಿ ಇರುವುದಿಲ್ಲ; ನಮ್ಮ ನಡುವೆಯೂ ಇರುತ್ತಾರೆ ಎಂಬುದಕ್ಕೆ ಆಸ್ಟ್ರೇಲಿಯಾದ ಜೇಮ್ಸ್ ಹ್ಯಾರಿಸನ್ ಅತ್ಯುತ್ತಮ ಉದಾಹರಣೆ. ಇವರನ್ನು ಇಡೀ ಜಗತ್ತು ಪ್ರೀತಿಯಿಂದ ಬಂಗಾರದ ಕೈಯುಳ್ಳ ಮನುಷ್ಯ ಎಂದು ಕರೆಯುತ್ತದೆ.

ಜೇಮ್ಸ್ ಅವರಿಗೆ 14 ವರ್ಷವಿದ್ದಾಗ ಒಂದು ದೊಡ್ಡ ಶಸ್ತ್ರಚಿಕಿತ್ಸೆಯಾಗಿತ್ತು. ಅಂದು ಅಪರಿಚಿತರು ನೀಡಿದ ರಕ್ತದಿಂದಾಗಿ ಅವರ ಜೀವ ಉಳಿಯಿತು.ಅಂದೇ ಅವರು,ತಾನು ಕೂಡ ರಕ್ತದಾನ ಮಾಡಿ ಜನರ ಪ್ರಾಣ ಉಳಿಸುತ್ತೇನೆ ಎಂದು ಸಂಕಲ್ಪ ಮಾಡಿದರು. ಒಬ್ಬ ಬಾಲಕ ಅಂದು ಕೈಗೊಂಡ ನಿರ್ಧಾರ ಮುಂದೊಂದು ದಿನ ಕೋಟ್ಯಂತರ ಕುಟುಂಬಗಳ ಪಾಲಿಗೆ ಬೆಳಕಾಯಿತು.

ಜೇಮ್ಸ್ ಅವರ ರಕ್ತದಲ್ಲಿ ಒಂದು ವಿಶೇಷ ಆಂಟಿಬಾಡಿ ಇತ್ತು. ಇದು ಗರ್ಭಿಣಿಯರಲ್ಲಿ ಕಂಡುಬರುವ ರಿಸಸ್ ಎಂಬ ಮಾರಣಾಂತಿಕ ಕಾಯಿಲೆಯನ್ನು ತಡೆಗಟ್ಟಿ,ಹುಟ್ಟುವ ಮಕ್ಕಳ ಪ್ರಾಣ ಉಳಿಸಲು ಮದ್ದಿನಂತೆ ಕೆಲಸ ಮಾಡುತ್ತಿತ್ತು. ಇದರ ಮಹತ್ವ ಅರಿತ ಜೇಮ್ಸ್, ಪ್ರತಿ 02 ವಾರಕ್ಕೊಮ್ಮೆ ತಪ್ಪದೇ ರಕ್ತದಾನ ಮಾಡಲು ಮುಂದಾದರು.

ಸುಮಾರು 60 ವರ್ಷಗಳ ಕಾಲ ಸತತವಾಗಿ 1,173 ಬಾರಿ ರಕ್ತದಾನ ಮಾಡಿದ ಜೇಮ್ಸ್, ಅಂದಾಜು 24 ಲಕ್ಷಕ್ಕೂ ಹೆಚ್ಚು ಶಿಶುಗಳ ಜೀವ ಉಳಿಸಿದ್ದಾರೆ. 81ನೇ ವಯಸ್ಸಿನವರೆಗೂ ಅವರು ಈ ನಿಸ್ವಾರ್ಥ ಸೇವೆಯನ್ನು ನಿರಂತರವಾಗಿ ನಡೆಸಿದರು.

ಸ್ಫೂರ್ತಿ ಸುಧೆ - 24

ಇಂದಿನ ಯುವಪೀಳಿಗೆಗೆ ಜೇಮ್ಸ್ ಹ್ಯಾರಿಸನ್ ಅವರ ಕಥೆ ಒಂದು ಮಹಾನ್ ಸ್ಫೂರ್ತಿ.ಸಾಧನೆ ಮಾಡಲು ಕೇವಲ ಹಣ ಅಥವಾ ಅಧಿಕಾರ ಬೇಕಿಲ್ಲ, ರಕ್ತದಾನದಂತಹ ಸಣ್ಣ ಹೆಜ್ಜೆಯೂ ಜಗತ್ತಿನಲ್ಲಿ ದೊಡ್ಡ ಬದಲಾವಣೆ ತರಬಲ್ಲದು.

ನಿಸ್ವಾರ್ಥ ಮನಸ್ಸಿದ್ದರೆ, ಸಾಮಾನ್ಯ ಮನುಷ್ಯನೂ ಲಕ್ಷಾಂತರ ಜನರ ಪಾಲಿಗೆ ದೈವಸ್ವರೂಪಿಯಾಗಬಲ್ಲ ಎಂಬುದಕ್ಕೆ ಇವರೇ ಸಾಕ್ಷಿ.

# ದುಬಾರೆಯಲ್ಲಿ ಆನೆಗಳ ಉಪಟಳಕ್ಕೆ ಅಮಾಯಕಿ ಬಲಿ : ಹೊಣೆ ಯಾರು



ಕೊಡಗು ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ ಕುಶಾಲನಗರದ ದುಬಾರೆ ಆನೆ ಶಿಬಿರದಲ್ಲಿ ಮೇ 18, 2026ರ ಸೋಮವಾರದಂದು ಸಂಭವಿಸಿದ ದುರಂತ ಇಡೀ ದೇಶವನ್ನೇ ನಡುಗಿಸಿದೆ.

ನಿತ್ಯದಂತೆ ಕಾವೇರಿ ನದಿಯಲ್ಲಿ ಆನೆಗಳಿಗೆ ಸ್ನಾನ ಮಾಡಿಸುವ ಪ್ರದರ್ಶನವನ್ನು ನೋಡುತ್ತಿದ್ದ ಪ್ರವಾಸಿಗರ ಗುಂಪಿನಲ್ಲಿದ್ದ ತಮಿಳುನಾಡಿನ ಚೆನ್ನೈ ಮೂಲದ ತುಳಸಿ (ಜಾಯ್ಸಿ, 33) ಎಂಬ ಮಹಿಳೆ, ಎರಡು ಆನೆಗಳ ನಡುವಿನ ದಿಢೀರ್ ಜಗಳದ ಸಂದರ್ಭದಲ್ಲಿ ಸಿಲುಕಿ ಅತ್ಯಂತ ಕ್ರೂರವಾಗಿ ಸಾವನ್ನಪ್ಪಿದ್ದಾರೆ.

ಬೆಳಿಗ್ಗೆ ಸುಮಾರು 11:15 ರ ಸುಮಾರಿಗೆ ಶಿಬಿರದ ಪಳಗಿಸಿದ ಆನೆಗಳಾದ ಕಂಜನ್ ಮತ್ತು ಮಾರ್ತಾಂಡ ನಡುವೆ ನದಿಯಲ್ಲಿ ಸ್ನಾನ ಮಾಡುವಾಗ ಹಠಾತ್ ಸಂಘರ್ಷ ಏರ್ಪಟ್ಟಿತು. ಮಾವುತರು ಅವುಗಳನ್ನು ನಿಯಂತ್ರಿಸಲು ಹರಸಾಹಸ ಪಟ್ಟರೂ ಸಾಧ್ಯವಾಗಲಿಲ್ಲ. ಕಂಜನ್ ಆನೆಯು ಮಾರ್ತಾಂಡನಿಗೆ ತೀವ್ರವಾಗಿ ಜಗಿದು ಅಟ್ಯಾಕ್ ಮಾಡಿದ ಪರಿಣಾಮ, ಮಾರ್ತಾಂಡ ನಿಯಂತ್ರಣ ತಪ್ಪಿ ದಡದಲ್ಲಿದ್ದ ತುಳಸಿ ಅವರ ಮೇಲೆ ಬಿದ್ದಿದ್ದಾನೆ. ಅವರ ಪತಿ ಜೋಯಲ್ ಮತ್ತು ಅವರ ಐದು ವರ್ಷದ ಮಗು ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಾರ್ತಾಂಡ ಕೆಳಗೆ ಬಿದ್ದ ತಕ್ಷಣವೇ ಕಂಜನ್ ಆನೆಯು ಆಕ್ರೋಶದಿಂದ ಸತತವಾಗಿ ದಾಳಿ ಮುಂದುವರಿಸಿತು. ಇದರಿಂದಾಗಿ ಮಾರ್ತಾಂಡ ಮೇಲೇಳಲು ಹೆಣಗಾಡುವಾಗ ಅದರ ಬೃಹತ್ ತೂಕಕ್ಕೆ ಸಿಲುಕಿದ ತುಳಸಿ ತೀವ್ರವಾಗಿ ನಜ್ಜುಗುಜ್ಜಾದರು. ಸ್ಥಳದಲ್ಲಿದ್ದ ಸಾರ್ವಜನಿಕರು ಮತ್ತು ಮಾವುತರು ತಕ್ಷಣವೇ ಅವರನ್ನು ರಕ್ಷಿಸಲು ಹೋದರೂ ಆನೆಗಳ ಭೀಕರ ಕಾಳಗದಿಂದಾಗಿ ಹತ್ತಿರ ಹೋಗಲು ಸಾಧ್ಯವಾಗಲಿಲ್ಲ. ತೀವ್ರವಾಗಿ ಗಾಯಗೊಂಡ ತುಳಸಿ ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗ ಮಧ್ಯದಲ್ಲಿ ಕೊನೆಯುಸಿರೆಳೆದಿದ್ದಾರೆ. ಈ ಭೀಕರ ಘಟನೆಯ ಬೆನ್ನಲ್ಲೇ ರಾಜ್ಯ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರು ತೀವ್ರ ಆಘಾತ ವ್ಯಕ್ತಪಡಿಸಿದ್ದು, ಘಟನೆಯ ಬಗ್ಗೆ ಸಮಗ್ರ ತನಿಖೆಗೆ ಆದೇಶಿಸಿದ್ದಾರೆ. ಅಲ್ಲದೆ ಮುನ್ನೆಚ್ಚರಿಕೆ ಕ್ರಮವಾಗಿ ದುಬಾರೆ ಶಿಬಿರವನ್ನು ತಕ್ಷಣವೇ ಮುಚ್ಚಲು ಹಾಗೂ ಪ್ರವಾಸಿಗರ ಭದ್ರತೆಗಾಗಿ ಹೊಸ ನಿಯಮಾವಳಿಗಳನ್ನು ರೂಪಿಸಲು ಆದೇಶ ಹೊರಡಿಸಿದ್ದಾರೆ.

ಈ ದುರಂತದಿಂದ ನಾವು ಕಲಿಯಬೇಕಾದ ಅತ್ಯಂತ ಕಠಿಣ ಹಾಗೂ ಪ್ರಮುಖ ಪಾಠವೆಂದರೆ "ಪಳಗಿಸಿದ" ಆನೆಗಳು ಎಂದಿಗೂ ನಾಯಿ–ಬೆಕ್ಕುಗಳಂತೆ "ಸಾಕುಪ್ರಾಣಿ"ಗಳಾಗಲು ಸಾಧ್ಯವಿಲ್ಲ. ಆನೆಗಳು ಅತ್ಯಂತ ಬುದ್ಧಿವಂತ ಮತ್ತು ಕಾಡು ಪ್ರವೃತ್ತಿಯನ್ನು ಹೊಂದಿರುವ ಬೃಹತ್ ಜೀವಿಗಳು. ಮನುಷ್ಯರೊಂದಿಗೆ ಎಷ್ಟೇ ವರ್ಷಗಳ ಕಾಲ ಇದ್ದರೂ, ಅವುಗಳ ಸಹಜ ಕಾಡು ಗುಣಗಳು, ಹಾರ್ಮೋನ್‌ಗಳ ಬದಲಾವಣೆ ಮತ್ತು ಪ್ರಾಬಲ್ಯದ ಪ್ರವೃತ್ತಿ ಎಂದಿಗೂ ಇಲ್ಲವಾಗುವುದಿಲ್ಲ. ಈ ದುರಂತಕ್ಕೆ ಆನೆಯ ನಡವಳಿಕೆಗಿಂತ, 4 ಟನ್ ತೂಕದ ವನ್ಯಜೀವಿಯನ್ನು ಪ್ರವಾಸಿಗರು ತೀರಾ ಹತ್ತಿರದಿಂದ ಮುಟ್ಟಲು ಮತ್ತು ಅವುಗಳ ಜೊತೆ ಬೆರೆಯಲು ಅವಕಾಶ ಮಾಡಿಕೊಟ್ಟ ವ್ಯವಸ್ಥೆಯ ಲೋಪವೇ ಮುಖ್ಯ ಕಾರಣವಾಗಿದೆ.

'ಮದ' (Musth)ಮತ್ತು ಒತ್ತಡದ ಹಿಂದಿರುವ ವಿಜ್ಞಾನ

ಆನೆಗಳಲ್ಲಿ, ವಿಶೇಷವಾಗಿ ಗಂಡಾನೆಗಳಲ್ಲಿ ಕಾಲಕಾಲಕ್ಕೆ 'ಮದ' (ಒಣ್ಣಾಣು) ಎಂಬ ಪ್ರಕ್ರಿಯೆ ನಡೆಯುತ್ತದೆ. ಈ ಸಮಯದಲ್ಲಿ ಅವುಗಳ ದೇಹದಲ್ಲಿ ಟೆಸ್ಟೋಸ್ಟೆರಾನ್ ಹಾರ್ಮೋನ್ ಮಟ್ಟವು ಸಾಮಾನ್ಯಕ್ಕಿಂತ 60 ಪಟ್ಟು ಹೆಚ್ಚು ಹೆಚ್ಚಾಗುತ್ತದೆ. ಇದರಿಂದಾಗಿ ಅತ್ಯಂತ ಶಾಂತವಾಗಿರುವ ಆನೆಗಳು ಸಹ ಹಠಾತ್ ಆಗಿ ಅತ್ಯಂತ ಹಿಂಸಾತ್ಮಕ ಮತ್ತು ಆಕ್ರಮಣಕಾರಿ ನಡವಳಿಕೆಯನ್ನು ಪ್ರದರ್ಶಿಸುತ್ತವೆ. ಜಗಳದಲ್ಲಿ ತೊಡಗಿದ್ದ ಕಂಜನ್ ಆನೆಯು ಈ ಹಿಂದೆ 2024 ರ ಮೈಸೂರು ದಸರಾ ತಯಾರಿಯ ಸಂದರ್ಭದಲ್ಲೂ ಒಮ್ಮೆ ಹೀಗೆಯೇ ಹತೋಟಿ ತಪ್ಪಿ ಓಡಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಇದರೊಂದಿಗೆ, ನಿರಂತರವಾಗಿ ಚಾಕಲೇಟ್, ಬಾಳೆಹಣ್ಣು ತಿನ್ನಿಸಲು ಬರುವ ಜನದಟ್ಟಣೆ, ಪ್ರವಾಸಿಗರ ಗದ್ದಲ, ಕ್ಯಾಮೆರಾ ಫ್ಲಾಶ್‌ಗಳು ಮತ್ತು ಸದಾ ಸರಪಳಿಯಿಂದ ಬಂಧಿಸಲ್ಪಟ್ಟಿರುವುದು ಆನೆಗಳಲ್ಲಿ ತೀವ್ರ ಮಾನಸಿಕ ಒತ್ತಡವನ್ನು ಉಂಟುಮಾಡುತ್ತದೆ. ಇಂತಹ ಒತ್ತಡದಲ್ಲಿರುವಾಗ ಅವುಗಳ ತಾಳ್ಮೆಯ ಮಿತಿ ಮೀರಿದರೆ, ಅವು ಎದುರಾಳಿ ಆನೆಗಳ ಮೇಲೆ ಅಥವಾ ಮನುಷ್ಯರ ಮೇಲೆ ತಿರುಗಿಬೀಳುತ್ತವೆ.

ಪ್ರವಾಸಿಗರು ಮಾಡಬೇಕಾದ ಮತ್ತು ಮಾಡಬಾರದ ಕೆಲಸಗಳು (Dos and Don ts)

ವನ್ಯಜೀವಿ ಪ್ರವಾಸೋದ್ಯಮವು ಕೇವಲ ಮನರಂಜನೆಯಲ್ಲ, ಅದು ಅತ್ಯಂತ ಅಪಾಯಕಾರಿ ಎಂಬ ಅರಿವು ಪ್ರತಿಯೊಬ್ಬ ಪ್ರವಾಸಿಗನಿಗೂ ಇರಬೇಕು.

ಮಾಡಬೇಕಾದ ಕೆಲಸಗಳು:

ಆನೆಗಳಿಂದ ಕನಿಷ್ಠ 100 ಅಡಿಗಳಷ್ಟು ಸುರಕ್ಷಿತ ದೂರವನ್ನು ಸದಾ ಕಾಯ್ದುಕೊಳ್ಳಬೇಕು. ಆನೆಗಳ ನಡವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು; ಅವು ಕಿವಿಗಳನ್ನು ಜೋರಾಗಿ ಆಡಿಸುವುದು, ತಲೆ ಅಲ್ಲಾಡಿಸುವುದು, ನೆಲಕ್ಕೆ ಸೊಂಡಿಲು ಬಡಿಯುವುದು ಅಥವಾ ಗೀಳಿಡುವುದನ್ನು ಮಾಡಿದರೆ ಅವು ಒತ್ತಡದಲ್ಲಿವೆ ಎಂದರ್ಥ, ತಕ್ಷಣ ಅಲ್ಲಿಂದ ದೂರ ಸರಿಯಬೇಕು. ಮಾವುತರು ಅಥವಾ ಸಿಬ್ಬಂದಿ ಜಾಗ ಖಾಲಿ ಮಾಡಲು ಹೇಳಿದ ತಕ್ಷಣ ಯಾವುದೇ ಪ್ರಶ್ನೆ ಕೇಳದೆ ಸುರಕ್ಷಿತ ಸ್ಥಳಕ್ಕೆ ತೆರಳಬೇಕು. ವನ್ಯಜೀವಿಗಳ ಬಳಿ ಇರುವಾಗ ಅಪಾಯ ಎದುರಾದರೆ ತಕ್ಷಣ ಓಡಿಹೋಗಲು ಅಥವಾ ರಕ್ಷಿಸಿಕೊಳ್ಳಲು ಎತ್ತರವಾದ ಸುರಕ್ಷಿತ ಜಾಗ ಎಲ್ಲಿದೆ ಎಂಬುದನ್ನು ಮೊದಲೇ ಗಮನಿಸಿಟ್ಟುಕೊಳ್ಳಬೇಕು.

ಮಾಡಬಾರದ ಕೆಲಸಗಳು:

ಆನೆಗಳ ಅತ್ಯಂತ ಹತ್ತಿರ ಹೋಗಿ ಫೋಟೋ ಅಥವಾ ಸೆಲ್ಫಿ ತೆಗೆದುಕೊಳ್ಳಲು ಎಂದಿಗೂ ಪ್ರಯತ್ನಿಸಬಾರದು; ಕ್ಯಾಮೆರಾ ಫ್ಲ್ಯಾಶ್‌ಗಳು ಅವುಗಳನ್ನು ತೀವ್ರವಾಗಿ ಕೆರಳಿಸಬಹುದು. ಆನೆಗಳ ಸೊಂಡಿಲನ್ನು ಮುಟ್ಟುವುದು, ಬೆನ್ನು ಸವರುವುದು ಅಥವಾ ನೇರವಾಗಿ ಕೈಯಿಂದ ಬಾಳೆಹಣ್ಣು, ಬೆಲ್ಲ ನೀಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಆನೆಗಳ ಬಳಿ ಜೋರಾಗಿ ಕಿರುಚುವುದು, ಕಿರುಚಾಡುವುದು ಅಥವಾ ಸೌಂಡ್ ಮಾಡುವುದರಿಂದ ಅವುಗಳು ಆತಂಕಗೊಂಡು ದಾಳಿ ಮಾಡಲು ಮುಂದಾಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಆನೆಗಳು ನದಿಯಲ್ಲಿ ಸ್ನಾನ ಮಾಡುವಾಗ ಅವುಗಳ ಸುತ್ತಲೂ ನದಿಯ ನೀರಿನಲ್ಲಿ ಪ್ರವಾಸಿಗರು ಮುಗಿಬೀಳಬಾರದು, ಇದು ಪ್ರಾಣಕ್ಕೆ ಕುತ್ತು ತರಬಲ್ಲದು.

**ಕೊಡಗಿನ ಮಾನವ–ಆನೆ ಸಂಘರ್ಷದ ಹಿನ್ನೆಲೆ :** ಕೊಡಗು ಜಿಲ್ಲೆಯು ಭಾರತದಲ್ಲೇ ಅತ್ಯಂತ ಹೆಚ್ಚು ಮಾನವ–ಆನೆ ಸಂಘರ್ಷ ನಡೆಯುವ ತಾಣಗಳಲ್ಲಿ ಒಂದಾಗಿದೆ. ಹೆದ್ದಾರಿಗಳು, ರೆಸಾರ್ಟ್‌ಗಳು ಮತ್ತು ಕಾಫಿ ತೋಟಗಳ ವಿಸ್ತರಣೆಯಿಂದಾಗಿ ಆನೆಗಳ ಸಾಂಪ್ರದಾಯಿಕ ಸಂಚಾರ ಪಥಗಳು ನಾಶವಾಗಿವೆ. ದುಬಾರೆ ಕೇವಲ ಪ್ರವಾಸಿ ತಾಣವಲ್ಲ; ಇದು ಕಾಡಿನಿಂದ ನಾಡಿಗೆ ಬಂದು ಜನರಿಗೆ ತೊಂದರೆ ಕೊಟ್ಟ ಒಂಟಿಸಲಗಗಳನ್ನು ಹಿಡಿದು ತಂದು ಪಳಗಿಸುವ ಪುನರ್ವಸತಿ ಕೇಂದ್ರವಾಗಿದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ಒತ್ತಡದಲ್ಲಿರುವ ಕಾಡು ಆನೆಗಳನ್ನು ಪ್ರವಾಸಿಗರ ಮನರಂಜನೆಗೆ ಬಳಸುವುದು ಎಷ್ಟು ಸೂಕ್ತ ಎಂಬ ಪ್ರಶ್ನೆ ಎದ್ದಿದೆ.

ಸರ್ಕಾರ ತಕ್ಷಣ ಕೈಗೊಳ್ಳಬೇಕಾದ ಕಟ್ಟುನಿಟ್ಟಿನ ಕ್ರಮಗಳು

ಈ ಘಟನೆಯ ನಂತರ ಅರಣ್ಯ ಇಲಾಖೆಯು ಕಟ್ಟುನಿಟ್ಟಿನ ಹೊಸ ನಿಯಮಾವಳಿಗಳನ್ನು (ಖಔಕ) ಜಾರಿಗೆ ತರಲು ಆದೇಶಿಸಿದೆ. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಸರ್ಕಾರ ಈ ಕೆಳಗಿನ ಕ್ರಮಗಳನ್ನು ತಕ್ಷಣವೇ ಹಾಗೂ ಕಡ್ಡಾಯವಾಗಿ ಜಾರಿಗೆ ತರಬೇಕಾಗಿದೆ:

ಮೊದಲನೆಯದಾಗಿ, ಪ್ರವಾಸಿಗರು ಮತ್ತು ಆನೆಗಳ ನಡುವೆ ಕನಿಷ್ಠ 100 ಅಡಿಗಳಷ್ಟು ಸುರಕ್ಷಿತ ಅಂತರವನ್ನು ಕಡ್ಡಾಯಗೊಳಿಸಬೇಕು. ಪ್ರವಾಸಿಗರು ನದಿಗೆ ಇಳಿಯದಂತೆ ತಡೆಯಲು, ಸುರಕ್ಷಿತವಾದ ಮತ್ತು ಎತ್ತರವಾದ ಕಬ್ಬಿಣದ ಬೇಲಿಗಳನ್ನು ಹೊಂದಿರುವ ವೀಕ್ಷಣಾ ವೇದಿಕೆಗಳನ್ನು ನಿರ್ಮಿಸಬೇಕು.

ಎರಡನೆಯದಾಗಿ, ಪ್ರವಾಸಿಗರು ಆನೆಗಳನ್ನು ಮುಟ್ಟುವುದು, ಅವುಗಳಿಗೆ ಸ್ನಾನ ಮಾಡಿಸುವುದು ಮತ್ತು ನೇರವಾಗಿ ಆಹಾರ ನೀಡುವುದನ್ನು ಕಾನೂನುಬದ್ಧವಾಗಿ ನಿಷೇಧಿಸಬೇಕು. ಜಾಗತಿಕ ಮಟ್ಟದಲ್ಲಿ ಥಾಯ್ಲೆಂಡ್‌ನಂತಹ ದೇಶಗಳು ಈಗಾಗಲೇ ಈ "ನೋ–ಕಾಂಟ್ಯಾಕ್ಟ್" (No-Contact) ಮಾದರಿಯನ್ನು ಅಳವಡಿಸಿಕೊಂಡಿದ್ದು, ಪ್ರವಾಸಿಗರು ಕೇವಲ ದೂರದಿಂದ ಆನೆಗಳ ನೈಸರ್ಗಿಕ ಜೀವನವನ್ನು ನೋಡಿ ಆನಂದಿಸುವ ವ್ಯವಸ್ಥೆ ತರಲಾಗಿದೆ. ಇದು ಪ್ರವಾಸೋದ್ಯಮದ ಆದಾಯವನ್ನು ಕುಗ್ಗಿಸುವುದಿಲ್ಲ, ಬದಲಿಗೆ ಜವಾಬ್ದಾರಿಯುತ ಪ್ರವಾಸೋದ್ಯಮವನ್ನು ಉತ್ತೇಜಿಸುತ್ತದೆ.

ಮೂರನೆಯದಾಗಿ, ದಿನನಿತ್ಯ ಶಿಬಿರಕ್ಕೆ ಬರುವ ಪ್ರವಾಸಿಗರ ಸಂಖ್ಯೆಗೆ ಕಟ್ಟುನಿಟ್ಟಿನ ಮಿತಿಯನ್ನು ಹೇರಬೇಕು (Crowd Control). ಅತಿಯಾದ ಜನದಟ್ಟಣೆಯಿಂದಾಗಿ ಆನೆಗಳು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗುವುದನ್ನು ತಪ್ಪಿಸಬೇಕು.

ಕೊನೆಯದಾಗಿ, ಸ್ಥಳೀಯ ಬುಡಕಟ್ಟು ಸಮುದಾಯದ (ಜೇನು ಕುರುಬ) ಮಾವುತರಿಗೆ ಸುಧಾರಿತ ಸಂವಹನ ಸಾಧನಗಳನ್ನು ನೀಡಬೇಕು ಹಾಗೂ ಆನೆಗಳ ನಡವಳಿಕೆಯನ್ನು ನಿರಂತರವಾಗಿ ಹಾರ್ಮೋನ್ ಟೆಸ್ಟಿಂಗ್ ಮೂಲಕ ಗಮನಿಸಬೇಕು. ಮದದ ಲಕ್ಷಣಗಳಿರುವ ಅಥವಾ ಸಿಟ್ಟಿನಲ್ಲಿರುವ ಆನೆಗಳನ್ನು ತಕ್ಷಣವೇ ಸಾರ್ವಜನಿಕ ವೀಕ್ಷಣೆಯಿಂದ ದೂರವಿಟ್ಟು ಪ್ರತ್ಯೇಕವಾಗಿ ಇರಿಸಬೇಕು. ಅಪಾಯದ ಸಮಯದಲ್ಲಿ ಮಾವುತರಿಗೆ ಹೆಚ್ಚಿನ ಜೀವ ವಿಮೆ ಹಾಗೂ ಸೂಕ್ತ ರಕ್ಷಣೆ ಒದಗಿಸಬೇಕು.

ದುಬಾರೆಯ ಈ ದುರಂತವು ವನ್ಯಜೀವಿಗಳನ್ನು ಕೇವಲ ಪ್ರದರ್ಶನದ ವಸ್ತುಗಳಂತೆ ಬಳಸುವುದನ್ನು ನಿಲ್ಲಿಸಲು ನಮಗೆ ಕೊಟ್ಟಿರುವ ಕಟು ಎಚ್ಚರಿಕೆಯಾಗಿದೆ. ಪ್ರಕೃತಿ ಮತ್ತು ವನ್ಯಜೀವಿಗಳನ್ನು ಗೌರವಿಸುವ, ಪ್ರವಾಸಿಗರ ಜೀವಕ್ಕೆ ಮೊದಲ ಆದ್ಯತೆ ನೀಡುವ ಕಟ್ಟುನಿಟ್ಟಿನ ನಿಯಮಗಳು ಜಾರಿಗೆ ಬರದಿದ್ದರೆ ಇಂತಹ ದುರಂತಗಳು ಮರುಕಳಿಸುತ್ತಲೇ ಇರುತ್ತವೆ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ರೈಟ್ ಟು ಡೈ






| ರೂಪ ಮಂಜುನಾಥ ಹೊಳೆನರಸೀಪುರ

ನಾನು ಮೊನ್ನೆ ಬರೆದ ರೈಟ್ ಟು ಡ್ರೈ , ಲೇಖನವನ್ನ ಕನೆಕ್ಟಿಕಟ್ ನಲ್ಲಿರುವ ಅತಿ ಅದ್ಭುತ ಗಾಯಕರು, ಸಾಹಿತಿಗಳು ,ಕಲಾವಿದರು,ಚಾರಣಿಗರೂ, ಒಟ್ಟಿನಲ್ಲಿ ಪರಿಪೂರ್ಣ ಪ್ಯಾಕೇಜ್ ಆದ, ನನ್ನ ಆತ್ಮೀಯರಾದ ಯಶವಂತ ಗಡ್ಡಿಯವರಿಗೆ ಜಗಲಿಸಿ, ನೋಡಿ ಗಡ್ಡಿಯವರೆ, ಇದು ನಿಮ್ಮ ದೇಶದ ವಿಚಾರ. ಅದಕ್ಕೆ ಕಳಿಸಿದ್ದೇನೆ. ಸಮಯ ಮಾಡಿಕೊಂಡು ಓದಿ , ಎಂದು ಲೇಖನಿಸಿದ್ದೆ. ಅವರು ಮೂರ್ನಾಲ್ಕು ದಿನ ಕಳೆದ ನಂತರ, ಲೇಖನ ತುಂಬಾ ಚೆನ್ನಾಗಿದೆ. ಆದರೆ, ನಾನು ಓದುವಾಗ , ರೈಟ್ ಟು ಡೈ , ಅಂತ ಓದಿಕೊಂಡಿದ್ದೆ. ನಂತರ ಲೇಖನ ಓದತೊಡಗಿದಾಗಲೇ ಅದು ಡೈ ಅಲ್ಲ ಡ್ರೈ ಎಂದು ಅರ್ಥವಾದದ್ದು , ಎಂದು ತಿಳಿಸಿದರಾ ಆಗ ಇದ್ದಕ್ಕಿದ್ದಂತೆ ತಲೆಯಲ್ಲೊಂದು ವಿಚಾರ ಹೊಳೆಯಿತು.ಹೌದು, ಈ ರೈಟು ಟು ಡೈ ಬಗ್ಗೆ ಕೂಡಾ ಒಂದು ಲೇಖನ ಬರೆಯಬಹುದಲ್ವಾ ಅಂತ. ನಿಜ ಅಲ್ವಾ ಸ್ನೇಹಿತರೇ, ಒಮ್ಮೊಮ್ಮೆ ಗ್ರಹಿಸುವಿಕೆಯಲ್ಲಿ ಎಡವಟ್ಟಾದರೂ ನಮಗೇನೋ ಹೊಸ ವಿಚಾರ ತಿಳಿಯೋಕೆ ದಾರಿ ಆಗಬಹುದು.

ಬದುಕುವ ಹಕ್ಕು ಪ್ರತಿಯೊಬ್ಬ ಮಾನವನಿಗೂ ಇದೆ ಎಂದು ನಾವು ಬಲವಾಗಿ ನಂಬುತ್ತೇವೆ. ಆದರೆ ಅದೇ ತಾರ್ಕಿಕ ನೆಲೆಯ ಮೇಲೆ ನಿಂತು ಯೋಚಿಸಿದರೆ ಸಾಯುವ ಹಕ್ಕೂ ಮಾನವನಿಗಿದೆಯೇ ನೋವಿನಿಂದ ನರಳುತ್ತಿರುವ, ಇನ್ನು ಗುಣಮುಖವಾಗಲಾರೆ ಎಂದು ವೈದ್ಯರೇ ಖಚಿತಪಡಿಸಿದ, ದಿನದಿನವೂ ಬಳಲುತ್ತಿರುವ ರೋಗಿಯೊಬ್ಬ "ನನ್ನ ಮರಣ ನಾನೇ ಆರಿಸಿಕೊಳ್ಳುತ್ತೇನೆ" ಎಂದರೆ ಅದು ತಪ್ಪೇ ಇದು ಕೇವಲ ಕಾನೂನಿನ ಪ್ರಶ್ನೆ ಮಾತ್ರವಲ್ಲ ನೈತಿಕತೆ, ತತ್ವಶಾಸ್ತ್ರ, ವೈದ್ಯವಿಜ್ಞಾನ, ಧರ್ಮ ಮತ್ತು ಮಾನವೀಯತೆ ಎಲ್ಲವೂ ಒಂದೇ ನೆಲೆಯಲ್ಲಿ ಢಿಕ್ಕಿ ಹೊಡೆದು ಸಂಘರ್ಷಕ್ಕೆ ನಿಲ್ಲುವ ಜಟಿಲ ಸಮಸ್ಯೆ ಅಲ್ಲವೇ

"ರೈಟ್ ಟು ಡೈ" ಅಥವಾ "ಸಾಯುವ ಹಕ್ಕು" ಎಂಬ ಪರಿಕಲ್ಪನೆ ಇಂದು ಜಾಗತಿಕ ಮಟ್ಟದಲ್ಲಿ ತೀವ್ರ ಚರ್ಚೆಗೆ ಒಳಗಾಗಿದೆ. ಒಂದು ಕಡೆ ಮಾನವನ ಘನತೆಯ ಪ್ರಶ್ನೆ, ಮತ್ತೊಂದು ಕಡೆ ಜೀವನದ ನೋವಿನಾಳದ ವಾದ ಇವೆರಡರ ನಡುವೆ ಜಗತ್ತಿನ ದೇಶಗಳು



ಇನ್ನೂ ತಮ್ಮ ನಿಲುವುಗಳನ್ನು ಪರಿಶೋಧಿಸಿಕೊಳ್ಳುತ್ತಿವೆ.

ಈ ಚರ್ಚೆಗೆ ಇತಿಹಾಸ ಇದೆ. ಪ್ರಾಚೀನ ಗ್ರೀಸ್‌ನಲ್ಲಿ ಕೆಲವು ತತ್ವಜ್ಞಾನಿಗಳು ಸ್ವಯಂ ಆರಿಸಿಕೊಂಡ ಮರಣವನ್ನು ಗೌರವಿಸುತ್ತಿದ್ದರು. ಸಾಕ್ರಟೀಸ್ ವಿಷ ಕುಡಿದ ಘಟನೆ, ರೋಮನ್ ಸ್ಟೋಯಿಕ್ ತತ್ವಜ್ಞಾನಿಗಳ ಮರಣ ದರ್ಶನ ಇವೆಲ್ಲ ಸಾವಿನ ಆಯ್ಕೆಯ ಕುರಿತು ಮಾನವ ಚಿಂತನೆ ಎಷ್ಟು ಹಳೆಯದು ಎಂಬುದನ್ನು ಹೇಳುತ್ತವೆ. ಆದರೆ ಆಧುನಿಕ ವೈದ್ಯಕೀಯ ವಿಜ್ಞಾನ ಮನುಷ್ಯನ ಆಯಸ್ಸನ್ನು ಇನ್ನಿಲ್ಲದಂತೆ ಹಿಗ್ಗಿಸಿದ ಮೇಲೆ ಈ ಪ್ರಶ್ನೆ ಹೊಸ ತುರ್ತು ಪಡೆದುಕೊಂಡಿದೆ "ಇನ್ನೂ ಎಷ್ಟು ದಿನ ಬದುಕಬಹುದು " ಎಂಬ ಪ್ರಶ್ನೆಯ ಜೊತೆಗೆ "ಎಷ್ಟು ದಿನ ಬದುಕಬೇಕು " ಎಂಬ ಪ್ರಶ್ನೆಯೂ ಹುಟ್ಟಿಕೊಂಡಿದೆ.

ಈ ವಿಷಯದ ಚರ್ಚೆಯಲ್ಲಿ ಕೆಲವು ಮುಖ್ಯ ಪದಗಳನ್ನು ಅರ್ಥ ಮಾಡಿಕೊಳ್ಳಬೇಕು.

ಯುಥನೇಷಿಯಾ (Euthanasia) ವೈದ್ಯರು ನೇರವಾಗಿ ರೋಗಿಗೆ ಮರಣ ಉಂಟುಮಾಡುವ ಕ್ರಿಯೆ. ಇದನ್ನು "ಆಕ್ಟಿವ್ ಯುಥನೇಷಿಯಾ" ಎನ್ನುತ್ತಾರೆ.

ಸಹಾಯಕ ಆತ್ಮಹತ್ಯೆ (Assisted Suicide) ವೈದ್ಯರು ಔಷಧ ಕೊಡುತ್ತಾರೆ, ರೋಗಿಯೇ ಸ್ವಯಂ ತಮ್ಮ ಸಂಪೂರ್ಣ ಪ್ರಜ್ಞಾಪೂರ್ವಕ ಅರಿವಿನಿಂದಲೇ ಜೀವ ಹೋಗುವ ಔಷಧ ತೆಗೆದುಕೊಳ್ಳುತ್ತಾರೆ.

ಪ್ಯಾಸಿವ್ ಯುಥನೇಷಿಯಾ ಚಿಕಿತ್ಸೆ ನಿಲ್ಲಿಸುವ ಮೂಲಕ ಸ್ವಾಭಾವಿಕ ಮರಣಕ್ಕೆ ಅವಕಾಶ ಕೊಡುವುದು. ಭಾರತದಲ್ಲಿ ಇದಕ್ಕೆ ಮಾನ್ಯತೆ ಇದೆ.

ಲಿವಿಂಗ್ ವಿಲ್ (Living Will) ಒಬ್ಬ ವ್ಯಕ್ತಿ ಆರೋಗ್ಯವಾಗಿರುವಾಗಲೇ "ನಾನು ಇಂಥ ಸ್ಥಿತಿಗೆ ಬಂದಲ್ಲಿ, ಹೀಗೆ ಮಾಡಿ" ಎಂದು ಬರೆದಿಡುವ ದಾಖಲೆ.

ಈ ವ್ಯತ್ಯಾಸಗಳನ್ನು ತಿಳಿಯದೆ ಈ ವಿಷಯ ಚರ್ಚಿಸಿದರೆ ಗೊಂದಲ ಹೆಚ್ಚುತ್ತದೆ.

ಈ ರೈಟ್ ಡು ಡೈ ಕಾನೂನು ಜಗತ್ತಿನ ವಿವಿಧ ದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಜಾರಿಯಲ್ಲಿದೆ.

**ನೆದರ್ಲ್ಯಾಂಡ್ಸ್ ಮತ್ತು ಬೆಲ್ಜಿಯಂ:** ಈ ಎರಡು ದೇಶಗಳು "ರೈಟ್ ಟು ಡೈ" ಕ್ಷೇತ್ರದಲ್ಲಿ ಜಗತ್ತಿಗೆ ಮಾದರಿಯಾಗಿ ನಿಂತಿವೆ. ನೆದರ್ಲ್ಯಾಂಡ್ಸ್ 2001ರಲ್ಲೇ ದಯಾಮರಣವನ್ನು ಕಾನೂನುಬದ್ಧಗೊಳಿಸಿತು. ರೋಗಿಯು ಅಸಹನೀಯ ನೋವಿನಲ್ಲಿದ್ದು, ಗುಣಮುಖವಾಗುವ ಸಾಧ್ಯತೆಯೇ ಇಲ್ಲ ಎಂದು ಖಚಿತವಾದರೆ, ಸ್ವಯಂ ಪ್ರಜ್ಞೆಯಿಂದ ಬೇಡಿಕೊಂಡ ರೋಗಿಗೆ ವೈದ್ಯರು ಮರಣದ ನೆರವು ನೀಡಬಹುದು. ಬೆಲ್ಜಿಯಂ ಇನ್ನೂ ಮುಂದೆ ಹೋಗಿ, 2014ರಲ್ಲಿ ವಯಸ್ಸಿನ ಮಿತಿಯನ್ನೇ ತೆಗೆದುಹಾಕಿ, ಮಕ್ಕಳಿಗೂ ಈ ಹಕ್ಕನ್ನು ನೀಡಿತು ಆ ಸಮಯದಲ್ಲಿ ಲೋಕದಾದ್ಯಂತ ಇರುವ ವಿಚಾರಪರರು ಈ ನೀತಿಯನ್ನು ವಿರೋಧಿಸಿದರು.ಇದು ವ್ಯಾಪಕ ವಿವಾದಕ್ಕೂ ಕಾರಣವಾಯಿತು.

**ಸ್ವಿಟ್ಜರ್ಲೆಂಡ್:**

ಸ್ವಿಟ್ಜರ್ಲೆಂಡ್ ಒಂದು ವಿಶಿಷ್ಟ ದಾರಿ ಹಿಡಿದಿದೆ. ಅಲ್ಲಿ "ಡಿಗ್ನಿಟಾಸ್" ಮತ್ತು "ಎಕ್ಸಿಟ್" ಎಂಬ ಸಂಸ್ಥೆಗಳು ಸಹಾಯಕ ಆತ್ಮಹತ್ಯೆಗೆ ನೆರವು ನೀಡುತ್ತವೆ. ವಿಶೇಷವೆಂದರೆ, ಬೇರೆ ದೇಶದ ನಾಗರಿಕರೂ ಇಲ್ಲಿಗೆ ಬಂದು ಈ ಸೇವೆ ಪಡೆಯಬಹುದು. ಇದನ್ನು "ಡೆತ್ ಟೂರಿಸಂ" ಎಂದು ಟೀಕಿಸುವವರೂ ಇದ್ದಾರೆ, ಮಾನವ ಘನತೆಯ ಕೊನೆಯ ಆಯ್ಕೆ ಎಂದು ಸ್ವಾಗತಿಸುವವರೂ ಇದ್ದಾರೆ.

**ಕೆನಡಾ:**

2016ರಲ್ಲಿ ಕೆನಡಾ "ವೈದ್ಯಕೀಯ ನೆರವಿನ ಮರಣ" (Medical Assistance in Dying MAID) ಕಾನೂನನ್ನು ಜಾರಿಗೆ ತಂದಿತು. ಆರಂಭದಲ್ಲಿ ಇದು ಕೇವಲ ಮಾರಣಾಂತಿಕ ಕಾಯಿಲೆಗಳಿಗೆ ಮಾತ್ರ ಸೀಮಿತವಾಗಿತ್ತು. ನಂತರ ಈ ಕಾನೂನು ವಿಸ್ತರಿಸಿ, ತೀವ್ರ ಮಾನಸಿಕ ನೋವು ಅನುಭವಿಸುವವರಿಗೂ ಅನ್ವಯಿಸುವ ಚರ್ಚೆ ನಡೆಯುತ್ತಿದೆ.

ಅಮೆರಿಕ ಸಂಯುಕ್ತ ಸಂಸ್ಥಾನ:

ಅಮೆರಿಕದಲ್ಲಿ ಈ ಕಾನೂನು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ. ಒರೆಗಾನ್ 1997ರಲ್ಲೇ "ಡೆತ್ ವಿತ್ ಡಿಗ್ನಿಟಿ ಆಕ್ಟ್" ಜಾರಿಗೆ ತಂದ ಮೊದಲ ರಾಜ್ಯ. ಇಂದು ಒರೆಗಾನ್, ವಾಷಿಂಗ್ಟನ್, ಕ್ಯಾಲಿಫೋರ್ನಿಯಾ ಸೇರಿದಂತೆ ಹತ್ತಕ್ಕೂ ಹೆಚ್ಚು ರಾಜ್ಯಗಳಲ್ಲಿ ಸಹಾಯಕ ಮರಣ ಕಾನೂನುಬದ್ಧ. ಆದರೆ ಟೆಕ್ಸಾಸ್‌ನಂತಹ ರಾಜ್ಯಗಳಲ್ಲಿ ಇನ್ನೂ ಸಂಪೂರ್ಣ ನಿಷೇಧ ಇದೆ.

**ಭಾರತ:**

ಭಾರತದ ಸರ್ವೋಚ್ಚ ನ್ಯಾಯಾಲಯ 2018ರಲ್ಲಿ ಒಂದು ಐತಿಹಾಸಿಕ ತೀರ್ಪು ನೀಡಿತು "ಪ್ಯಾಸಿವ್ ಯುಥನೇಷಿಯಾ"ಕ್ಕೆ ಅಂದರೆ ಜೀವ ಉಳಿಸುವ ಯಂತ್ರಗಳನ್ನು ತೆಗೆದುಹಾಕುವ ಹಕ್ಕನ್ನು ಮಾನ್ಯ ಮಾಡಿತು. "ಲಿವಿಂಗ್ ವಿಲ್" ಅಂದರೆ ಒಬ್ಬ ವ್ಯಕ್ತಿ ಮೊದಲೇ ಬರೆದಿಟ್ಟ ಇಚ್ಛೆಯ ಪ್ರಕಾರ, ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ ಚಿಕಿತ್ಸೆ ನಿಲ್ಲಿಸಬಹುದು ಎಂದು ತೀರ್ಪು ನೀಡಲಾಯಿತು. ಈ ತೀರ್ಪಿಗೆ ಕಾರಣವಾದ ಪ್ರಕರಣ ಅರುಣಾ ಶಾನ್‌ಬಾಗ್ ಅವರದ್ದು ಮುಂಬೈನ ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದ ಈಕೆ 1973ರಲ್ಲಿ ಅತ್ಯಾಚಾರಕ್ಕೊಳಗಾಗಿ ಸುಮಾರು 42 ವರ್ಷ ಕೋಮಾ ಸ್ಥಿತಿಯಲ್ಲಿದ್ದು 2015ರಲ್ಲಿ ನಿಧನರಾದರು. ಅವರ ಪ್ರಕರಣ ಭಾರತದಲ್ಲಿ ಈ ಚರ್ಚೆಗೆ ಮಾನವೀಯ ಮುಖ ನೀಡಿತು. ಆದರೆ "ಆಕ್ಟಿವ್ ಯುಥನೇಷಿಯಾ" ಅಂದರೆ ವೈದ್ಯರೇ ಮರಣಕ್ಕೆ ನೆರವಾಗುವುದು ಇನ್ನೂ ಅಪರಾಧ ಎಂದೇ ಪರಿಗಣಿಸಲಾಗಿದೆ.

**ಆಸ್ಟ್ರೇಲಿಯಾ:**

ಆಸ್ಟ್ರೇಲಿಯಾದ ರಾಜ್ಯಗಳು ಕ್ರಮೇಣ ಈ ಕೆಳಗಿನ ಕಾನೂನನ್ನು ಅಳವಡಿಸಿಕೊಳ್ಳುತ್ತಿವೆ. ವಿಕ್ಟೋರಿಯ ರಾಜ್ಯ 2019ರಲ್ಲಿ ಮೊದಲ ಬಾರಿಗೆ ವಾಲಂಟರಿ ಅಸಿಸ್ಟೆಡ್ ಡೈಯಿಂಗ್ ಕಾನೂನು ಜಾರಿಗೆ ತಂದಿತು. ನಂತರ ವೆಸ್ಟರನ್ ಆಸ್ಟ್ರೇಲಿಯಾ, ಕ್ವೀನ್ಸ್‌ಲ್ಯಾಂಡ್, ಸೌತ್ ಆಸ್ಟ್ರೇಲಿಯಾ, ನ್ಯೂ ಸೌತ್ ವೇಲ್ಸ್ ಮತ್ತು ತಸ್ಮೇನಿಯಾ ರಾಜ್ಯಗಳೂ ಇದೇ ದಾರಿ ಹಿಡಿದವು. ಇಂದು ಆಸ್ಟ್ರೇಲಿಯಾದ ಬಹುತೇಕ ಎಲ್ಲ ರಾಜ್ಯಗಳಲ್ಲ ಈ ಕಾನೂನು ಜಾರಿಯಲ್ಲಿದೆ. ಆದರೆ ಇದಕ್ಕೆ ಕಟ್ಟುನಿಟ್ಟಾದ ನಿಯಮಗಳಿವೆ ರೋಗಿಯು ವಯಸ್ಕರಾಗಿರಬೇಕು, ಮಾರಣಾಂತಿಕ ಕಾಯಲೆಯಿಂದ ಬಳಲುತ್ತಿರಬೇಕು ಮತ್ತು ಆರು ತಿಂಗಳೊಳಗೆ ಮರಣ ಸಂಭವಿಸಲಿದೆ ಎಂದು ಎರಡು ವೈದ್ಯರು ದೃಢಪಡಿಸಬೇಕು.

ನಿಷೇಧ ಇರುವ ದೇಶಗಳು:

ಚೀನಾ, ಜಪಾನ್, ರಷ್ಯಾ, ಪಾಕಿಸ್ತಾನ, ಬಾಂಗ್ಲಾದೇಶ ಸೇರಿದಂತೆ ಬಹುತೇಕ ಏಷ್ಯನ್ ಮತ್ತು ಆಫ್ರಿಕನ್ ದೇಶಗಳಲ್ಲಿ ಇನ್ನೂ ಯುಥನೇಷಿಯಾ ಸಂಪೂರ್ಣ ನಿಷಿದ್ಧವಾಗಿದೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರಣಗಳು ಇಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.


**ರೈಟ್ ಟು ಡೈ ನ ಅನುಕೂಲಗಳು ..**

**ಮಾನವ ಘನತೆ:** ನೋವಿನಲ್ಲಿ ಒದ್ದಾಡುತ್ತಾ, ಇತರರಿಗೆ ಭಾರವಾಗಿ, ಅಸ್ತಿತ್ವ ಕಳೆದುಕೊಂಡಂತೆ ಬದುಕುವ ಬದಲು ಘನತೆಯಿಂದ ನಿರ್ಗಮಿಸಲು ಅವಕಾಶ ಸಿಗುತ್ತದೆ. ವ್ಯಕ್ತಿಯ ಸ್ವಾಯತ್ತತೆ ಮತ್ತು ಆಯ್ಕೆಯ ಸ್ವಾತಂತ್ರ್ಯ ಗೌರವಿಸಲ್ಪಡುತ್ತದೆ.

**ನೋವಿನಿಂದ ಮುಕ್ತಿ:** ಕ್ಯಾನ್ಸರ್‌ನಂತಹ ಕಾಯಿಲೆಗಳಲ್ಲಿ ಕೊನೆಯ ಹಂತದ ನೋವು ಅಸಹನೀಯ. ಅಂತಹ ಸಂದರ್ಭದಲ್ಲಿ ನೋವಿನ ಅಂತ್ಯ ಒಂದು ಮಾನವೀಯ ಪರಿಹಾರ ಎನ್ನಬಹುದು.

**ಕುಟುಂಬದ ಮೇಲಿನ ಭಾರ ಕಡಿಮೆ:** ದೀರ್ಘಕಾಲ ಅನಾರೋಗ್ಯದಲ್ಲಿ ಮಲಗಿದ ರೋಗಿಯ ಆರೈಕೆ ಮಧ್ಯಮವರ್ಗದ ಕುಟುಂಬಗಳಿಗೆ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ಭಾರಿ ಹೊರೆಯಾಗಬಹುದು. ರೋಗಿಯೇ ತನ್ನ ಕೊನೆಯ ಕ್ಷಣ ಆರಿಸಿಕೊಂಡರೆ ಆ ಹೊರೆ ತಗ್ಗುತ್ತದೆ.

**ಅಕ್ರಮ ಆತ್ಮಹತ್ಯೆ ತಡೆ:** ಕಾನೂನಿನ ನೆರವಿಲ್ಲದೆ ರೋಗಿಗಳು ಒಂಟಿಯಾಗಿ, ಅಮಾನವೀಯ ರೀತಿಯಲ್ಲಿ ಜೀವ ಕಳೆದುಕೊಳ್ಳುವ ಪ್ರಯತ್ನ ಮಾಡಬಹುದು. ಕಾನೂನುಬದ್ಧ ವ್ಯವಸ್ಥೆ ಇದ್ದರೆ ಅದು ಸುರಕ್ಷಿತ ಮತ್ತು ಮಾನವೀಯ ರೀತಿಯಲ್ಲಿ ನಡೆಯುತ್ತದೆ.





ಅಂಗಾಂಗ ದಾನಕ್ಕೆ ಅನುಕೂಲ: ನಿಯಂತ್ರಿತ ರೀತಿಯಲ್ಲಿ ಮರಣ ಸಂಭವಿಸಿದರೆ, ರೋಗಿಯು ಮೊದಲೇ ಅಂಗಾಂಗ ದಾನಕ್ಕೆ ಒಪ್ಪಿಗೆ ನೀಡಿದ್ದರೆ ಅದು ಸಾಧ್ಯವಾಗುತ್ತದೆ. ಒಂದು ಸಾವು ಇನ್ನೊಂದು ಜೀವದ ಉಳಿವಿಗೆ ಕಾರಣವಾದರೆ, ಅದು ಎಂಥ ಮಹತ್ತರವಾದ ನಿಲುವಲ್ಲವೇ

**ರೈಟ್ ಟು ಡೈ ನ ಅನಾನುಕೂಲಗಳು**

**ದುರ್ಬಳಕೆಯ ಭೀತಿ:** ಆಸ್ತಿ, ವಿಮೆ ಅಥವಾ ಇನ್ನಿತರ ಕಾರಣಗಳಿಗಾಗಿ ಕುಟುಂಬದವರು ರೋಗಿಯ ಮೇಲೆ ಒತ್ತಡ ಹಾಕಬಹುದು ಎಂಬ ಗಂಭೀರ ಆತಂಕ ಇದೆ. ದುರ್ಬಲ ವರ್ಗದ ಜನ ವೃದ್ಧರು, ಬಡವರು, ಒಂಟಿಯಾಗಿರುವವರು ಇದರ ಬಲಿಪಶುಗಳಾಗಬಹುದು.

**ವೈದ್ಯರ ನೈತಿಕ ಸಂಘರ್ಷ:** "ಜೀವ ಉಳಿಸುವೆ" ಎಂಬ ಪ್ರಮಾಣ ಸ್ವೀಕರಿಸುವ ವೈದ್ಯರು "ಜೀವನ್ಮುಕ್ತಿ ಗೊಳಿಸುವೆ" ಎಂಬ ಕೆಲಸ ಮಾಡಬೇಕಾದರೆ ಅದು ಆಂತರಿಕ ಸಂಘರ್ಷ ಉಂಟುಮಾಡುತ್ತದೆ. ಹಿಪ್ಪೋಕ್ರೇಟಿಕ್ ಪ್ರಮಾಣದ ಮೂಲ ತತ್ವಕ್ಕೆ ಇದು ವಿರುದ್ಧ ಎಂದು ಅನೇಕ ವೈದ್ಯರು ಭಾವಿಸುತ್ತಾರೆ.

**ಧಾರ್ಮಿಕ ಮತ್ತು ನೈತಿಕ ವಿರೋಧ:** ಜೀವ ನೀಡಿದ ದೇವರೊಬ್ಬನೇ ಅದನ್ನು ತೆಗೆದುಕೊಳ್ಳುವ ಅಧಿಕಾರ ಹೊಂದಿದ್ದಾನೆ ಎಂಬ ನಂಬಿಕೆ ಬಹುತೇಕ ಧರ್ಮಗಳಲ್ಲಿದೆ. ಕ್ರೈಸ್ತ, ಇಸ್ಲಾಂ, ಹಿಂದೂ ಎಲ್ಲ ಧರ್ಮಗಳಲ್ಲೂ ಇದಕ್ಕೆ ತೀವ್ರ ವಿರೋಧ ಇದೆ.

**ರೋಗನಿರ್ಣಯದಲ್ಲಿ ತಪ್ಪಾಗಬಹುದು:** "ಇನ್ನು ಆರು ತಿಂಗಳು ಮಾತ್ರ ಆಯಸ್ಸು" ಎಂದ ವೈದ್ಯರ ಮಾತು ಕೆಲವೊಮ್ಮೆ ತಪ್ಪಾಗಿ, ರೋಗಿ ಹದಿನೈದು ವರ್ಷ ಬದುಕಿದ ನಿದರ್ಶನಗಳಿವೆ. ಅಂತಹ ಸಂದರ್ಭದಲ್ಲಿ ಆತುರದ ನಿರ್ಧಾರ ಅನಾಹುತಕ್ಕೆ ಕಾರಣವಾಗುತ್ತದೆ.

ಮಾನಸಿಕ ಖಿನ್ನತೆ ಮತ್ತು ತಾತ್ಕಾಲಿಕ ನಿರ್ಧಾರ: ತೀವ್ರ ಅನಾರೋಗ್ಯದ ಸಮಯದಲ್ಲಿ ರೋಗಿ ಖಿನ್ನತೆಗೆ ಒಳಗಾಗಿರಬಹುದು. ಆ ಖಿನ್ನತೆಯ ಕ್ಷಣದಲ್ಲಿ ತೆಗೆದುಕೊಂಡ ನಿರ್ಧಾರ ನಿಜವಾದ ಇಚ್ಛೆಯೇ ಎಂದು ಹೇಗೆ ಖಚಿತಪಡಿಸಿಕೊಳ್ಳುವುದು ಖಿನ್ನತೆ ಗುಣವಾದ ನಂತರ ಬದುಕಬೇಕು ಎಂದು ಅನಿಸಿದರೆ

**ಉಪಶಾಮಕ ಚಿಕಿತ್ಸೆಗೆ ಹೊಡೆತ:** ನೋವು ನಿವಾರಣೆ ಮತ್ತು ಉಪಶಾಮಕ ಚಿಕಿತ್ಸೆಯ (Palliative Care) ಕ್ಷೇತ್ರದಲ್ಲಿ ಭಾರಿ ಪ್ರಗತಿ ಆಗಿದೆ. "ಸಾಯುವ" ಆಯ್ಕೆ ಸುಲಭವಾದರೆ, "ಉಳಿಸುವ" ಸಂಶೋಧನೆ ಮಂದಗತಿಯಲ್ಲಿ ಸಾಗಬಹುದು ಎಂಬ ಆತಂಕ ತಜ್ಞರಿಗಿದೆ.

**"ಸ್ಲಿಪರಿ ಸ್ಲೋಪ್" ಅಪಾಯ**: ಆರಂಭದಲ್ಲಿ ಕೇವಲ ಅತ್ಯಂತ ತೀವ್ರ ಪ್ರಕರಣಗಳಿಗೆ ಮಾತ್ರ ಅನ್ವಯಿಸಿದ ಕಾನೂನು ಕ್ರಮೇಣ ವಿಸ್ತರಿಸುತ್ತಾ ಹೋಗಬಹುದು ಬೆಲ್ಜಿಯಂನಲ್ಲಿ ಮಕ್ಕಳಿಗೂ ಅನ್ವಯಿಸಿದಂತೆ, ಕೆನಡಾದಲ್ಲಿ ಮಾನಸಿಕ ಅನಾರೋಗ್ಯಕ್ಕೂ ವಿಸ್ತರಿಸಿದಂತೆ. ಒಮ್ಮೆ ಬಾಗಿಲು ತೆರೆದರೆ ಮುಚ್ಚುವುದು ಕಷ್ಟ ಎಂಬ ಭೀತಿ ನ್ಯಾಯಸಮ್ಮತವಾದದ್ದೇ ಅಲ್ಲವೇ

ಸಾಯುವ ಹಕ್ಕು ಬೇಕೇ ಬೇಡವೇ ಎಂಬ ಪ್ರಶ್ನೆಗೆ ಸುಲಭದ ಉತ್ತರ ಇಲ್ಲವೇ ಇಲ್ಲ. ಇದು ಬರಿಯ ಕಾನೂನಿನ ಚೌಕಟ್ಟಿನಲ್ಲಿ ಮಾತ್ರ ನಿಲ್ಲದೆ, ಪ್ರತಿಯೊಬ್ಬ ಮನುಷ್ಯನ ಮನಃಸಾಕ್ಷಿಯನ್ನು ಕಾಡುವ ವಿಷಯ. ಬದುಕಿನ ಕೊನೆಯ ಅಧ್ಯಾಯ ಘನತೆಯಿಂದ ಇರಬೇಕು ಎಂಬ ಆಸೆ ನ್ಯಾಯಸಮ್ಮತ. ಆದರೆ ಆ ಘನತೆ ಸಾಯುವುದರಲ್ಲಿದೆಯೋ, ಅಥವಾ ಕೊನೆಯ ಉಸಿರಿನವರೆಗೂ ಜೀವಿಸಿ ತೋರಿಸುವುದರಲ್ಲಿದೆಯೋ ಎಂಬ ಯಕ್ಷಪ್ರಶ್ನೆಗೆ ಪ್ರತಿಯೊಬ್ಬರಿಗೂ ವೈಯಕ್ತಿಕ ಅಭಿಪ್ರಾಯವಿದೆ.

ಸಮಾಜ ಮಾಡಬೇಕಾದ ನಿಜವಾದ ಕೆಲಸ ಒಂದೇ ಯಾರೂ ಒಂಟಿಯಾಗಿ, ನೋವಿನಲ್ಲಿ, ನಿರ್ಲಕ್ಷ್ಯದಿಂದ ಕೊನೆಯ ದಿನಗಳನ್ನು ಕಳೆಯದಂತೆ ನೋಡಿಕೊಳ್ಳುವುದು. ಉತ್ತಮ ಉಪಶಾಮಕ ಚಿಕಿತ್ಸೆ, ಮಾನಸಿಕ ಬೆಂಬಲ, ಕುಟುಂಬದ ಅಕ್ಕರೆ ಇವು ಸಿಕ್ಕಿದ್ದರೆ ಎಷ್ಟೋ ಜನ "ನಾನು ಸಾಯಬೇಕು" ಎಂದು ಬಯಸುತ್ತಿರಲಿಲ್ಲ. ಆದ್ದರಿಂದ "ಸಾಯಿಸುವ" ಕಾನೂನಿನ ಜೊತೆಗೆ "ಚೆನ್ನಾಗಿ ಬದುಕಿಸುವ" ವ್ಯವಸ್ಥೆಯನ್ನೂ ಗಟ್ಟಿಗೊಳಿಸಬೇಕಾದ ಅಗತ್ಯ ಕೂಡಾ ಬಹಳವಾಗಿ ಇದೆ.

ಸಾವು ಸತ್ಯ. ಆದರೆ ಆ ಸಾವು ಭೀತಿಯಿಂದಲ್ಲ, ಘನತೆಯಿಂದ ಆಗಲಿ ಇದು ಮಾನವ ಜನಾಂಗದ ಸಾಮೂಹಿಕ ಜವಾಬ್ದಾರಿ!

"ಗೌರವಯುತವಾಗಿ ಬದುಕುವುದು ಎಷ್ಟು ಮುಖ್ಯವೋ, ಘನತೆಯಿಂದ ನಿರ್ಗಮಿಸುವುದು ಅಷ್ಟೇ ಮುಖ್ಯ."ಅಲ್ವೇ ಸೋ, ಈಗ ರೈಟ್ ಟು ಡೈ ಲೇಖನಕ್ಕೆ ಟೈಮ್ ಟು ಸೇ ಬೈ! ವಂದನೆಗಳು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,